ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಪಟ್ಟಿ - ೦೯

ಒಟ್ಟು ಪ್ರಶ್ನೆಗಳು - ೧೨೪

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತ ನಾಲ್ಕನೇ ಅಧಿವೇಶನ

ಗುರುವಾರ, ದಿನಾಂಕ : ೧೯ನೇ ಡಿಸೆಂಬರ್, ೨೦೨೪

---

## ಸಮೂಹ – IV

೧. ಮುಖ್ಯಮಂತ್ರಿಗಳು

೨. ಉಪ ಮುಖ್ಯಮಂತ್ರಿಗಳು

೩. ಗೃಹ ಸಚಿವರು

೪. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

೫. ಅಬಕಾರಿ ಸಚಿವರು

೬. ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

---

## ಸರ್ಕಾರದ ಗ್ಯಾರಂಟಿ ಯೋಜನೆಯಿಂದ ಆರ್ಥಿಕ ಬಿಕ್ಕಟಿನ ಬಗ್ಗೆ

**ಶ್ರೀ ಡಿ.ಎಸ್.ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೧೫ (೧೨೭೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಸಾರ್ವಜನಿಕ ವಲಯದಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳ ಅಸ್ಥಿರತೆಯ ಮನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸರ್ಕಾರಕ್ಕೆ ಹೊರೆಯಾಗಿರಬಹುದಾದ ಈ ಯೋಜನೆಗಳಿಂದ ಅಭಿವೃದ್ಧಿ ಯೋಜನೆಗಳು ಕುಂಟುತ್ತಾ ಸಾಗುತ್ತಿರುವುದು ನಿಜವೇ;

(ಇ) ಹಾಗಿದ್ದಲ್ಲಿ, ಗ್ಯಾರಂಟಿ ಯೋಜನೆಗಳ ಮತ್ತು ಅಭಿವೃದ್ಧಿ ಯೋಜನೆಗಳ ಬಗ್ಗೆ ಸರ್ಕಾರ ಯಾವ ರೀತಿಯಲ್ಲಿ ಸಮತೋಲನವನ್ನು ಕಾಯ್ದುಕೊಂಡಿದೆ?

## ರಾಜ್ಯದಲ್ಲಿ ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಜನ ಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೧೬ (೧೨೮೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಜನಪ್ರತಿನಿಧಿಗಳು, ಸರ್ಕಾರಿ ಅಧಿಕಾರಿ/ನೌಕರರುಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರಗಳನ್ನು ಒದಗಿಸುವುದು)

(ಆ) ಎಷ್ಟು ಪ್ರಕರಣಗಳಲ್ಲಿ ಆರೋಪ ಪಟ್ಟಿ ಸಲ್ಲಿಸುವ ಸಲುವಾಗಿ ಲೋಕಾಯುಕ್ತ ಕಛೇರಿಯ ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವನೆಗಳನ್ನು

ಸಲ್ಲಿಸಿದೆ; ಈ ಪೈಕಿ ಎಷ್ಟು ಪ್ರಕರಣಗಳಿಗೆ ಸಕ್ಷಮ ಪ್ರಾಧಿಕಾರಗಳು ಅನುಮತಿಯನ್ನು ನೀಡಿದೆ;

(ಇ) ಬಾಕಿ ಉಳಿದ ಪ್ರಕರಣಗಳಿಗೆ ಅನುಮತಿ ನೀಡದಿರಲು ಕಾರಣಗಳೇನು; (ವಿವರಿಸುವುದು)

(ಈ) ಪ್ರಸ್ತಾವ ಸಲ್ಲಿಸಿದ ಮೂರು ತಿಂಗಳೊಳಗೆ ಸಕ್ಷಮ ಪ್ರಾಧಿಕಾರವು ತೀರ್ಮಾನ ಕೈಗೊಳ್ಳಬೇಕೆಂಬುದನ್ನು ಕೇಂದ್ರ ಸರ್ಕಾರವು ಕಡ್ಡಾಯಗೊಳಿಸಿದ್ದರೂ ಅನುಮತಿ ನೀಡದಿರುವ ಉದ್ದೇಶಗಳೇನು; (ವಿವರ ನೀಡುವುದು)

(ಉ) ಈ ವಿಳಂಬವನ್ನು ತಪ್ಪಿಸಲು ಸರ್ಕಾರವು ಒಪ್ಪಿಕೊಂಡು ಕೂಡಲೇ ಅನುಮತಿ ನೀಡಲಾಗುವುದೇ?

## ಎಫ್.ಐ.ಆರ್ ದಾಖಲಾದರೂ ಕಾನೂನು ಕ್ರಮ ಕೈಗೊಳ್ಳದೇ ಇರುವ ಬಗ್ಗೆ

**ಡಾ॥ ಚಂದ್ರಶೇಖರ ಬಸವರಾಜ ಪಾಟೀಲ್ (ಪದವೀಧರರ ಕ್ಷೇತ್ರ):-**

೧೦೧೭ (೧೧೭೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಿನಾಂಕ:೦೮.೧೦.೨೦೨೪ ರಂದು ಬೀದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕಿನ ಹಳ್ಳಿಖೇಡ ಬಿ ಪಟ್ಟಣದ ಪುರಸಭೆ ಅಧ್ಯಕ್ಷ ಮತ್ತು ಉಪಾಧ್ಯಾಕ್ಷರ ಕೊಠಡಿ ಉದ್ಘಾಟನೆ ಸಮಾರಂಭದಲ್ಲಿ ಗಲಭೆ/ಘಟನೆ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಘಟನೆ ಪೂರ್ಣ ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಈ ಘಟನೆ ಸಂಬಂಧವಾಗಿ ದಿನಾಂಕ: ೧೦.೧೦.೨೦೨೪ರ ಹಳ್ಳಿಖೇಡ್ ಬಿ ಪೊಲೀಸ್ ಠಾಣೆಯಲ್ಲಿ

ಎಫ್.ಐ.ಆರ್ ದಾಖಲಾಗಿರುವುದು ನಿಜವಲ್ಲವೇ; (ಎಫ್.ಐ.ಆರ್ ದಾಖಲಾಗಿರುವವರ ಹೆಸರು ಸಮೇತ ವಿವರ ಒದಗಿಸುವುದು)

(ಇ) ಮೇಲ್ಕಂಡ ಪ್ರಕರಣದಲ್ಲಿ ಮೊದಲು ಹಳ್ಳಿಖೇಡ ಬಿ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಿಸಿ ಅನಂತರ ಈ ಪ್ರಕರಣವನ್ನು ಬೀದರ್ ಗಾಂಧಿ ಗಂಜ್ ಪೊಲೀಸ್ ಠಾಣೆಗೆ ವರ್ಗಾಯಿಸಿರುವುದಕ್ಕೆ ಕಾರಣವೇನು;

(ಈ) ಮೇಲ್ಕಂಡ ಪ್ರಕರಣ ದಾಖಲಾಗಿ ಸುಮಾರು ೨ ತಿಂಗಳಾದರೂ ಪ್ರಕರಣದಲ್ಲಿ ಭಾಗಿಯಾಗಿರುವವರ ವಿರುದ್ಧ ಇಲ್ಲಿಯವರೆಗೆ ಯಾವುದೇ ಕ್ರಮಗಳನ್ನು ಕೈಗೊಳ್ಳದಿರಲು ಕಾರಣವೇನು;

(ಉ). ಮೇಲ್ಕಂಡ ಪ್ರಕರಣದ ಬಗ್ಗೆ ಹಾಗೂ ಭಾಗಿಯಾಗಿರುವವರ ಬಗ್ಗೆ ಕ್ರಮ ಕೈಗೊಳ್ಳುವಲ್ಲಿ ವಿಳಂಬವಾಗಿರುವುದು ಇಲಾಖೆಯ ವೈಫಲ್ಯಕ್ಕೆ ಕಾರಣವಾಗಿರುವುದು ನಿಜವಲ್ಲವೇ; ಹಾಗಿದ್ದಲ್ಲಿ ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟ ಆರೋಪಿಗಳ ಮೇಲೆ ತುರ್ತಾಗಿ ಕಠಿಣ ಕ್ರಮಗಳನ್ನು ಕೈಗೊಳ್ಳುವುದೇ?

## ಆನ್‌ಲೈನ್ ಗೇಮ್ ಬ್ಯಾನ್/ನಿಯಂತ್ರಿಸುವ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೧೮ (೧೨೭೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಗೇಮ್ ಆಡುವವರ ಸಂಖ್ಯೆ ಜಾಸ್ತಿ ಆಗುತ್ತಿದ್ದು, ಇಂದಿನ ಯುವಕರು ಆನ್‌ಲೈನ್ ಗೇಮ್‌ಗೆ ಅಡಿಕ್ಟ್ ಆಗಿ ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದು,

ಈ ರೀತಿಯ ಆಟಗಳ ಗೀಳಿಗೆ ಬಿದ್ದು ಹಲವರು ತಮ್ಮ ಜೀವನವನ್ನೇ ಕಳೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ರಾಜ್ಯದಲ್ಲಿ ಕಳೆದ ೩ ವರ್ಷಗಳಲ್ಲಿ ಆನ್‌ಲೈನ್ ಗೇಮ್‌ಗಳಿಂದ ಹಣ ಕಳೆದುಕೊಂಡು ಆತ್ಮಹತ್ಯೆ ಪ್ರಯತ್ನ ಹಾಗೂ ಆತ್ಮಹತ್ಯೆ ಮಾಡಿಕೊಂಡಿರುವವರ ಸಂಖ್ಯೆ ಎಷ್ಟು;

(ಇ) ಆನ್‌ಲೈನ್ ಗೇಮ್ ಬ್ಯಾನ್ ಮಾಡಲು ಅಥವಾ ನಿಯಂತ್ರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)

## ಕ್ರೀಡಾ ವಸತಿ ಶಾಲೆಗಳ ನಿರ್ಮಾಣ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೧೯ (೧೨೭೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಕ್ರೀಡಾ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ವಿದ್ಯಾರ್ಥಿಗಳಲ್ಲಿ ಕ್ರೀಡೆಯನ್ನು ಪ್ರೋತ್ಸಾಹಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಇ) ವಿದ್ಯಾರ್ಥಿಗಳಲ್ಲಿ ಕ್ರೀಡೆಯನ್ನು ಪ್ರೋತ್ಸಾಹಿಸಲು ಯಾವುದಾದರೂ ನೂತನ ಯೋಜನೆಗಳ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)

(ಈ) ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಹೊಸದಾಗಿ ಸರ್ಕಾರಿ ಕ್ರೀಡಾ ವಸತಿ ಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

(ಉ) ಇದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)

## ಸಿಗ್ನಲ್ ದೀಪವನ್ನು ಅಳವಡಿಸುವ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೨೦ (೧೨೭೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರಿನ ಜೀವನ್ ಭೀಮಾ ನಗರದ ಮುಖ್ಯರಸ್ತೆಯ ತಿರುವಿನಲ್ಲಿ ವಾಹನ ದಟ್ಟಣೆಯಿಂದಾಗಿ ರಸ್ತೆ ದಾಟಲು ಪಾದಚಾರಿಗಳಿಗೆ ತುಂಬಾ ಕಷ್ಟಕರವಾಗುತ್ತಿರುವುದಲ್ಲದೆ ಈ ಸ್ಥಳದಲ್ಲಿ ಅನೇಕ ಅಪಘಾತಗಳು ನಡೆಯುತ್ತಿದ್ದು ಇತ್ತೀಚೆಗೆ ಅಪಘಾತಯೊಂದರಲ್ಲಿ ಮಗುವೊಂದು ಮರಣಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹೌದಾದಲ್ಲಿ, ಸದರಿ ತಿರುವಿನಲ್ಲಿ ಸಿಗ್ನಲ್ ದೀಪಗಳನ್ನು ಅಳವಡಿಸಿ ವಾಹನ ದಟ್ಟಣೆ ನಿರ್ವಹಿಸಲು ಸಂಚಾರಿ ಪೋಲೀಸ್ ಒಬ್ಬರನ್ನು ನಿಯೋಜಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

(ಇ) ಯಾವ ಕಾಲಮಿತಿಯೊಳಗೆ ಸದರಿ ತಿರುವಿನಲ್ಲಿ ಸಿಗ್ನಲ್ ದೀಪವನ್ನು ನಿರ್ವಹಿಸಲು ಸಂಚಾರಿ ಪೋಲೀಸರನ್ನು ನಿಯೋಜಿಸಲಾಗುವುದು? (ವಿವರ ನೀಡುವುದು)

## ತುಮಕೂರು ನಗರದವರೆಗೂ ನಮ್ಮ ಮೆಟ್ರೋ ವಿಸ್ತರಿಸುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ):-**

೧೦೨೧ (೧೨೩೬) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ನಮ್ಮ ಮೆಟ್ರೋದಲ್ಲಿ ಪ್ರತಿನಿತ್ಯ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಎಷ್ಟು; ನಗರದ ಮುಂದಿನ ಐದು ವರ್ಷಗಳಲ್ಲಿ ನಗರದ ಯಾವ ಭಾಗಗಳಿಗೆ ಸಂಪರ್ಕ ಕಲ್ಪಿಸಲು ಉದ್ದೇಶಿಸಲಾಗಿದೆ; ನಮ್ಮ ಮೆಟ್ರೋ ನಿಲ್ದಾಣಗಳಲ್ಲಿ ಇರುವ ಪಾರ್ಕಿಂಗ್ ಶುಲ್ಕ ದುಬಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ಪಾರ್ಕಿಂಗ್ ಶುಲ್ಕ ಕಡಿಮೆ ಮಾಡುವ ಸಲುವಾಗಿ ಸರ್ಕಾರ ಕೈಗೊಂಡಿರುವ ಕ್ರಮವೇನು;

(ಆ) ನಮ್ಮ ಮೈಟ್ರೋ ನಿಲ್ದಾಣದ ಸಮೀಪ ಹಲವು ಕಡೆಗಳಲ್ಲಿ ನಾಲ್ಕು ಚಕ್ರದ ವಾಹನಗಳಿಗೆ ಸೂಕ್ತ ಪಾರ್ಕಿಂಗ್ ಸೌಲಭ್ಯವಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪಾರ್ಕಿಂಗ್ ಸೌಲಭ್ಯ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು;

(ಇ) ತುಮಕೂರು-ಬೆಂಗಳೂರು ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಂಚಾರ ದಟ್ಟಣೆ ನಿಯಂತ್ರಿಸಲು ನಮ್ಮ ಮೆಟ್ರೋದ ಸಂಪರ್ಕವನ್ನು ತುಮಕೂರುವರೆಗೂ ವಿಸ್ತರಿಸುವ ಕಾರ್ಯಸಾಧ್ಯತಾ ವರದಿ ತಯಾರಿಸುವ ಬಗ್ಗೆ ಕಳೆದ ಬಜೆಟ್‌ನಲ್ಲಿ ಘೋಷಣೆಯಾಗಿತ್ತೇ; ಘೋಷಣೆಯಾಗಿದ್ದರೆ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; ಯಾವ ಕಾಲಮಿತಿಯಲ್ಲಿ ತುಮಕೂರುವರೆಗೂ ನಮ್ಮ ಮೆಟ್ರೋ ವಿಸ್ತರಣೆ ಮಾಡಲಾಗುವುದು?

## ರಾಜ್ಯದಲ್ಲಿ ಸೈಬರ್ ಅಪರಾಧಗಳ ನಿಯಂತ್ರಣದ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ):-**

೧೦೨೨ (೧೨೩೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಇರುವ ಸೈಬರ್ ಠಾಣೆಗಳ ಸಂಖ್ಯೆ ಎಷ್ಟು; ಅವುಗಳಿಗೆ ಮಂಜೂರಾಗಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು;

(ಆ) ಕಳೆದ ಐದು ವರ್ಷಗಳಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳು ಎಷ್ಟು ಅವುಗಳಿಂದ ಸಾರ್ವಜನಿಕರು ಕಳೆದುಕೊಂಡ ಹಣವೆಷ್ಟು ಅವುಗಳಲ್ಲಿ ಎಷ್ಟು ಅಪರಾಧಿಗಳನ್ನು ಪತ್ತೆಹಚ್ಚಲಾಗಿದೆ; ಪತ್ತೆ ಹಚ್ಚಲಾಗದ ಪ್ರಕರಣಗಳು ಎಷ್ಟು;

(ಇ) ಸೈಬರ್ ಅಪರಾಧ ಪತ್ತೆಹಚ್ಚಲು ವಿಶೇಷ ತಾಂತ್ರಿಕ ಪರಿಣಿತರನ್ನು ನೇಮಕ ಮಾಡಲು ಅಥವಾ ಪೊಲೀಸ್ ಸಿಬ್ಬಂದಿಗೆ ತರಬೇತಿ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ಹ್ಯಾಕಿಂಗ್ ಕೃತ್ಯಗಳು ಸಹ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಹ್ಯಾಕರ್ ಕೃತ್ಯವನ್ನು ಭೇದಿಸಲು ಹ್ಯಾಕಿಂಗ್ ಪ್ರಕರಣಗಳನ್ನು ಪತ್ತೆಹಚ್ಚಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ನೈಸ್ ಸಂಸ್ಥೆಯಿಂದ ಹಿಂಪಡೆದ ಭೂಮಿಯ ಬಳಕೆ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ):-**

೧೦೨೩ (೧೨೩೯) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ನೈಸ್ ಸಂಸ್ಥೆಯ ರಸ್ತೆ ಮತ್ತು ಇತರ ಉದ್ದೇಶಗಳಿಗೆ ಸ್ವಾಧೀನ ಪಡಿಸಿಕೊಂಡಿದ್ದ ಎಷ್ಟು ಭೂಮಿಯನ್ನು ಸರ್ಕಾರಕ್ಕೆ ಹಿಂತಿರುಗಿಸಲಾಗಿದೆ; (ಸರ್ವೆ ನಂ ಸಹಿತ ಸದರಿ ಭೂಮಿಯ ವಿವರ ನೀಡುವುದು) ಮಾಡಿಸಿಕೊಂಡ. ಭೂಮಿಯನ್ನು ರೈತರಿಗೆ

ಹಿಂತಿರುಗಿಸಲಾಗುವುದೇ; ಅಥವಾ ಅನ್ಯ ಉದ್ದೇಶಕ್ಕೆ ಬಳಸಲಾಗುವುದೇ ಯಾವ ಉದ್ದೇಶಕ್ಕೆ ಎಷ್ಟು ವಿಸ್ತೀರ್ಣದ ಭೂಮಿ ಬಳಸಲಾಗುವುದು)

(ಆ) ಹಿಂತಿರುಗಿಸಲಾದ ಭೂಮಿಯಲ್ಲಿ ಬಿಬಿಎಂಪಿ ತ್ಯಾಜ್ಯವಿಲೇವಾರಿ ಘಟಕ ನಿರ್ಮಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ;

(ಇ) ಸದರಿ ಭೂಮಿಯು ಹಲವು ವಸತಿ ಪ್ರದೇಶಕ್ಕೆ ಹೊಂದಿಕೊಂಡಂತೆ ಇದ್ದು, ಇಲ್ಲಿ ತ್ಯಾಜ್ಯವಿಲೇವಾರಿ ಘಟಕ ನಿರ್ಮಿಸಿದಲ್ಲಿ ಇಲ್ಲಿ ವಾಸವಿರುವ ಸಾರ್ವಜನಿಕರಿಗೆ ಮತ್ತು ರಸ್ತೆಯಲ್ಲಿ ಸಂಚರಿಸುವವರಿಗೆ ಸಮಸ್ಯೆಯುಂಟಾಗುವುದಿಲ್ಲವೇ?

## ರಾಜ್ಯದಲ್ಲಿ ಗಾಂಜಾ ಮತ್ತು ಡ್ರಗ್ಸ್ ಮಾರಾಟ ಮತ್ತು ಸೇವನೆ ಪ್ರಕರಣಗಳ ಬಗ್ಗೆ

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೨೪ (೧೨೫೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರಸಕ್ತ ಸಾಲಿನಲ್ಲಿ ಗಾಂಜಾ ಮತ್ತು ಡ್ರಗ್ಸ್ ಮಾರಾಟ ಪ್ರಕರಣಗಳು ಎಷ್ಟು ದಾಖಲಾಗಿದೆ; ಎಷ್ಟು ಜನರನ್ನು ಬಂಧಿಸಲಾಗಿದೆ; ಎಷ್ಟು ಪ್ರಮಾಣದ ಡ್ರಗ್ಸ್ ಮತ್ತು ಗಾಂಜಾ ವಶಪಡಿಸಿಕೊಳ್ಳಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಮಾದಕ ವ್ಯಸನ ಮತ್ತು ಕಳ್ಳಸಾಗಣಿ ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಗಾಂಜಾ ಮತ್ತು ಡ್ರಗ್ಸ್ ಸೇವನೆಯ ಎಷ್ಟು ಯುವಕರನ್ನು ರಕ್ಷಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಶಿಕ್ಷಣ ಸಂಸ್ಥೆಗಳ ಸಮೀಪ ಸೇರಿದಂತೆ ರಾಜ್ಯದಲ್ಲಿ ಗಾಂಜಾ ಮಾರಾಟ ಮತ್ತು ಸೇವನೆ ತಡೆಗೆ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ; ಡ್ರಗ್ಸ್ ಮುಕ್ತ ಸಮಾಜ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡಿರುವ ದಿಟ್ಟ ಕ್ರಮಗಳೇನು ಹಾಗೂ ಪೊಲೀಸ್ ಠಾಣೆಗಳಿಂದ ಮಾದಕ ವ್ಯಸನದ ದುಷ್ಪರಿಣಾಮಗಳ ಕುರಿತಂತೆ ಜಾಗೃತಿ ಮೂಡಿಸಲು ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ; ಎಲ್ಲೆಲ್ಲಿ ಜಾಗೃತಿ ಕಾರ್ಯಕ್ರಮ ನಡೆಸಲಾಗಿದೆ;

(ಈ) ಮಾದಕ ವ್ಯಸನಕ್ಕೆ ಒಳಗಾಗಿರುವ ಶಾಲಾ, ಕಾಲೇಜು ಮಕ್ಕಳನ್ನು ಪತ್ತೆಹಚ್ಚಲು ಯಾವ ಕ್ರಮಗಳನ್ನು ಕೈಗೊಂಡಿದೆ; ಅವರನ್ನು ವ್ಯಸನ ಮುಕ್ತರಾಗಿಸಲು ಕೈಗೊಂಡಿರುವ ಕ್ರಮಗಳೇನು;

(ಉ) ನೂತನ ವರ್ಷಾಚರಣೆ ಹಿನ್ನೆಲೆಯಲ್ಲಿ ಮಾದಕ ವಸ್ತುಗಳ ಅಕ್ರಮ ಸಾಗಣೆ ಕುರಿತಂತೆ ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ;

(ಊ) ಡ್ರಗ್ಸ್ ದಂಧೆ ತಡೆಗೆ ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ (ಎನ್.ಸಿ.ಬಿ) ಮಾದರಿಯಲ್ಲಿ ರಾಜ್ಯದಲ್ಲಿ ಮಾದಕ ದ್ರವ್ಯ ನಿಗ್ರ ಪಡೆ (ಎ.ಎನ್.ಟಿ.ಎಫ್) ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಡ್ರಗ್ಸ್ ಜಾಲ ನಿರ್ಮೂಲನೆಗೆ ಟಾಸ್ಕ್ ಫೋರ್ಸ್ ರಚನೆ ಮಾಡಲಾಗಿದೆಯೇ? (ಆಗಿದ್ದಲ್ಲಿ, ಸಂಪೂರ್ಣ ವಿವರಗಳನ್ನು ಒದಗಿಸುವುದು)

## ಕಾವೇರಿ ಜಲಾನಯನ ಪ್ರದೇಶದಲ್ಲಿ ಬರುವ ಅಣೆಕಟ್ಟು ಹಾಗೂ ನಾಲೆಗಳ ಬಗ್ಗೆ

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೨೫ (೧೨೫೩) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಾವೇರಿ ಜಲಾನಯನ ಪ್ರದೇಶದಲ್ಲಿ ಬರುವ ಅಣೆಕಟ್ಟುಗಳು ಎಷ್ಟು; ಪ್ರಸ್ತುತ ಈ ಜಲಾನಯನ ವ್ಯಾಪ್ತಿಯಲ್ಲಿನ ಅಣೆಕಟ್ಟುಗಳಲ್ಲಿನ ನೀರಿನ ಪ್ರಮಾಣ ಎಷ್ಟಿದೆ; ಅಣೆಕಟ್ಟುಗಳ ಸುರಕ್ಷತೆ ಹಾಗೂ ದುರಸ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

(ಆ) ಪ್ರಸಕ್ತ ವರ್ಷ ಈ ಜಲಾನಯನ ಪ್ರದೇಶದಿಂದ ತಮಿಳುನಾಡಿಗೆ ಎಷ್ಟು ಟಿಎಂಸಿ ನೀರು ಬಿಡಲಾಗಿದೆ; ಎಷ್ಟು ಟಿಎಂಸಿ ಬಿಡಬೇಕಿತ್ತು; ಹೆಚ್ಚುವರಿಯಾಗಿ ಎಷ್ಟು ಟಿಎಂಸಿ ನೀರು ಬಿಡುಗಡೆ ಮಾಡಲಾಗಿದೆ;

(ಇ) ಈ ಜಲಾನಯನ ಭಾಗದ ಅಣೆಕಟ್ಟುಗಳ ಗೇಟ್‌ಗಳು ಸುರಕ್ಷಿತವಾಗಿವೆಯೆ; ಅಥವಾ ದುರಸ್ತಿಯಾಗಬೇಕೆ ದುರಸ್ತಿ ಮಾಡಿದ್ದರೆ ಯಾವ ತಂತ್ರಜ್ಞಾನ ಬಳಸಲಾಗಿದೆ; (ಸಂಪೂರ್ಣ ವಿವರಗಳನ್ನು ಒದಗಿಸುವುದು)

(ಈ) ಮಂಡ್ಯ ಜಿಲ್ಲೆಯ ಮಳವಳ್ಳಿ, ಮದ್ದೂರು, ಕೊಪ್ಪ ಸೇರಿದಂತೆ ನಾಲೆಯ ಕೊನೆ ಭಾಗಗಳಿಗೆ ಸುಲಲಿತವಾಗಿ ನೀರು ಹರಿಸಲು ನಾಲೆಗಳ ಆಧುನಿಕತೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ಸಂಪೂರ್ಣ ವಿವರ ಒದಗಿಸುವುದು)

## ಕಾವೇರಿ ನದಿಗೆ ಗಂಗಾರತಿ ರೀತಿ ಆರತಿ ಮಾಡುವ ಬಗ್ಗೆ

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೨೬ (೧೨೫೪) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹರಿದ್ವಾರ, ವಾರಣಾಸಿಯಲ್ಲಿ ಗಂಗಾ ನದಿಗೆ ನೆರವೇರಿಸುವ ಗಂಗಾರತಿ ಮಾದರಿಯಲ್ಲಿ ದಕ್ಷಿಣ ಭಾರತದ ಪವಿತ್ರ ನದಿ ಕಾವೇರಿ

ನದಿಗೆ ಕಾವೇರಿ ಆರತಿ ಮಾಡುವ ಪ್ರಸ್ತಾವ ಸರ್ಕಾರದ ಮುಂದಿದೆಯೇ; ಆಗಿದ್ದಲ್ಲಿ, ಯಾರಿಗೆ ಇದರ ಜವಾಬ್ದಾರಿ ನೀಡಲಾಗಿದೆ;

(ಆ) ಕಾವೇರಿ ಆರತಿಯನ್ನು ಯಾವ ಸ್ಥಳದಲ್ಲಿ ಮಾಡಲು ಸರ್ಕಾರ ನಿರ್ಧರಿಸಲಾಗಿದೆ ಹಾಗೂ ಯಾವ ಕಾಲಮಿತಿಯೊಳಗಾಗಿ ಪ್ರಾರಂಭಿಸಲಾಗುವುದು;

(ಇ) ಗಂಗಾರತಿ ವೀಕ್ಷಿಸಲು ವಾರಣಾಸಿ ಮತ್ತು ಹರಿದ್ವಾರಕ್ಕೆ ತೆರಳಿದ್ದ ಸಚಿವರ ನಿಯೋಗ ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ; ಆಗಿದ್ದಲ್ಲಿ ಅದರ ವರದಿ ನೀಡುವುದು;

(ಈ) ಕಾವೇರಿ ಆರತಿ ಕಾರ್ಯಕ್ರಮದ ರೂಪುರೇಷೆ ಸಿದ್ಧಗೊಂಡಿದೆಯೇ? (ಸಂಪೂರ್ಣ ವಿವರ ಒದಗಿಸುವುದು)

## ರಾಜ್ಯದಲ್ಲಿ ನಡೆಯುತ್ತಿರುವ ಆನ್‌ಲೈನ್ ವಂಚನೆಗಳ ಕುರಿತು

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೨೭ (೧೨೨೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಆನ್‌ಲೈನ್ ವಂಚನೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಕಳೆದ ನಾಲ್ಕು ವರ್ಷಗಳಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ; (ವಿವರವಾಗಿ ಮಾಹಿತಿ ನೀಡುವುದು)

(ಇ) ಸದರಿ ೨ ವರ್ಷಗಳಲ್ಲಿ ನಡೆದಿರುವ ಆನ್‌ಲೈನ್ ವಂಚನೆಗಳಲ್ಲಿ ಅತಿ ಹೆಚ್ಚು ಪ್ರಕರಣಗಳ ರಾಜಧಾನಿ ಬೆಂಗಳೂರಿನಲ್ಲಿ ನಡೆದಿರುವುದು

ಸರ್ಕಾರದ ಗಮನಕ್ಕೆ ಬಂದಿದೆಯೆ; (ಸಂಪೂಣ ಮಾಹಿತಿ ಒದಗಿಸುವುದು)

(ಈ) ಸದರಿ ಆನ್‌ಲೈನ್ ವಂಚನೆಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕಠಿಣ ಕ್ರಮಗಳೇನು? (ವಿವರವಾಗಿ ಮಾಹಿತಿ ನೀಡುವುದು)

## ಬೆಂಗಳೂರು ಜಿಲ್ಲೆಯ ಅನೇಕಲ್ ತಾಲ್ಲೂಕಿನ ಏತ ನೀರಾವರಿ ಯೋಜನೆಯ ಬಗ್ಗೆ

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೨೮ (೧೨೩೦) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರ ಜಿಲ್ಲೆ ಮತ್ತು ಆನೇಕಲ್ ತಾಲ್ಲೂಕಿನಲ್ಲಿ ಕೆಸಿ ವ್ಯಾಲಿ ಯೋಜನೆ ಏತ ನೀರಾವರಿ ಯೋಜನೆಯಡಿಯಲ್ಲಿ ಎಷ್ಟು ಕೆರೆಗಳಿಗೆ ನೀರು ತುಂಬಲಾಗಿದೆ; (ಸಂಪೂರ್ಣ ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಏತ ನೀರಾವರಿ ಯೋಜನೆಯಡಿಯಲ್ಲಿ ಎಷ್ಟು ಕೆರೆಗಳಿಗೆ ನೀರು ತುಂಬಿಸಲಾಗಿದೆ ಮತ್ತು ಬಾಕಿ ಉಳಿದ ಕೆರೆಗಳ ಸಂಖ್ಯೆ ಎಷ್ಟು ಮತ್ತು ಯಾವ ಕಾರಣಕ್ಕಾಗಿ ನೀರು ತುಂಬಲು ಸಾಧ್ಯವಾಗುವುದಿಲ್ಲ; (ಇದರ ವಿವರ ನೀಡುವುದು)

(ಇ) ಏತ ನೀರಾವರಿ ಯೋಜನೆಯ ಮುಖಾಂತರ ಸರ್ಕಾರವು ಎಷ್ಟು; (ಎಂ.ಎಲ್.ಡಿ) ನೀರನ್ನು ಕೆರೆಗಳಿಗೆ ಬಿಡಲಾಗುತ್ತಿದೆ; ಗರಿಷ್ಠ ನೀರಿನ ಮೊತ್ತವೆಷ್ಟು ಮತ್ತು ಕೆರೆಗಳಿಗೆ ಕನಿಷ್ಠ ಎಷ್ಟು ನೀರನ್ನು ಬಿಡಲಾಗುತ್ತಿದೆ? (ಸಂಪೂರ್ಣ ವಿವರ ನೀಡುವುದು)

## ಡಾ॥ ಶಿವರಾಮ ಕಾರಂತ ಬಡಾವಣೆಯಲ್ಲಿ ನಿವೇಶನಗಳ ನಿರ್ಧಾರದ ಬಗ್ಗೆ

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೨೯ (೧೨೩೧) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಿದ ವತಿಯಿಂದ ನಿರ್ಮಾಣ ಮಾಡುತ್ತಿರುವ ಡಾ॥ ಶಿವರಾಮ ಕಾರಂತ ಬಡಾವಣೆಯಲ್ಲಿ ರಚಿಸಿರುವ ಒಟ್ಟು ನಿವೇಶನಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ರೈತರಿಗೆ ವಿತರಿಸುವ ನಿವೇಶನಗಳ ಸಂಖ್ಯೆ ಎಷ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಂಚಿಕೆಗೆ ಉಳಿಯುವ ನಿವೇಶನಗಳಿಷ್ಟು; (ವಿವರಗಳನ್ನು ಚದರ ಮೀಟರ್/ಅಡಿಯಲ್ಲಿ ನೀಡುವುದು)

(ಆ) ಸದರಿ ಬಡಾವಣೆ ನಿರ್ಮಾಣಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ತಗಲುವ ಒಟ್ಟು ವೆಚ್ಚವೆಷ್ಟು;

(ಇ) ೨೦೨೩ರ ಮಂಡಳಿ ಸಭೆಯಲ್ಲಿ ಪ್ರತಿ ಚದರ ಅಡಿಗೆ ನಿಗದಿಪಡಿಸಿ. ಸರ್ಕಾರದಿಂದ ಅನುಮೋದನೆ ಪಡೆದ ದರವೆಷ್ಟು; (ದರ ನಿಗದಿ ಆದೇಶದ ಪ್ರತಿ ಮತ್ತು ಸರ್ಕಾರದ ಅನುಮೋದನೆಯ ಪ್ರತಿಯನ್ನು ನೀಡುವುದು)

(ಈ) ೨೦೨೪ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತೊಮ್ಮೆ ದರ ಪರಿಷ್ಕರಣೆ ಮಾಡಿದೆಯೇ: ಮಾಡಿದ್ದಲ್ಲಿ ಸದರಿ ದರ ಪರಿಷ್ಕರಣೆಯ ಆದೇಶದ ಪ್ರತಿ ಮತ್ತು ಸರ್ಕಾರದ ಅನುಮೋದನೆಯ ಪ್ರತಿಯನ್ನು ನೀಡುವುದು;

(ಉ) ಸರ್ಕಾರ ಹೊಸದಾಗಿ ನಿಗದಿಪಡಿಸಿರುವ ಬೆಲೆ ಹೆಚ್ಚಾಗಿದ್ದು, ಬಡವರು ಮತ್ತು ಮಧ್ಯಮ ವರ್ಗದವರು ಕೊಳ್ಳಲು ಸಾಧ್ಯವಾಗದಿರುವುದರಿಂದ ಬೆಲೆಯನ್ನು ಕಡಿತಗೊಳಿಸಲು ಉದ್ದೇಶಿಸಿದೆಯೇ: ಉದ್ದೇಶಿಸಿದ್ದಲ್ಲಿ. ಎಷ್ಟು ಬೆಲೆಯನ್ನು ಕಡಿಮೆಗೊಳಿಸಲಾಗುವುದು?

## ಜಿಲ್ಲಾವಾರು ಕೇಡರ್ ಹುದ್ದೆಗಳಿಗೆ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿ ತಯಾರಿಸುವ ಬಗ್ಗೆ

**ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೩೦ (೧೨೩೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಒಂದೇ ದಿನಾಂಕದಂದು ಜಿಲ್ಲಾವಾರು ಕೇಡರ್‌ಗಳಿಗೆ ನೇರ ನೇಮಕಾತಿ ಮುಖಾಂತರ. ನೇಮಕಗೊಂಡ ನೌಕರರನ್ನು ಒಗ್ಗೂಡಿಸಿ ಒಂದು ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ತಯಾರಿಸುವಾಗ, ಸದರಿ ನೌಕರರ ನಡುವಿನ ಸಾಪೇಕ್ಷ ಜೇಷ್ಠತೆಯನ್ನು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು, ೧೯೫೭ರ ಯಾವ ನಿಯಮದ ಪ್ರಕಾರ ಸಿದ್ಧಪಡಿಸಬೇಕಾದದ್ದು ನಿಜವಲ್ಲವೇ;

(ಆ) ಜೇಷ್ಠತೆಗೂ ಹಾಗೂ ಹುದ್ದೆ ಸ್ಥಿರೀಕರಣಕ್ಕೂ ಏನಾದರೂ ಸಂಬಂಧವಿದೆಯೇ (is seniority linked with confirmation);

(ಇ) ಮಾನ್ಯ ರಾಜ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: ೪೬೮೫-೪೬೮೮/೧೯೯೫ Lingaiah K and others vs. State and Others. ರ ಆದೇಶದ ಪ್ಯಾರಾ ೩೩ರ

ಕರ್ನಾಟಕ ಸರ್ಕಾರ ನೌಕರರ (ಜೇಷ್ಠತಾ) ನಿಯಮಗಳು, ೧೯೫೭ರ ನಿಯಮ ೫ ಎಷ್ಟು ಅವಧಿಯವರೆಗೆ ಜಾರಿಯಲ್ಲಿರುತ್ತದೆ:

(ಈ) ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣೆ) ನಿಯಮಗಳು ೧೯೭೭ರ ನಿಯಮ ೯ರನ್ವಯ ಹುದ್ದೆ ಸ್ಥಿರೀಕರಣದ (confirmation) ಅಂಶವನ್ನು ಜೇಷ್ಠತೆ ನಿರ್ಧರಿಸುವಾಗ ಪರಿಗಣಿಸಲು ಸದರಿ ಪ್ರಕರಣದಲ್ಲಿ ತಿಳಿಸಲಾಗಿದೆಯೇ;

(ಈ) ಹಾಗಾದರೆ ಒಂದೇ ದಿನಾಂಕದಂದು ನೇರ ನೇಮಕಾತಿ ಮುಖಾಂತರ ನೇಮಕವಾದ ನೌಕರರು ಬೇರೆ-ಬೇರೆ (೨ ವರ್ಷ ಹಾಗೂ ೨ ವರ್ಷಗಳ ನಂತರ ಪರಿವೀಕ್ಷಣೆ ಅವಧಿ ಘೋಷಣೆ ಹೊಂದಿದಾಗ) ದಿನಾಂಕಗಳಲ್ಲಿ ಕ.ಸಿ.ಸ.ಸೇವಾ (ಪರಿವೀಕ್ಷಣೆ) ನಿಯಮಗಳು ೧೯೭೭ರ ನಿಯಮ ೯ರನ್ವಯ ಹುದ್ದೆ ಸ್ಥಿರೀಕರಣ ಹೊಂದಿದಾಗ, ಸದರಿ ಕೆ.ಎ.ಟಿ ಆದೇಶದಲ್ಲಿ ಸದರಿ ನೌಕರರ ನಡುವಿನ ಜೇಷ್ಠತೆಯನ್ನು ಯಾವ ರೀತಿ ನಿರ್ಧರಿಸಲು ತಿಳಿಸಲಾಗಿದೆ:

(ಉ) ಸದರಿ ಆದೇಶವು ಈ ಪ್ರಕರಣಕ್ಕೆ ಮಾತ್ರ ಸಿಮೀತವೇ ಅಥವಾ ಈ ರೀತಿಯ ಎಲ್ಲಾ ಪ್ರಕರಣಗಳಿಗೂ ಅನ್ವಯವಾಗುತ್ತವೆಯೇ?

## ಸಿಎಲ್-೭ ಪರವಾನಗಿಯ ಹೆಸರಿನಲ್ಲಿ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೩೧ (೧೧೮೧) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಅಬಕಾರಿ ಇಲಾಖೆಯ ವತಿಯಿಂದ ಸಿಎಲ್-೭ ಪರವಾನಗಿಯನ್ನು ಪಡೆಯಲು ಇರುವ ನೀತಿ ನಿಯಮಗಳೇನು; ಕಳೆದ ೧೦

ವರ್ಷದಲ್ಲಿ ಎಷ್ಟು ಬಾರಿ ನೀತಿ ನಿಯಮಗಳನ್ನು ತಿದ್ದುಪಡಿ ಮಾಡಲಾಗಿದೆ;

(ಆ) ರಾಜ್ಯಾದ್ಯಂತ ಪ್ರವಾಸೋದ್ಯಮದ ಹೆಸರಿನಲ್ಲಿ ನಿಯಮಗಳನ್ನು ಗಾಳಿಗೆ ತೂರಿ ಮದ್ಯ ಮಾರಾಟಕ್ಕೆ ಅನುಮತಿ ನೀಡಲಾಗುತ್ತಿದೆಯೇ ಹಾಗೂ ಆ ಹೆಸರಿನಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದನ್ನು ಸರ್ಕಾರ ಗಮನಹರಿಸಿದೆಯೇ;

(ಇ) ಕಳೆದ ೧೦ ವರ್ಷದಿಂದ ಇಲ್ಲಿಯವರೆಗೆ ಕೋಲಾರ, ಬೆಂಗಳೂರು ಒಳಗೊಂಡಂತೆ ರಾಜ್ಯಾದ್ಯಂತ ಎಷ್ಟು ಸಿಎಲ್–೭ ಪರವಾನಗಿಯನ್ನು ನೀಡಲಾಗಿದೆ;

(ಈ) ಸಿಎಲ್–೭ ಪರವಾನಗಿಯನ್ನು ನೀಡುವ ಸಂದರ್ಭದಲ್ಲಿ ನಿಯಮದಂತೆ ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕಾಗಿ ಅನುಮತಿ ಪಡೆಯಬೇಕಾಗಿದ್ದು, ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ಸ್ವಚ್ಛತೆ ಹಾಗೂ ಕಟ್ಟಡದಲ್ಲಿ ಅಗ್ನಿಶಾಮಕ ಸೌಲಭ್ಯವನ್ನು ಹೊಂದಿರಬೇಕೆಂದು ಕಡ್ಡಾಯವಾಗಿದೆಯೇ;

(ಉ) ಹಾಗಿದ್ದಲ್ಲಿ, ನಿಯಮದಂತೆ ನಡೆಯುತ್ತಿರುವ ಹಾಗೂ ನಿಯಮ ಉಲ್ಲಂಘಿಸಿರುವ ಮತ್ತು ಪರವಾನಗಿಯನ್ನು ಪಡೆಯದೆ ವಾಮ (ಕಳ್ಳ) ಮಾರ್ಗದಿಂದ ವ್ಯಾಪಾರ ನಡೆಸುತ್ತಿರುವವರ ಪೂರ್ಣ ಮಾಹಿತಿ ಇದೆಯೇ? (ಮಾಹಿತಿ ನೀಡುವುದು)

## ಬೆಂಗಳೂರು ನಗರ ಭಾಗದಲ್ಲಿ ಕೇಬಲ್ ವೈರ್‌ಗಳು ನೇತಾಡುತ್ತಿರುವ ಬಗ್ಗೆ

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೩೨ (೧೧೯೬) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

F-2

(ಅ) ಬೆಂಗಳೂರು ನಗರದಲ್ಲಿ ಅಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಅಳವಡಿಸಲು ಬಿಬಿಎಂಪಿಯ ಅನುಮತಿ ಅವಶ್ಯಕತೆ ಇದೆಯೇ; ಹಾಗಿದ್ದಲ್ಲಿ ಅನುಮತಿ ನೀಡುವ ಸಂದರ್ಭದಲ್ಲಿ ಪಾಲಿಕೆ ಅನುಸರಿಸುತ್ತಿರುವ ನೀತಿ ನಿಯಮಗಳೇನು;

(ಆ) ಕೇಬಲ್ ವೈರ್ ಮತ್ತು ಭೂಮಿಯನ್ನು ಅಗೆದು ಹಾಕಲಾಗುವ ಕೇಬಲ್‌ಗಳಿಂದ ಪಾಲಿಕೆಗೆ ಇದುವರೆಗೂ ಎಷ್ಟು ಹಣ ಸಂದಾಯವಾಗಿದೆ; (ಸಂದಾಯ ಮಾಡಿರುವ ಕಂಪನಿಯ ಹೆಸರು ಮತ್ತು ಮೊತ್ತದ ವಿವರ ನೀಡುವುದು)

(ಇ) ೨೦೧೯ರಂದು ಬಿಬಿಎಂಪಿ ಆಯುಕ್ತರು ಹೊರಡಿಸಿದ್ದ ಆದೇಶದಲ್ಲಿ ನಿಗದಿಪಡಿಸಿರುವ ಶುಲ್ಕಕ್ಕಿಂತ ಕಡಿಮೆ ಶುಲ್ಕ ವಸೂಲಿ ಮಾಡಿರುವುದರಿಂದ ಮೂರು ವರ್ಷಗಳ ಅವಧಿಯಲ್ಲಿ ಪಾಲಿಕೆಗೆ ಸುಮಾರು ೮೬.೬೫ ಕೋಟಿ ರೂ. ನಷ್ಟವುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದರ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ; (ಆದೇಶದ ಪ್ರತಿ ಒದಗಿಸುವುದು)

(ಈ) ಇತ್ತೀಚಿಗೆ ನಗರದ ಎಲ್ಲಾ ವಿದ್ಯುತ್ ಕಂಬ ಹಾಗೂ ಮನೆಗಳ ಮಹಡಿಗಳ ಮೇಲೆ ಅನಧಿಕೃತವಾಗಿ ಕೇಬಲ್ ವೈರ್‌ಗಳನ್ನು ಹಾಕಿರುವುದು ಪಾಲಿಕೆಯ ಗಮನಕ್ಕೆ ಬಂದಿದೆಯೇ;

(ಉ) ಬಂದಿದ್ದಲ್ಲಿ, ನಗರದ ಎಲ್ಲಾ ಭಾಗಗಳಲ್ಲೂ ಕೇಬಲ್ ವೈರ್‌ಗಳು ನೇತಾಡುತ್ತಿರುವುದನ್ನು ಅಧಿಕಾರಿಗಳು ಗಮನಹರಿಸಲಿಲ್ಲವೇ; ರಸ್ತೆ ಬದಿಯ ಮರದಿಂದ ಮರಕ್ಕೆ ಮತ್ತು ಬೀದಿ ದೀಪಗಳ ಕಂಬಳಿಗೆ ಕೇಬಲ್‌ಗಳು ನೇತಾಡುತ್ತಿರುವುದರಿಂದ ನಗರದ ಸೌಂದರ್ಯಕ್ಕೆ ಹಾಗೂ ಜೀವಗಳಿಗೆ ಮಾರಣಾಂತಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಊ) ರಸ್ತೆಗಳನ್ನು ಅಗೆದು ಹಾಕಲಾಗುತ್ತಿರುವ ಕೇಬಲ್‌ಗಳನ್ನು ಅಳವಡಿಸಿದ ನಂತರ ಅಗೆದಿರುವ ರಸ್ತೆಗಳನ್ನು ಮುಚ್ಚಬೇಕಾಗಿರುವ ಜವಾಬ್ದಾರಿ ಯಾರದ್ದು; ಹಲವಾರು ಕಡೆಗಳಲ್ಲಿ ಗುಂಡಿಗಳನ್ನು ಮುಚ್ಚಿರುವುದಿಲ್ಲ ಹಾಗೂ ಡಾಂಬರನ್ನು ಸಹ ಹಾಕಿಲ್ಲದಿರುವುದರಿಂದ ಇದರ ಪರಿಶೀಲನೆಯ ಜವಾಬ್ದಾರಿ ಯಾವ ಅಧಿಕಾರಿಯದ್ದು

## ಮಲ್ಟಿಪ್ಲೆಕ್ಸ್ ಚಿತ್ರ ಮಂದಿರದಲ್ಲಿ ದುಬಾರಿ ಟಿಕೆಟ್ ದರ ಇರುವ ಬಗ್ಗೆ

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೩೩ (೧೧೯೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರದಲ್ಲಿರುವ ಮಲ್ಟಿಪ್ಲೆಕ್ಸ್ ಚಿತ್ರ ಮಂದಿರಗಳ ಸಂಖ್ಯೆ ಎಷ್ಟು; ಕಳೆದ ೩ ವರ್ಷದಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು; (ಚಿತ್ರ ಮಂದಿರಗಳವಾರು ಮಾಹಿತಿ ಒದಗಿಸುವುದು)

(ಆ) ಚಿತ್ರ ಮಂದಿರಗಳಿಗೆ ಟಿಕೆಟ್ ದರಗಳನ್ನು ನಿಗದಿ ಮಾಡುವ ಅಧಿಕಾರ ಯಾರಿಗೆ ಇದೆ; ಚಿತ್ರ ಮಂದಿರಗಳಲ್ಲಿ ಟಿಕೆಟ್ ದರಗಳು ಏಕರೂಪದಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಹಾಗಿದ್ದರೆ, ಏಕರೂಪ ಟಿಕೆಟ್ ದರವನ್ನು ನಿಗದಿಪಡಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

(ಈ) ಕರ್ನಾಟಕದಲ್ಲಿ ಅನ್ಯ ಭಾಷಾ ಸಿನಿಮಾಗಳು ಬಿಡುಗಡೆಯಾದರೆ ೫೦೦ ರೂಗಳಿಂದ ೧೫೦೦ ರೂಪಾಯಿಗೆ ಹೆಚ್ಚು

ಮಾಡಲಾಗುತ್ತಿದ್ದು, ಇದರಿಂದ ಯಾರಿಗೆ ಅನುಕೂಲವಾಗುತ್ತದೆ; (ಸ್ಪಷ್ಟ ಮಾಹಿತಿ ಒದಗಿಸುವುದು)

(ಉ) ಕನ್ನಡ ಚಿತ್ರಗಳಿಗೂ ಸಹ ೫೦೦ ರೂ ನಿಂದ ೧೦೦೦ ರೂಗಳವರೆಗೂ ಟಿಕೆಟ್ ದರ ನಿಗದಿಪಡಿಸಿದರೆ ಕನ್ನಡ ಚಿತ್ರಗಳನ್ನು ಪ್ರೋತ್ಸಾಹ ನೀಡುವವರು ಯಾರು; ಕನ್ನಡ ಚಿತ್ರಗಳಿಗೆ ಮಲ್ಟಿಪ್ಲೆಕ್ಸ್ ಚಿತ್ರ ಮಂದಿರದಲ್ಲಿ ಕನಿಷ್ಠ ೧೦೦ ರೂ ನಿಂದ ೧೫೦ ರೂವರೆಗೂ ನಿಗದಿಪಡಿಸಲು ಸರ್ಕಾರದಿಂದ ಆದೇಶ ಹೊರಡಿಸಲು ಇರುವ ತೊಂದರೆ ಏನು;

(ಊ) ರಾಜ್ಯದಲ್ಲಿ ಪರಭಾಷಾ ಚಿತ್ರಗಳು ಬಿಡುಗಡೆಯಾದರೆ ಬೆಂಗಳೂರಿನಲ್ಲಿರುವ ಎಲ್ಲಾ ಮಲ್ಟಿಪ್ಲೆಕ್ಸ್ ಚಿತ್ರ ಮಂದಿರಗಳಲ್ಲಿ ಪ್ರದರ್ಶನಕ್ಕೆ ಅನುಕೂಲ ಮಾಡಿಕೊಡಲಾಗುತ್ತಿದ್ದು, ಇದರಿಂದ ಕನ್ನಡ ಚಿತ್ರಗಳಿಗೆ ಚಿತ್ರ ಮಂದಿರಗಳ ಕೊರತೆ ಉಂಟಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ; ಇದಕ್ಕೆ ಪರಿಹಾರ ಏನು?

## ತುಂಗಭದ್ರಾ ಡ್ಯಾಂನ ಕ್ರಸ್ಟ್ ಗೇಟ್ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೩೪ (೧೨೦೯) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ತುಂಗಭದ್ರಾ ಡ್ಯಾಂನ ಕ್ರಸ್ಟ್ ಗೇಟ್ ಮುರಿದಿರುವುದಕ್ಕೆ ನಿಖರವಾದ ಕಾರಣಗಳೇನು ಹಾಗೂ ಕಾರಣರಾದವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ; (ಮಾಹಿತಿ ನೀಡುವುದು)

(ಆ) ಸದರಿ ಗೇಟನ್ನು ದುರಸ್ತಿಗೊಳಿಸಲು ವೆಚ್ಚ ಮಾಡಲಾಗಿರುವ ಹಣವೆಷ್ಟು; (ವಿವರ ನೀಡುವುದು)

(ಇ) ದುರಸ್ತಿ ಮಾಡಿದ ಸಂಸ್ಥೆಯವರಿಗೆ ಬಿಲ್ ಪಾವತಿಸಲಾಗಿದೆಯೇ; ಸದರಿ ಸಂಸ್ಥೆಯವರಿಗೆ ಬಿಲ್ ಪಾವತಿ ಮಾಡಿದ್ದಲ್ಲಿ ಎಷ್ಟು ಮೊತ್ತ ಪಾವತಿ ಮಾಡಲಾಗಿದೆ; (ವಿವರ ನೀಡುವುದು)

(ಈ) ಹಾಗಿಲ್ಲದಿದ್ದಲ್ಲಿ ಬಿಲ್ ಮೊತ್ತವನ್ನು ಪಾವತಿಸದಿರಲು ಕಾರಣಗಳೇನು; ಎಷ್ಟು ಸಮಯದೊಳಗೆ ಬಿಲ್ ಪಾವತಿಸಲಾಗುವುದು; (ಮಾಹಿತಿ ನೀಡುವುದು)

(ಉ) ದುರಸ್ತಿ ಕಾರ್ಯವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಯೋಗದಲ್ಲಿ ಮಾಡಲಾಗಿದೆಯೇ; ಹಾಗಿದ್ದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶೇಕಡವಾರು ಪಾಲಿನ ವಿವರ ನೀಡುವುದು?

## ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮ ಹಣ ವರ್ಗಾವಣೆ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೩೫ (೧೨೧೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಾನೂನು ಬದ್ಧವಾದ ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಸೃಜನೆಯಾಗಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಕೋಟಿಗಟ್ಟಲೇ ಅಕ್ರಮ ಹಣ ವರ್ಗಾವಣೆಯ ಬಹುದೊಡ್ಡ ಹಗರಣ ಸರ್ಕಾರದ ಗಮನಕ್ಕಿದೆಯೇ; ಇದ್ದಲ್ಲಿ ತೆಗೆದುಕೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ನಿಗಮದಲ್ಲಿ ಎಷ್ಟು ಮೊತ್ತದ ಅಕ್ರಮ ಹಣ ವರ್ಗಾವಣೆ ಆಗಿದೆ; ಯಾರಿಗೆ, ಯಾವ ಖಾತೆಗೆ, ಯಾವ ದಿನಾಂಕದಂದು

ಎಷ್ಟು ಮೊತ್ತ ವರ್ಗಾವಣೆಯಾಗಿದೆ; ಅಕ್ರಮವಾಗಿ ವರ್ಗಾವಣೆಯಾದ ಹಣವನ್ನು ಮರಳಿ ಪಡೆಯಲಾಗಿದೆಯೇ; ಎಷ್ಟು ಮೊತ್ತವನ್ನು ಪಡೆಯಲಾಗಿದೆ; ಬಾಕಿ ಉಳಿದಿರುವ ಮೊತ್ತವೆಷ್ಟು; ಬಾಕಿ ಮೊತ್ತವನ್ನು ವಸೂಲಿ ಮಾಡಲು ತೆಗೆದುಕೊಂಡ ಕ್ರಮಗಳೇನು; ಸರ್ಕಾರವು ಸದರಿ ಹಣವನ್ನು ಯಾವ ಉದ್ದೇಶಕ್ಕಾಗಿ ನಿಗಮಕ್ಕೆ ಪಾವತಿ ಮಾಡಿದೆ; ಹಾಗೂ ಉದ್ದೇಶ ಈಡೇರಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಪರಿಶಿಷ್ಟ ಪಂಗಡದ ಜನರಿಗೆ ಅವಶ್ಯ ಅನುಕೂಲತೆಗಳನ್ನು ಕಲ್ಪಿಸಲು ನಿಗಮಕ್ಕೆ ಮೀಸಲಿಟ್ಟ ಹಣವು ವಿವಿಧ ಅಧಿಕಾರಿ ಹಾಗೂ ಮೇಲಾಧಿಕಾರಿಗಳ ವ್ಯಕ್ತಿಗಳ ಹೆಸರಿಗೆ ನೇರವಾಗಿ ಕೋಟಿಗಟ್ಟಲೇ ಹಣ ವರ್ಗಾವಣೆ ಆಗಿರುವುದು ಕಂಡು ಬಂದಿದ್ದು, ಯಾವೆಲ್ಲ ಕಾಣದ ಕೈಗಳು ಇವುಗಳ ಹಿಂದೆ ಇವೆ; ಅಗತ್ಯ ತನಿಖೆಯನ್ನು ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಈ ಪ್ರಕರಣದಲ್ಲಿ ಸರ್ಕಾರವು ತೆಗೆದುಕೊಂಡಿರುವ ನಿರ್ಧಾರಗಳೇನು;

(ಈ) ಪ್ರಸ್ತುತ ಈ ಪ್ರಕರಣದ ತನಿಖೆಯು ಯಾವ ಹಂತದಲ್ಲಿದೆ; ಅಕ್ರಮ ಹಣ ವರ್ಗಾವಣೆಯು ಅಧಿಕಾರ ದುರ್ವಿನಿಯೋಗ ಹಾಗೂ ಕಾನೂನು ಬಾಹಿರವಾದ ಕ್ರಮವಾದಂತಾಗುವುದಿಲ್ಲವೆ; ಇದರಲ್ಲಿ ಮೇಲುಸ್ತುವಾರಿ ವಹಿಸುತ್ತಿರುವವರ ನೈತಿಕ ಅಧಃಪತನವು ಎದ್ದು ಕಾಣಿಸಿದಂತಾಗುವುದಿಲ್ಲವೆ; ನಿಗಮದ ಹಗರಣದಲ್ಲಿ ಇನ್ನಷ್ಟು ಪ್ರಭಾವಿಗಳ ಕೈವಾಡ ಅಡಗಿರುವ ಸಾಧ್ಯತೆ ಪಾರದರ್ಶಕ ತನಿಖೆಗಾಗಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬೇಕೆಂಬ ವಿಷಯದಲ್ಲಿ ಸರ್ಕಾರವು ಯಾವ ನಿರ್ಧಾರವನ್ನು ತೆಗೆದುಕೊಂಡಿದೆ?

# ರಾಜ್ಯದಲ್ಲಿ ಸರ್ಕಾರಿ ಮತ್ತು ಸರ್ಕಾರದ ಅಧೀನದಲ್ಲಿರುವ ನಿಗಮ ಮಂಡಳಿಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೩೭ (೧೨೧೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರ ಹಾಗೂ ಸರ್ಕಾರದ ಅಧೀನದಲ್ಲಿರುವ ನಿಗಮ ಮಂಡಳಿಗಳು ಹಾಗೂ ಸಹಕಾರಿ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; ಗುತ್ತಿಗೆ ಆಧಾರದ ನೇಮಕಾತಿಯಲ್ಲಿ ಮೀಸಲಾತಿಯನ್ನು ನೀಡಲಾಗುತ್ತಿದೆಯೇ; ಯಾವ ಮೀಸಲಾತಿ ನಿಯಮಗಳಡಿ ಇದನ್ನು ನಿರ್ವಹಿಸುತ್ತಿದ್ದಾರೆ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಗುತ್ತಿಗೆ ಆಧಾರದ ನೇಮಕಾತಿಗೆ ಯಾವ ನಿಯಮಾವಳಿಗಳನ್ನು ಅನುಸರಿಸಲಾಗುತ್ತಿದೆ; ಅರ್ಹ ಅಭ್ಯರ್ಥಿಗಳು ಹಾಗೂ ತಳ ಸಮುದಾಯಗಳು ವಿಶೇಷವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶದಿಂದ ವಂಚನೆಯಾಗದಂತೆ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಸರ್ಕಾರದ ಇತ್ತೀಚಿನ ಸುತ್ತೋಲೆಯ ಪ್ರಕಾರ ಮೀಸಲಾತಿಯನ್ನು ಕಡೆಗಣಿಸಿ ಯಾರಿಗೆ ಬೇಕಾದರೂ ಹುದ್ದೆ ನೀಡಬಹುದಾದಂತಹ ಅವಕಾಶವಿದ್ದು, ರೋಸ್ಟರ್ ಬಿಂದುಗಳನ್ನು ಗುರುತಿಸಲು ಪ್ರತಿಯೊಂದು ಹುದ್ದೆಗೂ ಸಾಧ್ಯವೇ; ರೋಸ್ಟರ್ ಬಿಂದುಗಳು ಶತಾಂಶ ಬಿಂದುಗಳಾಗಿದ್ದು (೧೦೦) ಹೀಗೆ ೨೦ ಉದ್ಯೋಗಗಳು

ಎಂದು ಕನಿಷ್ಠಗೊಳಿಸಿದಾಗ ಹಾಗೂ ಆಯ್ಕೆ ಮಾಡುವ ಸಂದರ್ಭದಲ್ಲಿ ೨೦ ಕ್ಕಿಂತ ಕಡಿಮೆ ಅಂದರೆ ೧೯-೧೮-೧೭ ಹೀಗೆ ನೇಮಕಾತಿ ಮಾಡುವಾಗ ರೋಸ್ಟರ್ ಬಿಂದುಗಳನ್ನು ಪಾಲಿಸಲು ಕಷ್ಟ ಸಾಧ್ಯವಾಗುವುದಿಲ್ಲವೆ; ೨೦ ಹುದ್ದೆಗಳಿಗೆ ಹಾಗೂ ಹೆಚ್ಚಿನ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ ವೇಳೆ ಮಾತ್ರ ಮೀಸಲಾತಿ ಅನ್ವಂಯವಾಗುತ್ತದೆ ಎಂಬುವುದನ್ನು ಕೈಬಿಡಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಒಂದು ವೇಳೆ ರೋಸ್ಟರ್ ಬಿಂದುಗಳನ್ನು ನಿಗಧಿತ ಅನುಪಾತದಂತೆ ಅಳವಡಿಸದ ಪಕ್ಷದಲ್ಲಿ ಅರ್ಹರಿಗೆ ಅನ್ಯಾಯವಾಗುವುದಿಲ್ಲವೆ; ಇನ್ನು ತಡೆಯಲು ಸರ್ಕಾರದ ಸುತ್ತೋಲೆಯಲ್ಲಿ ಮಾರ್ಪಾಡುಗಳನ್ನು ಮಾಡಬಹುದಲ್ಲವೆ; ಅರ್ಹರನ್ನು ಉದ್ಯೋಗಾವಕಾಶ ವಂಚಿರಾಗದಂತೆ ಎಚ್ಚರ ವಹಿಸಬಹುದಲ್ಲವೆ;

(ಉ) ಹೊಸದಾಗಿ ನೇಮಕಾತಿ ಆಗುವ ಹಾಗೂ ಖಾಲಿ ಹುದ್ದೆಗಳ ಭರ್ತಿ ಮಾಡುವ ಸಂದರ್ಭದಲ್ಲಿ ರೋಸ್ಟರ್ ಅಂಶಗಳ ಅನುಗುಣವಾಗಿ ಮಾಡಬೇಕಾಗಿದ್ದು, ಸರ್ಕಾರದ ಇತ್ತೀಚಿನ ಸುತ್ತೋಲೆಯು ಮೀಸಲಾತಿಯನ್ನು ಕಡೆಗಣಿಸಿ ಯಾರಿಗೆ ಬೇಕಾದರೂ ಹುದ್ದೆ ನೀಡಬಹುದಾದಂತಹ ಅವಕಾಶವಿದ್ದು; ಉದ್ಯೋಗ ವಂಚಿತರ ಹಿತರಕ್ಷಣೆಯನ್ನು ಸರ್ಕಾರವು ಕಾಪಾಡುವುದೇ?

**ಬಿ.ಬಿ.ಎಂ.ಪಿ. ಚುನಾವಣೆ ಮತ್ತು ವಾರ್ಡ್‌ಗಳ ವಿಂಗಡಣೆ ಕುರಿತು**

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೩೭ (೧೨೧೨) ಮಾನ್ಯ ಉಪ ಮುಖ್ಯಮಂತಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೨೦ರಲ್ಲಿ ಕೌನ್ಸಿಲ್ ಅವಧಿ ಮುಗಿದ ನಂತರ, ಬಿಬಿಎಂಪಿಗೆ ಚುನಾವಣೆ ನಡೆಸದಿರಲು ಕಾರಣಗಳೇನು; ವಾರ್ಡ್‌ಗಳ ವಿಂಗಣೆ ಕಾರ್ಯ ಪೂರ್ಣಗೊಂಡಿದೆಯೇ; ಹಾಗಿದ್ದರೆ, ಚುನಾವಣೆ ಏಕೆ ವಿಳಂಬವಾಗುತ್ತಿದೆ; ಇಲ್ಲದಿದ್ದರೆ, ಅದು ಯಾವಾಗ ಪೂರ್ಣಗೊಳ್ಳುತ್ತದೆ;

(ಇ) ಮೀಸಲಾತಿ ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೇ; ಹಾಗಿದ್ದರೆ, ಚುನಾವಣೆ ಏಕೆ ವಿಳಂಬವಾಗುತ್ತಿದೆ; ಇಲ್ಲದಿದ್ದರೆ, ಅದನ್ನು ಯಾವಾಗ ಸಿದ್ಧಪಡಿಸಲಾಗುತ್ತದೆ; ಪಾಲಿಕೆ ಚುನಾವಣೆ ವಿಳಂಬವಾಗುವುದನ್ನು ತಪ್ಪಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಡಿಲಿಮಿಟೇಶನ್ ಮತ್ತು ಮೀಸಲಾತಿ ಪಟ್ಟಿಯನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ಸರ್ಕಾರವು ಪರಿಗಣಿಸುತ್ತದೆಯೇ; ಹಾಗಿದ್ದಲ್ಲಿ, ಅದರ ವಿವರಗಳು, ಇಲ್ಲದಿದ್ದರೆ, ಅದಕ್ಕೆ ಕಾರಣಗಳೇನು;

(ಈ) ಬಿಬಿಎಂಪಿ ಚುನಾವಣೆಯನ್ನು ಯಾವಾಗ ನಡೆಸಲು ಸರ್ಕಾರ ಮುಂದಾಗುತ್ತದೆ?

## ಡಿಸೆಂಬರ್ ೨೦೧೯ರಲ್ಲಿ ಮಂಗಳೂರಿನಲ್ಲಿ ನಡೆದ ಪ್ರತಿಭಟನೆಯ ಕುರಿತು

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೩೮ (೧೧೮೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಡಿಸೆಂಬರ್-೨೦೧೯ರಲ್ಲಿ ಮಂಗಳೂರಿನಲ್ಲಿ ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತಿದ್ದವರ ಮೇಲೆ CAA/NRC ಕಾಯ್ದೆ ತರಲು ಉದ್ದೇಶಿಸಿದ ಪ್ರತಿಭಟನೆಗಾರರ ಮೇಲೆ ಲಾಠಿ ಚಾರ್ಜ್ ಮಾಡಿ,

ಗುಂಡು ಹಾರಿಸಿ ಪ್ರಕರಣ ದಾಖಲಾದ ಕೇಸುಗಳೆಷ್ಟು; ಯಾವ ಯಾವ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದೆ; (ವಿವರ ನೀಡುವುದು)

(ಆ) ಗೋಲಿಬಾರ್ ಪ್ರಕರಣದಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು; ಇವರಿಗೆ ಪರಿಹಾರ ನೀಡಲಾಗಿದೆಯೇ; (ವಿವರ ನೀಡುವುದು)

(ಇ) ಮಾನ್ಯ ಉಚ್ಚ ನ್ಯಾಯಾಲಯಕ್ಕೆ ದಾಖಲಾದ ಪ್ರಕರಣಗಳಲ್ಲಿ ಎಷ್ಟು ಮಂದಿ ಕೇಸು ಕಾನೂನುಬಾಹಿರ ಎಂದು ರದ್ದುಪಡಿಸಲಾಗಿದೆ; (ವಿವರ ನೀಡುವುದು)

(ಈ) ಅಮಾಯಕರ ಮೇಲೆ ದಾಖಲಾದ ಕೇಸುಗಳನ್ನು ಹಿಂಪಡೆಯದಿರಲು ಕಾರಣಗಳೇನು? (ವಿವರ ನೀಡುವುದು)

## ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆ ಬಲಪಡಿಸುವ ಕುರಿತು

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೩೯ (೧೧೫೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಒಟ್ಟು ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು ಕೈಗೊಂಡ ಕಾರ್ಯಕ್ರಮಗಳೇನು;

(ಆ) ರಾಜ್ಯದಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿ ಇರುವ ಪೊಲೀಸರ ಸಂಖ್ಯೆಯೆಷ್ಟು; ಇನ್ನೂ ಬೇಕಾಗಿರುವ ಪೊಲೀಸರ ಸಂಖ್ಯೆಯೆಷ್ಟು; (ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಪೊಲೀಸ್ ಸಬ್-ಇನ್ಸ್‌ಪೆಕ್ಟರ್‌ಗಳ ನೇಮಕಾತಿ ಮಾಡಲಾಗಿದೆ; ಪ್ರಸ್ತುತ, ಇರುವ ಪೊಲೀಸ್ ಸಬ್-ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಎಷ್ಟು; ಈ ಹುದ್ದೆಗಳನ್ನು

ಭರ್ತಿ ಮಾಡಲು ಇಲಾಖೆ ಕ್ರಮಕೈಗೊಳ್ಳುವುದೇ? (ವಿವರ ನೀಡುವುದು)

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಾರ್ಯಕ್ರಮದ ಕುರಿತು

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು):–**

೧೦೪೦ (೧೧೫೧+೧೧೫೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕಳೆದ ಐದು ವರ್ಷಗಳಿಂದ ಯುವಜನ ಮೇಳ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟ ಮತ್ತು ರಾಜ್ಯಮಟ್ಟದ ಯುವಜನ ಮೇಳ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸದಿರಲು ಕಾರಣಗಳೇನು;

(ಇ) ಸದರಿ ಕಾರ್ಯಕ್ರಮವನ್ನು ಪುನರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಕಲ್ಯಾಣ ಕರ್ನಾಟಕದಲ್ಲಿ ನಡೆದ ಸಚಿವ ಸಂಪುಟದ ನಿರ್ಣಯಗಳು ಜಾರಿಯಾಗದಿರುವ ಕುರಿತು

**ಶ್ರೀ ಜಗದೇವ್ ಗುತ್ತೇದಾರ್(ವಿಧಾನಸಭೆಯಿಂದ ಚುನಾಯಿತರಾದವರು):–**

೧೦೪೧ (೧೧೪೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟದಲ್ಲಿ ೪೬ ವಿಷಯಗಳು ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಸಂಬಂಧಿಸಿದರೂ ಕೂಡ ಸದರಿ ನಿರ್ಣಯಗಳು ಇನ್ನೂ ಜಾರಿಯಾಗದಿರುವುದಕ್ಕೆ ಕಾರಣವೇನು; ಹಾಗೂ ಈ ಸಚಿವ ಸಂಪುಟದ ನಿರ್ಣಯಗಳು ಯಾವಾಗ ಜಾರಿಗೆ ಬರುತ್ತವೆ;

(ಆ) ಸದರಿ ಭಾಗದ ಅಭಿವೃದ್ಧಿಗೆ ಪ್ರತ್ಯೇಕ ಸಚಿವಾಲಯು ಆರಂಭಿಸಲಾಗುವುದೇ; ಹಾಗೂ ಕಲ್ಯಾಣ ಕರ್ನಾಟಕ ಭಾಗದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

## ರಾಜ್ಯ ಸರ್ಕಾರವು ವಿಮಾನ/ಹೆಲಿಕಾಪ್ಟರ್ ಬಾಡಿಗೆ ಪಡೆದಿರುವ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೪೨ (೧೧೬೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರವು ತನ್ನ ಒಡೆತನದಲ್ಲಿ ವಿಮಾನ/ಹೆಲಿಕಾಪ್ಟರ್ ಹೊಂದಿದೆಯೇ; (ಮಾಹಿತಿ ನೀಡುವುದು)

(ಆ) ಹಾಗಿದ್ದಲ್ಲಿ, ೨೦೨೩-೨೦೨೪ ಮತ್ತು ೨೦೨೪-೨೦೨೫ನೇ ಸಾಲಿನ ಅವಧಿಯಲ್ಲಿ ಯಾವ ಉದ್ದೇಶಕ್ಕೆ ಸರ್ಕಾರವು ಬಾಡಿಗೆ ಆಧಾರದ ಮೇಲೆ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ಖಾಸಗಿ ಸಂಸ್ಥೆ/ವ್ಯಕ್ತಿಗಳಿಂದ ಪಡೆದುಕೊಂಡಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಈ ಅವಧಿಯಲ್ಲಿ ಬಾಡಿಗೆ ಪಡೆದುಕೊಂಡ ವಿಮಾನ ಮತ್ತು ಹೆಲಿಕಾಪ್ಟರ್‌ನಲ್ಲಿ ಸರ್ಕಾರದ ಮಾನ್ಯ ಮುಖ್ಯಮಂತ್ರಿಯವರು, ಉಪ ಮುಖ್ಯಮಂತ್ರಿಯವರು/ಸಚಿವರು/ಮುಖ್ಯ ಕಾರ್ಯದರ್ಶಿ ಸೇರಿದಂತೆ ಸಚಿವಾಲಯ ಮಟ್ಟದ ಹಿರಿಯ ಅಧಿಕಾರಿಗಳು ಸರ್ಕಾರದ ಕಾರ್ಯಕ್ರಮಗಳ ಪ್ರಯಾಣಕ್ಕೆ ಉಪಯೋಗಿಸಿಕೊಂಡಿದ್ದಾರೆಯೇ;

(ಈ) ಹಾಗಿದ್ದಲ್ಲಿ, ೨೦೨೩-೨೦೨೪ ಮತ್ತು ೨೦೨೪-೨೦೨೫ನೇ ಅವಧಿಯಲ್ಲಿ ಯಾವ ಯಾವ ಸರ್ಕಾರಿ ಕಾರ್ಯಕ್ರಮಗಳಿಗೆ ಈ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ಬಳಕೆ ಮಾಡಿಕೊಂಡಿದ್ದಾರೆ ಎಂಬ ಬಗ್ಗೆ ಪ್ರತಿ ಕಾರ್ಯಕ್ರಮದ ಪ್ರವಾಸ ಪಟ್ಟಿ, ಇದಕ್ಕಾಗಿ ವಿಮಾನಕ್ಕೆ, ಹೆಲಕಾಪ್ಟರ್‌ಗೆ ಪ್ರತಿ ಕಾರ್ಯಕ್ರಮಕ್ಕೆ ಸರ್ಕಾರದಿಂದ ಪಾವತಿ ಮಾಡಿರುವ ಬಾಡಿಗೆ ಮೊತ್ತದ ಸಂಪೂರ್ಣ ಮಾಹಿತಿ ಒದಗಿಸುವುದು.

(ಉ) ಈ ಸಾಲಿನಲ್ಲಿ ಇಲ್ಲಿಯವರೆಗೆ ಬಾಡಿಗೆ ಪಡೆದುಕೊಂಡು ಪ್ರಯಾಣಿಸಿದ್ದ ವಿಮಾನ ಮತ್ತು ಹೆಲಿಕಾಪ್ಟರ್‌ಗೆ ಸರ್ಕಾರ ಪಾವತಿ ಮಾಡಿರುವ ವಾರ್ಷಿಕ ಮೊತ್ತವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು)

## ಬೆಂಗಳೂರು ನಗರದಲ್ಲಿ ಕಸದ ಸಮಸ್ಯೆ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೪೩ (೧೧೬೨) ಮಾನ್ಯ ಉಪ ಮುಖ್ಯಮಂತಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರದ ತ್ಯಾಜ್ಯ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಬೆಂಗಳೂರಿನ ಹೊರಗಡೆ ೪ ದಿಕ್ಕುಗಳಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪಿಸಲು ರಾಜ್ಯ ಸರ್ಕಾರ ಅನುಮೋದನೆ ನೀಡಿದೆಯೆ; ಹಾಗೂ ಟೆಂಡರ್ ಕರೆಯುವ ಪ್ರಕ್ರಿಯೆ ಯಾವ ಹಂತದಲ್ಲಿದೆ; (ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಆ ೪ ಸ್ಥಳಗಳು ಯಾವುವು; ಹಾಗೂ ಎಷ್ಟು ಎಕರೆ ಜಾಗವನ್ನು ಈ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ; ಸದರಿ ಜಾಗವು ಸರ್ಕಾರಿ ಜಮೀನೋ ಅಥವಾ ಖಾಸಗಿಯವರಿಂದ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆಂಯೇ; (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

(ಇ) ಬೆಂಗಳೂರು ನಗರದ ಸಮಗ್ರ ಘನತ್ಯಾಜ್ಯ ನಿರ್ವಹಣೆಗೆ ವಾರ್ಷಿಕವಾಗಿ ಬೇಕಾಗಿರುವ ಅನುದಾನವೆಷ್ಟು; ಯಾವ ಯಾವ ಖಾಸಗಿ ಕಂಪನಿಗಳಿಗೆ ಈ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಲಾಗುತ್ತಿದೆ; ಇದರ ಮಾನದಂಡನೆಗಳೇನು; (ಸಂಪೂರ್ಣ ವಿವರಣೆಯೊಂದಿಗೆ ಮಾಹಿತಿ ಒದಗಿಸುವುದು)

(ಈ) ತ್ಯಾಜ್ಯ ಉತ್ಪಾದಕರಿಂದ ಬಳಕೆದಾರರ ಶುಲ್ಕವನ್ನು ಎಷ್ಟು ಪ್ರಮಾಣದಲ್ಲಿ ವಸೂಲಿ ಮಾಡಲು ಸರ್ಕಾರ ನಿರ್ಧಾರ ಮಾಡಿದೆ; ಬಳಕೆದಾರರಿಂದ ಬರುವ ವಾರ್ಷಿಕ ಶುಲ್ಕವೆಷ್ಟು;

(ಉ) ಗುತ್ತಿಗೆ ಸಂಸ್ಥೆಗಳಿಗೆ ಅಥವಾ ಕಂಪನಿಗಳಿಗೆ ಟಿಪ್ಪಿಂಗ್ ಶುಲ್ಕವಾಗಿ ಎಷ್ಟು ಶುಲ್ಕ ಪಾವತಿಸಲು ನಿರ್ಧರಿಸಲಾಗಿದೆ? (ವಿವರವನ್ನು ನೀಡುವುದು)

## ಬೆಂಗಳೂರಿನಲ್ಲಿ ನಿತ್ಯ ಉತ್ಪತ್ತಿಯಾಗುತ್ತಿರುವ ಕಟ್ಟಡ ತ್ಯಾಜ್ಯಗಳ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೦೪೪ (೧೧೬೩) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ನಿತ್ಯ ಉತ್ಪತ್ತಿಯಾಗುತ್ತಿರುವ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯದಿಂದಾಗುತ್ತಿರುವ ಸಮಸ್ಯೆ ನಿವಾರಣೆಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಆ) ಬಿಬಿಎಂಪಿ ವ್ಯಾಪ್ತಿಯಲ್ಲಿ ದಿನ ನಿತ್ಯ ಎಷ್ಟು ಮೆಟ್ರಿಕ್ ಟನ್ ಕಟ್ಟಡ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ; ಎಷ್ಟು ಮೆಟ್ರಿಕ್ ಟನ್ ಸಂಸ್ಕರಣಾ ಸಾಮರ್ಥ್ಯದ ಘಟಕಗಳಿವೆ; ಈ ಘಟಕಗಳನ್ನು ಬಿ.ಬಿ.ಎಂ.ಪಿ., ನಿರ್ವಹಿಸುತ್ತಿದೆಯೋ ಅಥವಾ ಖಾಸಗಿ ಕಂಪನಿಗಳು ನಿರ್ವಹಿಸುತ್ತಿವೆಯೋ; (ವಿವರವಾದ ಮಾಹಿತಿ ನೀಡುವುದು)

(ಇ) ಈ ಖಾಸಗಿ ಕಂಪನಿಗಳಿಗೆ ಕಟ್ಟಡ ತ್ಯಾಜ್ಯ ಸಂಸ್ಕರಣೆ ಮಾಡಲು ಬಿ.ಬಿ.ಎಂ.ಪಿ. ಪಾವತಿ ಮಾಡುತ್ತಿರುವ ಮೊತ್ತವೆಷ್ಟು; ಕಟ್ಟಡ ತ್ಯಾಜ್ಯ ಉತ್ಪಾದಕರಿಂದ ಬಿ.ಬಿ.ಎಂ.ಪಿ. ಪಡೆಯುತ್ತಿರುವ ಶುಲ್ಕವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಬಿ.ಬಿ.ಎಂ.ಪಿ.ಯು ಬೆಂಗಳೂರು ನಗರದ ಹೊರ ವಲಯದಲ್ಲಿ ಹೊಸದಾಗಿ ಎಷ್ಟು ಸಾಮರ್ಥ್ಯದ ಮೆಟ್ರಿಕ್ ಟನ್ ಸಂಸ್ಕರಣಾ ಘಟಕಗಳನ್ನು ನಿರ್ಮಿಸಲು ಮುಂದಾಗಿದೆ? (ವಿವರ ನೀಡುವುದು)

## ರಾಜ ಕಾಲುವೆಗಳ ಒತ್ತುವರಿ ಮಾಡಿರುವ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೪೫ (೧೨೭೬) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರದಲ್ಲಿ ರಾಜಕಾಲುವೆ ಒತ್ತುವರಿ ಮಾಡಿರುವ ಎಷ್ಟು ಪ್ರಕರಣಗಳಿವೆ; (ವಿಭಾಗವಾರು ಮಾಹಿತಿ ನೀಡುವುದು)

(ಆ) ರಾಜಕಾಲುವೆ ಒತ್ತುವರಿ ಮಾಡಿದ ಬಡವರ ಮತ್ತು ಮಧ್ಯ ವರ್ಗದವರ ಮನೆಗಳನ್ನು ಧ್ವಂಸ ಮಾಡಿದ್ದು ಅದೇ ರೀತಿ ಎಷ್ಟು ಪ್ರಭಾವಿಗಳ ಶ್ರೀಮಂತರ ಮನೆಗಳನ್ನು ತೆರವುಗೊಳಿಸಿದೆ; ರಾಜ ಕಾಲುವೆ ತೆರವು ಸಂದರ್ಭದಲ್ಲಿ ಮನೆ ಮಠ ಕಳೆದುಕೊಂಡ ಕುಟುಂಬಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ರಾಜ ಕಾಲುವೆಯನ್ನು ತೆರವುಗೊಳಿಸುವುದನ್ನು ವಿರೋಧಿಸಿ ಎಷ್ಟು ಪ್ರಕರಣಗಳು ನ್ಯಾಯಾಲಯದಲ್ಲಿ ದಾಖಲಾಗಿವೆ; ಪ್ರಸ್ತುತ ಈ ಪ್ರಕರಣಗಳು ಯಾವ ಹಂತದಲ್ಲಿವೆ; (ವಿವರ ನೀಡುವುದು)

(ಈ) ರಾಜಾ ಕಾಲುವೆಯಲ್ಲಿನ ನಿರ್ಮಾಣಗಳನ್ನು ತೆರವುಗೊಳಿಸಲು ಕೋರಿ ಎಷ್ಟು ನೋಟಿಸ್‌ಗಳನ್ನು ನೀಡಲಾಗಿದೆ; ಯಾರಿಗೆಲ್ಲಾ ನೋಟಿಸ್ ನೀಡಲಾಗಿದೆ? (ಸಂಪೂರ್ಣ ವಿವರ ನೀಡುವುದು)

## ಬನಶಂಕರಿ ೪ನೇ ಬ್ಲಾಕ್‌ನ ಕುರಿತು

**ಶ್ರೀ ಕೇಶವ ಪ್ರಸಾದ್ .ಎಸ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೪೬ (೧೧೩೯) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣಗೊಂಡಿರುವ ಬನಶಂಕರಿ ೬ನೇ ಹಂತದ ೪ನೇ ಬ್ಲಾಕ್‌ನ (ಮುಂದುವರೆದ ಬಡಾವಣೆ) ಬಡಾವಣೆಗೆ ಸಂಬಂಧಿಸಿದಂತೆ ಟೌನ್ ಪ್ಲಾನ್ ಅಂಗೀಕಾರವಾಗದಿರಲು ಕಾರಣವೇನು;

(ಆ) ಸದರಿ ಬಡಾವಣೆಗೆ ಸಂಬಂಧಿಸಿದಂತೆ ದಿನಾಂಕ:೨೪.೦೩.೨೦೧೩ (ಸಂ.೧೪೮/೨೦೧೩) ಹಾಗೂ ದಿನಾಂಕ:೦೫.೦೭.೨೦೧೪ (ಸಂ:೮೯/೨೦೧೪)ರಂದು ನಡೆದ ಸಭೆಗಳ ವಿವರಗಳನ್ನು ಒದಗಿಸುವುದು;

(ಇ) ಸದರಿ ಸಭೆಗಳ ನಂತರ ಕೈಗೊಂಡಿರುವ ಮಾಹಿತಿ ಹಾಗೂ ಇದುವರೆವಿಗೂ ಟೌನ್ ಪ್ಲಾನ್ ಅಂಗೀಕಾರವಾಗದಿರಲು ಕಾರಣಗಳೇನು;

(ಈ) ಟೌನ್ ಪ್ಲಾನ್ ಅಂಗೀಕಾರಗೊಳ್ಳದೇ ಇರುವುದರಿಂದ ಸದರಿ ಬಡಾವಣೆಯು ಮೂಲಭೂತ ಸೌಕರ್ಯಗಳಿಂದ ವಂಚಿವಾಗಿ ಅಭಿವೃದ್ಧಿ ಕುಂಟಿತವಾಗಿದ್ದು, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ತಿಳಿಸುವುದು?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳ ಸೇರಿದ ಆಸ್ತಿಗಳ ಕುರಿತು

**ಶ್ರೀ ಕೇಶವ ಪ್ರಸಾದ್ .ಎಸ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೪೭ (೧೨೭೭) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಎಷ್ಟು ಆಸ್ತಿಗಳನ್ನು ಲೀಸ್ ಆಧಾರದ ಮೇಲೆ ನೀಡಲಾಗಿದೆ; ಸದರಿ

F-3

ಆಸ್ತಿಗಳು ಯಾವುವು; ಎಷ್ಟು ವರ್ಷಗಳಿಗೆ ಲೀಸ್ ನೀಡಲಾಗಿದೆ; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ವಿವರ ಒದಗಿಸುವುದು)

(ಆ) ಲೀಸ್ ನೀಡಿರುವ ಆಸ್ತಿಯ ವಾರ್ಷಿಕ ಲೀಸ್ ಮೊತ್ತ ಎಷ್ಟು; ಎಷ್ಟು ವರ್ಷಗಳಿಗೊಮ್ಮೆ ಲೀಸ್ ಮೊತ್ತವನ್ನು ಪರಿಷ್ಕರಿಸಲಾಗುತ್ತದೆ; ಪ್ರತಿ ವರ್ಷ ಸಂಗ್ರಹವಾಗುತ್ತಿರುವ ಲೀಸ್ ಮೊತ್ತ ಎಷ್ಟು;

(ಇ) ಎಷ್ಟು ಆಸ್ತಿಗಳು ಲೀಸ್ ಅವಧಿ ಮುಕ್ತಾಯಗೊಂಡಿದೆ; ಕಳೆದ ೨ ವರ್ಷಗಳಿಂದ ಲೀಸ್ ಅವಧಿ ಮುಕ್ತಾಯಗೊಂಡಿರುವ ಎಷ್ಟು ಆಸ್ತಿಗಳ ಲೀಸ್ ಅವಧಿಯನ್ನು ಮುಂದುವರೆಸಲಾಗಿದೆ; ಪರಿಷ್ಕರಿಸುವಾಗ ಎಷ್ಟು ಪ್ರತಿಶತ ಲೀಸ್ ಮೊತ್ತವನ್ನು ಏರಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)

(ಈ) ಲೀಸ್ ಅವಧಿ ಮುಗಿದು ಬಿ.ಬಿ.ಎಂ.ಪಿ ಯ ಸುಪರ್ದಿಗೆ ಬಂದಿರುವ ಆಸ್ತಿಗಳೆಷ್ಟು? (ವಿಧಾನ ಸಭಾ ಕ್ಷೇತ್ರವಾರು ವಿವರ ಒದಗಿಸುವುದು)

## ಜಲಸಂಪನ್ಮೂಲ ಇಲಾಖೆಯ ಗುತ್ತಿಗೆದಾರರ ಬಾಕಿ ಬಿಲ್ ಕುರಿತು

**ಶ್ರೀ ಕೇಶವ ಪ್ರಸಾದ್ .ಎಸ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೪೮ (೧೨೭೮) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಜಲಸಂಪನ್ಮೂಲ ಇಲಾಖೆಯ ಅಧೀನದಲ್ಲಿರುವ ನಿಗಮಗಳಲ್ಲಿ ವಿವಿಧ ಕಾಮಗಾರಿ ನಿರ್ವಹಿಸಿರುವ ಗುತ್ತಿಗೆದಾರರಿಗೆ ಪಾವತಿ ಮಾಡಬೇಕಾಗಿರುವ ಮೊತ್ತ ಎಷ್ಟು; (ವರ್ಷವಾರು ನಿಗಮವಾರು ವಿವರ ನೀಡುವುದು)

(ಆ) ಕಳೆದ ಒಂದು ವರ್ಷದಿಂದ ಈವರೆವಿಗೆ ಎಷ್ಟು ಜನ ಗುತ್ತಿಗೆದಾರರಿಗೆ ಬಾಕಿ ಹಣ ನೀಡಲಾಗಿದೆ; ಪಾವತಿಯಾಗಿರುವ ಮೊತ್ತ ಎಷ್ಟು;

(ಗುತ್ತಿಗೆದಾರರ ವಿವರವನ್ನು ಅವರು ಪೂರ್ಣಗೊಳಿಸಿರುವ ಕಾಮಗಾರಿಯೊಂದಿಗೆ ನೀಡುವುದು)

(ಇ) ಸರ್ಕಾರದಿಂದ ಬರಬೇಕಿರುವ ಬಾಕಿ ಹಣ ನೀಡಿಲ್ಲ ಎಂಬ ಕಾರಣ ನೀಡಿ ಗುತ್ತಿಗೆದಾರರು ಅತ್ಮಹತ್ಯೆ ಯತ್ನ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಈ) ಪ್ರಸಕ್ತ ಸಾಲಿನಲ್ಲಿ ಗುತ್ತಿಗೆದಾರರಿಗೆ ಪಾವತಿಸಲು ಮೀಸಲಿಟ್ಟಿರುವ ಹಣ ಎಷ್ಟು; ಗುತ್ತಿಗೆದಾರರಿಗೆ ಬಾಕಿ ಹಣ ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ಬಾಕಿ ಹಣ ಪಾವತಿಸಲಾಗುವುದು?

## ಮಂಡ್ಯ ಬೃಂದಾವನ ಉದ್ಯಾನವನ್ನು ಪಿಪಿಪಿ ಮಾದರಿಯಲ್ಲಿ ಉನ್ನತೀಕರಿಸುವ ಬಗ್ಗೆ

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ):-**

೧೦೪೯ (೧೨೪೬) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಕೃಷ್ಣರಾಜಸಾಗರದ ಬೃಂದಾವನ ಉದ್ಯಾನವನ್ನು ಪಿಪಿಪಿ ಮಾದರಿಯಲ್ಲಿ ಪ್ರಸ್ತಾವಿತ ಮೇಲ್ದರ್ಜೆಗೇರಿಸುವಿಕೆಯ ಅಭಿವೃದ್ಧಿ ಮತ್ತು ಕಾರ್ಯಾಚರಣೆ/ ನಿರ್ವಹಣೆ ಕಾಮಗಾರಿಗೆ ಆರ್ಥಿಕ ಇಲಾಖೆ ಅನುಮೋದನೆ ಸಿಕ್ಕಿದೆಯೇ; ಇದ್ದಲ್ಲಿ. ಅನುಮೋದನೆ ನೀಡಿರುವ ಒಟ್ಟು ಮೊತ್ತ ಎಷ್ಟು; (ಆದೇಶದ ಪತ್ರ ನೀಡುವುದು)

(ಆ) ಕಾವೇರಿ ನೀರಾವರಿ ನಿಗಮ ನಿಯಮಿತ, ಕೃಷ್ಣರಾಜಸಾಗರ ವಿಭಾಗದ ವತಿಯಿಂದ ಪ್ರಸ್ತಾವಿತ 'ಉನ್ನತೀಕರಿಸುವ ಕಾಮಗಾರಿಗೆ

ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಅಭಿವೃದ್ಧಿ ಕಾಮಗಾರಿ ನಿರ್ವಹಿಸಲು ಯಾವುದಾದರೂ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆಯೇ; ಇದ್ದಲ್ಲಿ, ಆ ಸಂಸ್ಥೆ ಯಾವುದು; ಹಾಗೂ. ಸದರಿ ಸಂಸ್ಥೆಯೊಂದಿಗೆ ಎಷ್ಟು ವರ್ಷದ ಅವಧಿಗೆ ಓ ಅಂಡ್ ಎಂ ಮಾಡಿಕೊಳ್ಳಲಾಗುತ್ತದೆ; (ವಿವರ ನೀಡುವುದು) ಸದರಿ ಸ್ಥಳದಲ್ಲಿ ಏನೆಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ; ಯಾವ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ; (ಸಂಪೂರ್ಣ ವಿವರ ನೀಡುವುದು)

(ಈ) ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಸಮಿತಿ ಹಾಗೂ ಕಾಮಗಾರಿ ಅನುಷ್ಠಾನಿಸುವಲ್ಲಿ ಉಂಟಾಗುವ ಸಮಸ್ಯೆಗಳನ್ನು ನಿಯಂತ್ರಿಸಲು ಸಲಹಾ ಸಮಿತಿಯನ್ನು ರಚಿಸಲು ಸರ್ಕಾರ ಉದ್ದೇಶಿಸಿದೆಯೇ? (ಮಾಹಿತಿ ನೀಡುವುದು)

## ಕಾವೇರಿ ನದಿ ನಿರ್ವಹಣಾ ಪ್ರಾಧಿಕಾರ ಮತ್ತು ಕಾವೇರಿ ಜಲನಿರ್ವಹಣಾ ಸಮಿತಿಗೆ ಭರಿಸಬೇಕಿರುವ ವೆಚ್ಚ ಕುರಿತು

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ):-**

೧೦೫೦ (೧೨೪೭) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ಜಲ ನಿಯಂತ್ರಣಾ ಸಮಿತಿಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ತಗಲುವ ವೆಚ್ಚವನ್ನು ರಾಜ್ಯ ಸರ್ಕಾರ ಪ್ರತಿ ವರ್ಷ ಭರಿಸಬೇಕಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಇದ್ದಲ್ಲಿ, ರಾಜ್ಯ ಸರ್ಕಾರ ಭರಿಸಬೇಕಾದ ವೆಚ್ಚದ ಪಾಲು ಎಷ್ಟು; ಇದು ಪುನರಾವರ್ತಿತ ವೆಚ್ಚವೇ;

(ಇ) ಸದರಿ ವೆಚ್ಚವನ್ನು ಯಾವ ವರ್ಷದಿಂದ ಪಾವತಿಸಿಕೊಂಡು ಬರುತ್ತಿದೆ; ಈವರೆವಿಗೂ ಪಾವತಿಸಿರುವ ಮೊತ್ತ ಎಷ್ಟು; (ವರ್ಷವಾರು ಪಾವತಿಸಿರುವ ಮೊತ್ತದ ಮಾಹಿತಿಯನ್ನು ನೀಡುವುದು)

(ಈ) ಕಾವೇರಿ ನದಿ ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ಜಲ ನಿಯಂತ್ರಣಾ ಸಮಿತಿಗೆ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ಒದಗಿಸಲು ಸಮಿತಿಯನ್ನು ರಚಿಸಲಾಗಿದೆಯೇ; ಇದ್ದಲ್ಲಿ, ಈ ಸಮಿತಿಯಲ್ಲಿ ಯಾರು ಯಾರು ಇದ್ದಾರೆ? (ಸಮಿತಿಯ ಕಾರ್ಯನಿರ್ವಹಣೆ ಕುರಿತು ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಹೆಚ್ಚುತ್ತಿರುವ ಹುಸಿ ಬಾಂಬ್ ಬೆದರಿಕೆಯ ಕುರಿತು

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ):-**

೧೦೫೧. (೧೨೪೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿರುವ ವಿಮಾನ, ರೈಲು ನಿಲ್ದಾಣ, ಬ್ಯಾಂಕ್ ಹೋಟೆಲ್, ದೇಗುಲ, ಶಾಲಾ-ಕಾಲೇಜುಗಳು ಸೇರಿದಂತೆ ಇತ್ಯಾದಿಗಳಿಗೆ ಹುಸಿ ಬಾಂಬ್ ಬೆದರಿಕೆಯ ಕರೆ/ ಸಂದೇಶಗಳು ಬಂದಿರುವ ಬಗ್ಗೆ ವರದಿಯಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ವರ್ಷವಾರು. ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಬೆದರಿಕೆಯ ಕರೆ/ಸಂದೇಶಗಳನ್ನು ಕಳುಹಿಸಿದ ನಂತರ ನೈಜವಾಗಿ ಸಂಭವಿಸಿದ ಯಾವುದಾದರೂ ಪ್ರಕರಣ ಇದೆಯೇ; (ಇದ್ದಲ್ಲಿ ಮಾಹಿತಿ ನೀಡುವುದು)

(ಇ) ಯಾವ ಜಿಲ್ಲೆಗಳಲ್ಲಿ ಈ ರೀತಿಯ ಹುಸಿ ಬಾಂಬ್ ಬೆದರಿಕೆಯ ಕರೆ/ಸಂದೇಶಗಳು ಹೆಚ್ಚು ಸ್ವೀಕೃತವಾಗುತ್ತಿವೆ;

(ಈ) ಈ ಅವಧಿಯಲ್ಲಿ ಸ್ವೀಕೃತವಾಗಿದ್ದ ಬೆದರಿಕೆ ಕರೆಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ದುಷ್ಕರ್ಮಿಗಳನ್ನು ಪತ್ತೆ ಹಚ್ಚಲಾಗಿದೆ; ಇವರ ವಿರುದ್ಧ ಇಲಾಖೆ ಕೈಗೊಂಡ ಕಾನೂನು ರೀತ್ಯಾ ಕ್ರಮಗಳೇನು? (ವಿವರ ನೀಡುವುದು)

## ರಾಜ್ಯದ ಕೌಟುಂಬಿಕ ನ್ಯಾಯಾಲಯಗಳಲ್ಲಿ ಹೆಚ್ಚುತ್ತಿರುವ ವಿಚ್ಛೇದನ ಪ್ರಕರಣಗಳ ಬಗ್ಗೆ

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ):-**

೧೦೫೨ (೧೨೪೯) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:-

(ಅ) ಇತ್ತೀಚಿನ ದಿನಗಳಲ್ಲಿ ರಾಜ್ಯದಾದ್ಯಂತ ಕೌಟುಂಬಿಕ ನ್ಯಾಯಾಲಯಗಲ್ಲಿ ವಿಚ್ಛೇದನ ಕೋರಿ ದಾಖಲಾಗುತ್ತಿರುವ ಪ್ರಕರಣಗಳ ಸಂಖ್ಯೆಯಲ್ಲಿ ಗಮನಾರ್ಹ ಹೆಚ್ಚಳ ಆಗುತ್ತಿರುವುದು ನಿಜವೇ ಇದ್ದಲ್ಲಿ, ೨೦೨೦ ರಿಂದ ಈವರೆಗೆ ದಾಖಲಾದ ವಿಚ್ಛೇದನ ಪ್ರಕರಣಗಳ ಸಂಖ್ಯೆ ಎಷ್ಟು; ಹಿಂದಿನ ವರ್ಷಗಳಿಗೆ ಹೋಲಿಸಿದರೆ ವಿಚ್ಛೇದನ ಸಂಬಂಧಿತ ಅರ್ಜಿಗಳ ಸಂಖ್ಯೆಯಲ್ಲಿ ಶೇಕಡವಾರು ಎಷ್ಟು ಏರಿಕೆ ಆಗಿದೆ; (ವರ್ಷವಾರು, ಜಿಲ್ಲಾವಾರು ಮಾಹಿತಿ

ನೀಡುವುದು) ಹಾಗೂ ರಾಜ್ಯದಲ್ಲಿ ಪತ್ರಿದಿನ ಸರಾಸರಿ ದಾಖಲಾಗುತ್ತಿರುವ ಪ್ರಕರಣಗಳ ಸಂಖ್ಯೆ ಎಷ್ಟು;

(ಆ) ಈ ಪೈಕಿ ಅರ್ಜಿ ಇತ್ಯರ್ಥಗೊಳಿಸಿ ಮತ್ತೆ ಒಟ್ಟುಗೂಡಿಸಿದ, ವಿಚ್ಛೇದನ ನೀಡಲಾದ ಹಾಗೂ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು) ವಿಚ್ಛೇದನ ಪ್ರಕರಣಗಳ ಅರ್ಜಿಯ ಸ್ವರೂಪವೇನು ಹಾಗೂ ಪ್ರತ್ಯೇಕವಾಗಿ ನ್ಯಾಯಾಲಯವನ್ನು ಸಂಪರ್ಕಿಸುತ್ತಿರುವವರಲ್ಲಿ ಹೆಚ್ಚಿನ ಸಂಖ್ಯೆಯವರು ಯಾವ ವಯೋಮಾನದವರು;

(ಇ) ಆಪ್ತ ಸಮಾಲೋಚನೆ, ಮಧ್ಯಸ್ಥಿತಿಕೆ ಮೂಲಕ ಕೌಟುಂಬಿಕ ಹಕ್ಕುಗಳನ್ನು ರಕ್ಷಿಸಲು ಸರ್ಕಾರ ಯಾವ ರೀತಿಯ ನೆರವು ಕಲ್ಪಿಸಲಿದೆ? (ವಿವರ ನೀಡುವುದು)

## ಮಂಡ್ಯ ಜಿಲ್ಲೆಯ ಪ್ರವಾಸಿ ಸ್ಥಳಗಳ ಅಭಿವೃದ್ಧಿ ಕುರಿತು

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ):-**

೧೦೫೩ (೧೨೫೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಕೃಷ್ಣರಾಜಸಾಗರದ ಬೃಂದಾವನ ಉದ್ಯಾನಕ್ಕೆ ಕಳೆದ ಮೂರು ವರ್ಷಗಳಲ್ಲಿ ಭೇಟಿ ನೀಡಿರುವ ದೇಶಿ ಮತ್ತು ವಿದೇಶಿ ಪ್ರವಾಸಿಗರ ಸಂಖ್ಯೆ ಮತ್ತು ಸಂಗ್ರಹವಾದ ಮೊತ್ತ ಎಷ್ಟು; (ವರ್ಷವಾರು ಮಾಹಿತಿ ನೀಡುವುದು) ಪ್ರವಾಸೋದ್ಯಮ ಇಲಾಖೆ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಒದಗಿಸಿರುವ ಅನುದಾನ ಎಷ್ಟು ಕೈಗೊಂಡಿರುವ ಅಭಿವೃದ್ಧಿ ಕೆಲಸಗಳು ಯಾವುವು; (ವರ್ಷವಾರು ಮಾಹಿತಿ ನೀಡುವುದು)

(ಆ) ಮಂಡ್ಯ ಜಿಲ್ಲೆಯ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಸರ್ಕಾರಕ್ಕೆ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪ್ರಸ್ತಾವನೆಗಳು ಸ್ವೀಕೃತವಾಗಿವೆ ಅವು ಯಾವುವು ಈ ಪೈಕಿ ಅನುಮೋದನೆ ನೀಡಿರುವ ಪ್ರಸ್ತಾವನೆಗಳು ಯಾವುವು; (ವಿವರ ನೀಡುವುದು) ಸದರಿ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಕಳೆದ ಮೂರು ವರ್ಷಗಳಲ್ಲಿ ನೀಡಿರುವ ಅನುದಾನ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)

(ಇ) ಮಂಡ್ಯ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರವಾಸಿ ಗೈಡುಗಳ ಸಂಖ್ಯೆ ಎಷ್ಟು? ಅವರಿಗೆ ನೀಡುತ್ತಿರುವ ಸೌಲಭ್ಯಗಳೇನು?

## ರಾಜ್ಯದಲ್ಲಿ ನಡೆಯುತ್ತಿರುವ ಸಂಕೀರ್ಣ ರೀತಿಯ ಅಪರಾಧ ಚಟುವಟಿಕೆಗಳನ್ನು ತಡೆಗಟ್ಟುವ ಬಗ್ಗೆ

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೫೪ (೧೨೪೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ವರದಿಯಾಗಿರುವ ಮತ್ತು ದಾಖಲಾಗಿರುವ ಡಿಜಿಟಲ್ ಬಂಧನ (ಡಿಜಿಟಲ್ ಅರೆಸ್ಟ್) ಪ್ರಕರಣಗಳೆಷ್ಟು; ಇವುಗಳಲ್ಲಿ ಭೇದಿಸಲಾದ ಪ್ರಕರಣಗಳೆಷ್ಟು; ತನಿಖೆ ಹಂತದಲ್ಲಿರುವ ಪ್ರಕರಣಗಳೆಷ್ಟು;

(ಆ) ಈ ಪ್ರಕರಣಗಳಲ್ಲಿ ಅಪರಾಧಗಳಿಗೆ ಯಾವ ಕಾನೂನಿನಡಿ ಪ್ರಕರಣ ದಾಖಲಿಸಲಾಗುತ್ತಿದೆ: ಈಗಾಗಲೇ ದಾಖಲಾಗಿರುವ ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳನ್ನು ಬಂಧಿಸಿ ಶಿಕ್ಷೆ ನೀಡಲಾಗಿದೆ; ಇಂತಹ ಪ್ರಕರಣಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗುವ ಹಣವನ್ನು ಯಾವ ರೀತಿ ನಿರ್ವಹಣೆ ಮತ್ತು ವಿಲೇವಾರಿ ಮಾಡಲಾಗುತ್ತಿದೆ;

(ಇ) ಆನ್‌ಲೈನ್ ಹಾಗೂ ಆಧಾರ್ ಆಧಾರಿತ ಪಾವತಿಗಳನ್ನು ಮಾಡುವಾಗ ಆಧಾರ್ ಸಂಖ್ಯೆ ಮತ್ತು ಬಯೋಮೆಟ್ರಿಕ್ ಆಧಾರಿತ ಪಾವತಿಯ ನಂತರ ಜೀವಮಾಪನ (ಬಯೋಮೆಟ್ರಿಕ್) ಆಕ್ಟಿವೇಷನ್ ರದ್ದುಪಡಿಸಲು ಗ್ರಾಹಕರಿಗೆ ಮಾಹಿತಿ ಹಾಗೂ ಬ್ಯಾಂಕುಗಳಿಗೆ, ಇತರ ಪಾವತಿ ಸಂಸ್ಥೆಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆಯೇ; ಸೈಬರ್ ಪೊಲೀಸ್ ಠಾಣೆಯಲ್ಲಿ ಈ ಅಪರಾಧ ತಡೆಯಲು ಅಗತ್ಯವಿರುವ ತಾಂತ್ರಿಕ ನುರಿತ ತರಬೇತಿದಾರರನ್ನು ಸಿದ್ಧಪಡಿಸಲು ಯಾವಾಗ ಕ್ರಮವಹಿಸಲಾಗುವುದು;

(ಈ) ವಿವಿಧ ಸಂಕೀರ್ಣ ರೀತಿಯ ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆಗಟ್ಟುವ ಬಗ್ಗೆ ಪ್ರಸ್ತುತ ಜಾರಿಯಲ್ಲಿರುವ ಹಳೆಯದಾಗಿರುವ ಕಾನೂನುಗಳನ್ನು ತಿದ್ದುಪಡಿ ಮಾಡಲು ಯಾವಾಗ ಕ್ರಮ ವಹಿಸಲಾಗುವುದು?

## ಸಣ್ಣ ನೀರಾವರಿ ಯೋಜನೆಗಳಿಗಾಗಿ ಭೂ ಸ್ವಾಧೀನ ಮಾಡಿದ ಪ್ರಕರಣಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೫೫ (೧೨೪೨) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಇಲ್ಲಿಯವರೆಗೆ ಸಣ್ಣ ನೀರಾವರಿ ಯೋಜನೆಗಳಿಗಾಗಿ ಭೂ ಸ್ವಾಧೀನ ಮಾಡಿದ ಪ್ರಕರಣಗಳು ಎಷ್ಟು; ಈ ಯೋಜನೆಗಳಿಗಾಗಿ ಭೂ ಸ್ವಾಧೀನ ಮಾಡಿದ ಪ್ರಕರಣಗಳಲ್ಲಿ ಎಷ್ಟು ಜನರು ಸರ್ಕಾರ ನಿಗದಿಪಡಿಸಿದ ಪರಿಹಾರವನ್ನು ಸ್ವೀಕರಿಸಿರುತ್ತಾರೆ;

(ಆ) ಎಷ್ಟು ಜನ ಭೂಮಿ ಕಳೆದುಕೊಂಡವರು ಸದರಿ ಸರ್ಕಾರಿ ಪರಿಹಾರ ನಿಗದಿಪಡಿಸಿ ಘೋಷಿಸಿದ ಮೊತ್ತವನ್ನು ಪ್ರಶ್ನಿಸಿ ಹೆಚ್ಚುವರಿ ಮೊತ್ತಕ್ಕಾಗಿ ವಿವಿಧ ಮೇಲ್ಮನವಿ ಪ್ರಾಧಿಕಾರಗಳಿಗೆ ಮತ್ತು ನ್ಯಾಯಾಲಯಕ್ಕೆ ಹೋಗಿರುತ್ತಾರೆ;

(ಇ) ಇಲ್ಲಿವರೆಗೆ ದಾಖಲಿಸಿದ ಪರಿಹಾರ ಕುರಿತ ಪ್ರಕರಣಗಳಲ್ಲಿ ಎಷ್ಟು ಅರ್ಜಿದಾರರು ಯಶಸ್ವಿಯಾಗಿ ಹೆಚ್ಚುವರಿ ಪರಿಹಾರ ಧನವನ್ನು ಪಡೆದಿರುತ್ತಾರೆ ಹಾಗೂ ಎಷ್ಟು ಪ್ರಕರಣಗಳಲ್ಲಿ ಸರಕಾರವು ನೀಡಿರುವ ಪರಿಹಾರವು ಸಮರ್ಪಕವಾಗಿದೆ ಎಂದು ತೀರ್ಪು ಬಂದಿದೆ;

(ಈ) ಈ ಯೋಜನೆಗಳಿಗಾಗಿ ಭೂ ಸ್ವಾಧೀನ ಕುರಿತಂತೆ ನ್ಯಾಯಾಲಯದಲ್ಲಿ ದಾಖಲಾಗುವ ಪರಿಹಾರ ಸಂಬಂಧಿತ ಒಟ್ಟು ಪ್ರಕರಣಗಳಲ್ಲಿ ಇಲಾಖೆಯು ಎಷ್ಟು ಪ್ರಕರಣಗಳಲ್ಲಿ ಜಯಗಳಿಸಿದೆ ಹಾಗೂ ಎಷ್ಟು ಪ್ರಕರಣಗಳಲ್ಲಿ ವಿಫಲವಾಗಿದೆ? (ವಿವರ ನೀಡುವುದು)

## ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೫೬ (೧೨೪೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಘಟಕಗಳು ಸ್ಥಳೀಯವಾಗಿ ಎಷ್ಟು ತಳಹಂತದವರೆಗೆ ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿದೆ: ಹೋಬಳಿ ಅಥವಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇಂತಹ ಘಟಕಗಳನ್ನು ಸ್ಥಾಪಿಸಲು ಇಲಾಖೆ ಮುಂದಾಗುವುದೇ;

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ/ಪಂಗಡ ಸಹಿತ ಹಲವಾರು ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಲು ಇಲಾಖೆ ಕೈಗೊಂಡಿರುವ ಕ್ರಮಗಳು ಯಾವುವು;

(ಇ) ಪರಿಶಿಷ್ಟ ಜಾತಿ/ಪಂಗಡ ಸಹಿತ ಹಲವಾರು ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳು ಮತ್ತು ದುರ್ಬಲ ವರ್ಗಗಳ ಜನರು ಮತ್ತು ಮಹಿಳೆಯರು ಇನ್ನೂ ತಮ್ಮ ಮೂಲಭೂತ ಅಗತ್ಯಗಳಿಗಾಗಿ ಪ್ರಯಾಸಪಡುತ್ತಿರುವ ಬಗ್ಗೆ ಇಲಾಖೆ ಯಾವ ರೀತಿ ಕ್ರಮವಹಿಸುತ್ತಿದೆ;

(ಈ) ಕಾರ್ಮಿಕ, ಗುತ್ತಿಗೆ ಕಾರ್ಮಿಕ, ಸ್ವಯಂ ಸೇವಕ, ಇತ್ಯಾದಿ ರೀತಿಯ ಕಾನೂನು ವ್ಯಾಖ್ಯಾನದ ಮೂಲಕ ವಿವಿಧ ಹಿಂದುಳಿದ ಸಮುದಾಯಗಳು ಮತ್ತು ದುರ್ಬಲ ವರ್ಗಗಳ ಜನರು ಮತ್ತು ಮಹಿಳೆಯರಿಗೆ ಆಗುತ್ತಿರುವ ಶೋಷಣೆಯನ್ನು ತಡೆಯಲು ಇಲಾಖೆ ಯಾವ ರೀತಿಯಲ್ಲಿ ಕ್ರಮವಹಿಸಲಾಗುತ್ತಿದೆ?

## ಕರ್ನಾಟಕ ರಾಜ್ಯದಲ್ಲಿ ವಸ್ತು ಮತ್ತು ಸೇವೆಗಳಿಗೆ ಜಿಎಸ್‌ಟಿ ತೆರಿಗೆ ವಿನಾಯಿತಿ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೫೭ (೧೨೪೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಜಿಎಸ್‌ಟಿ ತೆರಿಗೆ ಪಾವತಿ ಮಾಹಿತಿ ಸಲ್ಲಿಸಿದವರ ವಿವರಗಳನ್ನು ಆಧಾರಿಸಿ ಜನರ ಅಗತ್ಯ ಸರ್ಕಾರಿ ರಿಯಾಯಿತಿ ಸೌಲಭ್ಯಗಳನ್ನು ಕಡಿತಗೊಳಿಸಲಾಗಿದೆಯೇ: ಈ ವಿವರಗಳನ್ನು

ಯಾವ ಇಲಾಖೆಗಳಿಗೆ ಲಿಂಕ್ ಮಾಡಲಾಗಿದೆ; (ವಿವರ ನೀಡುವುದು)

(ಆ) ಕರ್ನಾಟಕ ರಾಜ್ಯದಲ್ಲಿ ಯಾವ ವಸ್ತು ಮತ್ತು ಸೇವೆಗಳಿಗೆ ಜಿಎಸ್‌ಟಿ ತೆರಿಗೆ ವ್ಯಾಪ್ತಿಯಿಂದ ಹೊರಗಿಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ: ಹಾಗೂ ಜಿಎಸ್‌ಟಿ ತೆರಿಗೆಯಿಂದ ವಿನಾಯಿತಿ ಯಾವ ದಿನಾಂಕದಿಂದ ನೀಡಲಾಗಿದೆ;

(ಇ) ಕೆಲವು ಸಂದರ್ಭದಲ್ಲಿ ಕೆಲವು ವಸ್ತು ಮತ್ತು ಸೇವೆಗಳಿಗೆ ಸರಕಾರವು ಜಿಎಸ್‌ಟಿಯಿಂದ ವಿನಾಯಿತಿ ನೀಡಿದ್ದು ಈಗಾಗಲೇ ಪಾವತಿಸಿದ ತೆರಿಗೆಯನ್ನು ಹಿಂತಿರುಗಿಸಲು ಅವಕಾಶವಿದೆಯೇ; ಅವಕಾಶವಿದ್ದರೆ ಈ ಪಾವತಿಸಿದ ಜಿಎಸ್‌ಟಿ ಮೊತ್ತವನ್ನು ಹಿಂತಿರುಗಿಸಲು ಅನುಸರಿಸುವ ಕಾರ್ಯ ವಿಧಾನಗಳೇನು;

(ಈ) ಶಿಕ್ಷಣ ಸಂಸ್ಥೆಗಳ ವಸತಿ ನಿಲಯಗಳಿಗೆ ವಿದ್ಯಾರ್ಥಿಗಳು ಪಾವತಿಸುವ ಶುಲ್ಕಗಳ ಮೇಲಿನ ಜಿಎಸ್‌ಟಿಯನ್ನು ವಿನಾಯಿತಿಗೊಳಿಸಲಾಗಿದೆಯೇ; ವಿನಾಯಿತಿಗೊಳಿಸಿದ್ದಲ್ಲಿ ಈಗಾಗಲೇ ಪಾವತಿಸಿರುವ ಜಿಎಸ್‌ಟಿ ಮೊತ್ತವನ್ನು ಹಿಂತಿರುಗಿಸಲು ಯಾವ ಕ್ರಮವಹಿಸಲಾಗುತ್ತಿದೆ?

## ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ °ಭೂ ಸ್ವಾಧೀನ ಮಾಡಿದ ಪ್ರಕರಣಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೫೮ (೧೨೪೫) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ ಭೂ ಸ್ವಾಧೀನ ಮಾಡಿದ ಪ್ರಕರಣಗಳು ಎಷ್ಟು ಈ ಯೋಜನೆಗಳಿಗಾಗಿ ಭೂ ಸ್ವಾಧೀನ ಮಾಡಿದ ಪ್ರಕರಣಗಳಲ್ಲಿ ಎಷ್ಟು ಜನರು ಸರ್ಕಾರ ನಿಗದಿಪಡಿಸಿದ ಪರಿಹಾರವನ್ನು ಸ್ವೀಕರಿಸಿರುತ್ತಾರೆ;

(ಆ) ಎಷ್ಟು ಜನ ಭೂಮಿ ಕಳೆದುಕೊಂಡವರು ಸದರಿ ಸರ್ಕಾರ ಪರಿಹಾರ ನಿಗದಿಪಡಿಸಿ ಘೋಷಿಸಿದ ಮೊತ್ತವನ್ನು ಪ್ರಶ್ನಿಸಿ ಹೆಚ್ಚುವರಿ ಮೊತ್ತಕ್ಕಾಗಿ ವಿವಿಧ ಮೇಲ್ಮನವಿ ಪ್ರಾಧಿಕಾರಗಳಿಗೆ ಮತ್ತು ನ್ಯಾಯಾಲಯಕ್ಕೆ ಹೋಗಿರುತ್ತಾರೆ;

(ಇ) ಇಲ್ಲಿಯವರೆಗೆ ದಾಖಲಿಸಿದ ಪರಿಹಾರ ಕುರಿತು ಪ್ರಕರಣಗಳಲ್ಲಿ ಎಷ್ಟು ಅರ್ಜಿದಾರರು ಯಶಸ್ವಿಯಾಗಿ ಹೆಚ್ಚುವರಿ ಪರಿಹಾರ ಧನವನ್ನು ಪಡೆದಿರುತ್ತಾರೆ ಹಾಗೂ ಎಷ್ಟು ಪ್ರಕರಣಗಳಲ್ಲಿ ಸರಕಾರವು ನೀಡಿರುವ ಪರಿಹಾರವು ಸಮರ್ಪಕವಾಗಿದೆ ಎಂದು ತೀರ್ಪು ಬಂದಿದೆ;

(ಈ) ಈ ಯೋಜನೆಗಳಿಗಾಗಿ ಭೂ ಸ್ವಾಧೀನ ಕುರಿತಂತೆ ನ್ಯಾಯಾಲಯದಲ್ಲಿ ದಾಖಲಾಗುವ ಪರಿಹಾರ ಸಂಬಂಧಿತ ಒಟ್ಟು ಪ್ರಕರಣಗಳಲ್ಲಿ ಇಲಾಖೆಯು ಎಷ್ಟು ಪ್ರಕರಣಗಳಲ್ಲಿ ಜಯಗಳಿಸಿದೆ ಹಾಗೂ ಎಷ್ಟು ಪ್ರಕರಣಗಳಲ್ಲಿ ವಿಫಲವಾಗಿದೆ? (ಶೇಕಡಾವಾರು ವಿವರ ನೀಡುವುದು)

## ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳ ನೇಮಕಾತಿ ಕುರಿತು

ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

೧೦೫೯ (೧೧೯೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳ ಸಂಖ್ಯೆ ಎಷ್ಟು;

(ಆ) ನಿಯಮಾನುಸಾರ ಎಷ್ಟು ಜನರಿಗೆ ಒಟ್ಟು ಪೊಲೀಸ್ ಕಾನ್‌ಸ್ಟೇಬಲ್ ಇರಬೇಕಾಗಿದೆ;

(ಇ) ಆ ಪ್ರಕಾರ ಪೊಲೀಸ್ ಕಾನ್‌ಸ್ಟೇಬಲ್‌ಗಳ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣಗಳೇನು;

(ಈ) ಪೊಲೀಸ್ ಕಾನ್‌ಸ್ಟೇಬಲ್‌ಗಳ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು ಯಾವಾಗ?

## ಮೈಸೂರು ಜಿಲ್ಲೆಯ ಲಕ್ಷ್ಮಣತೀರ್ಥ ನದಿಯ ಪುನ:ಶ್ಚೇತನದ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೬೦ (೧೧೯೯) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮೈಸೂರು ಜಿಲ್ಲೆಯ ಹುಣಸೂರು ಪಟ್ಟಣದೊಳಗೆ ಹರಿಯುವ ಲಕ್ಷ್ಮಣತೀರ್ಥ ನದಿ ತ್ಯಾಜ್ಯ ತುಂಬಿ, ಚರಂಡಿ ನೀರಿನಂತಾಗಿ ದುರ್ವಾಸನೆ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ತ್ಯಾಜ್ಯ ನೀರು ನದಿ ಒಡಲಿಗೆ ಸೇರದಂತೆ ಈ ಹಿಂದೆ ಸಿದ್ಧಪಡಿಸಲಾದ ಯೋಜನಾ ವರದಿಯ ಅನುಷ್ಠಾನಕ್ಕೆ ಸರ್ಕಾರ ಕ್ರಮಕೈಗೊಳ್ಳದೇ ಇರಲು ಕಾರಣವೇನು;

(ಇ) ನದಿ ಪಾತ್ರದ ಒತ್ತುವರಿಯನ್ನು ತಡೆಗಟ್ಟುವುದು ಸೇರಿದಂತೆ, ನದಿಯ ಪುನಃಶ್ಚೇತನಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

## ಮದ್ಯದಂಗಡಿಗಳ ಪರವಾನಿಗೆಯ ಬಗ್ಗೆ.

**ಡಾ. ಎಂ.ಜೆ ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೬೧ (೧೧೯೯) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರದ ಮಾರ್ಗಸೂಚಿ ಅನ್ವಯ ರಾಜ್ಯದಲ್ಲಿ ಎಷ್ಟು ವಿಧವಾದ ಮದ್ಯದ ಅಂಗಡಿಗಳಿಗೆ ಪರವಾನಿಗೆಯನ್ನು ನೀಡಲಾಗಿದೆ;

(ಆ) ಸದರಿ ಮದ್ಯದ ಅಂಗಡಿಗಳಿಗೆ ಪರವಾನಿಗೆ ನೀಡಲು ಸರ್ಕಾರ ತೆಗೆದುಕೊಳ್ಳುವ ಸಮಯ ಎಷ್ಟು;

(ಇ) ಕಳೆದ ಮೂರು ವರ್ಷಗಳಲ್ಲಿ ಎಂ.ಎಸ್.ಐ.ಎಲ್., ವತಿಯಿಂದ ಎಷ್ಟು ಎಂ.ಆರ್.ಪಿ. ಸನ್ನದುಗಳು ಮಂಜೂರಾತಿಗಾಗಿ ಅರ್ಜಿಗಳನ್ನು ಸ್ವೀಕರಿಸಲಾಗಿದೆ;

(ಈ) ಅರ್ಜಿಗಳಲ್ಲಿ ಮಂಜೂರಾದ ಸನ್ನದುಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

## ಕುಮಾರ ಕೃಪಾ ಅತಿಥಿ ಗೃಹದ ಬಗ್ಗೆ

**ಡಾ. ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೬೨ (೧೧೭೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕುಮಾರ ಕೃಪಾ ಅತಿಥಿ ಗೃಹವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯವರು ನಿರ್ವಹಿಸದೆ ಪ್ರವಾಸೋದ್ಯಮ ಇಲಾಖೆಗೆ ನೀಡಿರುವುದು ನಿಜವೇ; ನೀಡಿದ್ದರೆ ಅದಕ್ಕೆ ಕಾರಣವೇನು;

(ಆ) ಅತಿಥಿ ಕೊಠಡಿಗಳನ್ನು ಪಡೆಯುವುದಕ್ಕೆ ಆನ್‌ಲೈನ್ ವ್ಯವಸ್ಥೆಯನ್ನು ಮಾಡುವ ಯೋಚನೆ ಸರ್ಕಾರದ ಮುಂದಿದೆಯೇ;

(ಇ) ಅತಿಥಿ ಗೃಹದಲ್ಲಿರುವ ಕ್ಯಾಂಟೀನ್‌ನ್ನು ಮಧ್ಯಾಹ್ನ ೨ ಗಂಟೆಯಿಂದ ೫.೩೦ರವರೆಗೆ ಮುಚ್ಚಿಡುವುದರಿಂದ ರಾಜ್ಯಕ್ಕೆ ಆಗಮಿಸುವ ಅತಿಥಿಗಳಿಗೆ ತೊಂದರೆಯಾಗುತ್ತಿರುವುದು ನಿಜವೇ;

(ಇ) ನಿಜವಾಗಿದ್ದಲ್ಲಿ ಅದಕ್ಕೆ ಕೈಗೊಳ್ಳುವ ಕ್ರಮಗಳೇನು?

## ಬೆಂಗಳೂರು ನಗರ ವ್ಯಾಪ್ತಿಗೆ ಬರುವ ರೆಸ್ತೆಗಳ ಅಭಿವೃದ್ಧಿ ಬಗ್ಗೆ

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೬೩ (೧೨೨೫) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರ ವ್ಯಾಪ್ತಿಗೆ ಬರುವ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಹೆದ್ದಾರಿ ಹಾಗೂ ಬಿ.ಬಿ.ಎಂ.ಪಿ ವ್ಯಾಪ್ತಿಗೆ ಬರುವ ರಸ್ತೆಗಳಾವುವು; (ಪೂರ್ಣ ವಿವರ ಒದಗಿಸುವುದು)

(ಆ) ಸದರಿ ರಸ್ತೆಗಳು ಹಾಳಾಗಿದ್ದು ಇಲ್ಲಿಯವರೆಗೂ ಎಷ್ಟು ರಸ್ತೆಗಳನ್ನು ದುರಸ್ತಿ ಪಡಿಸಲಾಗಿದೆ; (ವಿವರ ಒದಗಿಸುವುದು)

(ಇ) ಇಲ್ಲಿಯವರೆಗೂ ದುರಸ್ಥಿ ಕಾರ್ಯ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ರಸ್ತೆಗಳ ದುರಸ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ೦೧.೦೬.೨೦೨೩ ರಿಂದ ಇಲ್ಲಿಯವರೆಗೆ ಬೆಂಗಳೂರು ನಗರ ವ್ಯಾಪ್ತಿಗೆ ಬರುವ ರಸ್ತೆಗಳ ಅಭಿವೃದ್ಧಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ; ಈವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ? (ಸಂಪೂರ್ಣ ವಿವರ ಒದಗಿಸುವುದು)

# ರಾಜ್ಯದ ಜಿ.ಡಿ.ಪಿ ಮತ್ತು ಆರ್ಥಿಕತೆಯ ಸಮಗ್ರ ಮಾಹಿತಿ ಬಗ್ಗೆ

ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

೧೦೬೪ (೧೨೨೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ೫ ವರ್ಷಗಳ ರಾಜ್ಯದ ಜಿ.ಡಿ.ಪಿ. ಮತ್ತು ಆರ್ಥಿಕತೆಯ ಸಮಗ್ರ ವಿವರ ಹಾಗೂ ರಾಜ್ಯದಲ್ಲಿ ತಲಾವಾರು ಆದಾಯ ಎಷ್ಟಿದೆ; ಈ ಆದಾಯ ಕುಸಿಯುವ ಸಾಧ್ಯತೆ ಇದೆಯೇ; ತಲಾವಾರು ಆದಾಯವನ್ನು ಪರಿಗಣಿಸಲು ಇರುವ ಮಾನದಂಡಗಳು ಯಾವುವು;

(ಆ) ರಾಜ್ಯದ ಜಿ.ಡಿ.ಪಿ.ಯನ್ನು ವೃದ್ಧಿಸಲು ಸರ್ಕಾರ ರೂಪಿಸಿರುವ ಕಾರ್ಯತಂತ್ರವೇನು; ಹಾಕಿಕೊಂಡಿರುವ ಕಾರ್ಯಕ್ರಮಗಳು ಯಾವುವು;

(ಇ) ೨೦೨೩-೨೪ ಮತ್ತು ೨೦೨೪-೨೫ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ರಾಜ್ಯದ ಒಟ್ಟಾರೆ ತೆರಿಗೆ ಸಂಗ್ರಹ ಗುರಿ ಎಷ್ಟು; ೨೦೨೩-೨೪ ಮತ್ತು ೨೦೨೪-೨೫ನೇ ಸಾಲಿಗೆ (ನವೆಂಬರ್ ಅಂತ್ಯದವರೆಗೆ) ಸಂಗ್ರಹವಾಗಿರುವ ತೆರಿಗೆ ಎಷ್ಟು; (ಇಲಾಖಾವಾರು ವಿವರ ನೀಡುವುದು)

(ಈ) ತೆರಿಗೆ ಸಂಗ್ರಹ ಗುರಿ ಸಾಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

F-4

## ರಾಜ್ಯದಲ್ಲಿರುವ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆಯ ಬಗ್ಗೆ

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೬೫ (೧೨೬೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಕಳೆದ ೩ ವರ್ಷಗಳಿಂದ ವರ್ಗಾವಣೆಯಾಗದೇ ಒಂದೇ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಎಷ್ಟು; (ಇನ್ಸ್‌ಪೆಕ್ಟರ್ ಹಾಗೂ ಠಾಣೆಗಳ ಜಿಲ್ಲಾವಾರು ವಿವರ ಒದಗಿಸುವುದು)

(ಆ) ಸದರಿ ಇನ್ಸ್‌ಪೆಕ್ಟರ್‌ಗಳನ್ನು ವರ್ಗಾವಣೆ ಮಾಡದಿರಲು ಕಾರಣವೇನು; (ವಿವರ ಒದಗಿಸುವುದು)

(ಇ) ಇನ್ಸ್‌ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಲು ಯಾವ ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ? (ವಿವರ ಒದಗಿಸುವುದು)

## ರಾಜ್ಯದಲ್ಲಿ ಜಿಎಸ್‌ಟಿ ತೆರಿಗೆ ಮೇಲ್ಮನವಿ ನ್ಯಾಯಮಂಡಳಿ ಸ್ಥಾಪಿಸಿರುವ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೬೬ (೧೨೮೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಸರಕು ಮತ್ತು ಸೇವಾ ತೆರಿಗೆ ಜಾರಿಯಾದ ನಂತರ ಸರ್ಕಾರವು ರಾಜ್ಯದಲ್ಲಿ ಜಿಎಸ್‌ಟಿ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಯನ್ನು ಸ್ಥಾಪಿಸಿದೆಯೇ;

(ಆ) ಇದ್ದಲ್ಲಿ ಜಿಎಎಸ್‌ಟಿ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಯಲ್ಲಿ ಎಷ್ಟು ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಮತ್ತು

ಈ ನ್ಯಾಯಮಂಡಳಿಯ ಸದ್ಯಸರುಗಳು ಯಾರು; ಸ್ಥಾಪಿಸದಿದ್ದಲ್ಲಿ ನ್ಯಾಯಮಂಡಳಿಯನ್ನು ಯಾವಾಗ ಸ್ಥಾಪಿಸಲಾಗುವುದು;

(ಇ) ೨೦೧೯ ರಿಂದ ೨೦೨೪ರವರೆಗೆ ಸದ್ಯಕ್ಕೆ ಜಿಎಸ್‌ಟಿ ಪ್ರಕರಣಗಳು/ ವಿವಾದಗಳನ್ನು ಕೆಎಟಿ ವತಿಯಿಂದ ನಿರ್ವಹಿಸುತ್ತಿದ್ದು ಎಷ್ಟು ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ ಮತ್ತು ಎಷ್ಟು ಪ್ರಕರಣಗಳು ಬಾಕಿ ಇವೆ; ಬಾಕಿ ಉಳಿದಿರುವ ಪ್ರಕರಣಗಳು ವಿಲೇಯಾಗದಿರುವುದಕ್ಕೆ ಕಾರಣಗಳೇನು;

(ಈ) ಜಿಎಸ್‌ಟಿ ತೆರಿಗೆಯ ಸಂಪನ್ಮೂಲವನ್ನು ಹಂಚಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಉ) ೨೦೨೩-೨೪ ಮತ್ತು ೨೦೨೪-೨೫ ಅವಧಿಯಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಹಣ ನೀಡಿದೆಯೇ: ಕೇಂದ್ರದಿಂದ ರಾಜ್ಯದ ಜಿಎಸ್‌ಟಿ ಪಾಲು ಪಡೆಯಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಊ) ಕೇಂದ್ರ ಸರ್ಕಾರವು ರಾಜ್ಯದ ಪಾಲನ್ನು ಕೊಡದಿದ್ದಲ್ಲಿ ನಮ್ಮ ತೆರಿಗೆ ನಮ್ಮ ಹಕ್ಕು ಆಗಿರುವುದರಿಂದ ನಮ್ಮ ತೆರಿಗೆ ಪಾಲನ್ನು ಪಡೆದುಕೊಳ್ಳಲು ಸರ್ಕಾರದ ಮುಂದಿರುವ ಕ್ರಮವೇನು?

## ತಿಪ್ಪಗೊಂಡನಹಳ್ಳಿ ಡ್ಯಾಮ್ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೬೭ (೧೨೮೧) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಅರ್ಕಾವತಿ ಮತ್ತು ಕುಮುದ್ವಾತಿ ನದಿಗಳ ಮೇಲೆ ನಿರ್ಮಿಸಲಾಗಿದ್ದ ತಿಪ್ಪಗೊಂಡನಹಳ್ಳಿ ಡ್ಯಾಮ್‌ನಿಂದ ಪ್ರತಿ ದಿನ ಬೆಂಗಳೂರು ನಗರಕ್ಕೆ ಸುಮಾರು ೨೦೦ ಎಂ.ಎಲ್.ಡಿ ನೀರನ್ನು ಈ ಹಿಂದೆ

ಪೂರೈಸುತ್ತಿದ್ದು, ಈಗ ಈ ಡ್ಯಾಮ್ ಬತ್ತಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಆ) ದಶಕಗಳಿಂದ ಬೆಂಗಳೂರು ನಗರಕ್ಕೆ ಮತ್ತು ಇತರೆ ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುತ್ತಿದ್ದ ತಿಪ್ಪಗೊಂಡನಹಳ್ಳಿ ಡ್ಯಾಮ್ ನೀರು ಬತ್ತಿ ಹೋಗುವುದಕ್ಕೆ ಕಾರಣಗಳೇನು; ಸದರಿ ಡ್ಯಾಮ್ ನಿರ್ವಹಣೆ ಕಾರ್ಯವನ್ನು ಈ ಹಿಂದೆ BWSSB ಸಂಸ್ಥೆಗೆ ನೀಡಲಾಗಿತ್ತೇ; ಎಲ್ಲಿಯವರಿಗೆ ಸದರಿ ಸಂಸ್ಥೆಯಿಂದ ಈ ಡ್ಯಾಮ್ ನಿರ್ವಹಣೆ ಕಾರ್ಯವನ್ನು ಕೈಗೊಳ್ಳಲಾಯಿತು;

(ಇ) ಸ್ವಾತಂತ್ರ್ಯ ನಂತರ ಈ ಡ್ಯಾಮ್ ನ ಪುನಶ್ಚೇತನಕ್ಕಾಗಿ ಹಲವಾರು ಖಾಸಗಿ ಸಂಸ್ಥೆಗಳು ಮುಂದಾಗಿದ್ದು: ಆದರೂ ಸಹ ಪುನಶ್ಚೇತನ ಕಾರ್ಯವು ಯಶಸ್ವಿಯಾಗಿ ಪರಿಣಮಿಸದಿರಲು ಕಾರಣಗಳೇನು: ಯಾವುದೇ ಪುನಃಶ್ಚೇತನ ಕಾರ್ಯ ಯಶಸ್ವಿಯಾಗದೇ ಇದ್ದಾಗ ೧೯೭೪ನೇ ಸಾಲಿನಲ್ಲಿ ಸರ್ಕಾರವು ಕಾವೇರಿ ನದಿಯ ನೀರನ್ನು ಬೆಂಗಳೂರು ನಗರಕ್ಕೆ ಪೂರೈಸಲು ಯೋಚಿಸಿದೆಯೇ;

(ಈ) ಕೈಗಾರಿಕಾ ತ್ಯಾಜ್ಯಗಳಿಂದ ತಿಪ್ಪಗೊಂಡನಹಳ್ಳಿ ಡ್ಯಾಮ್ ನ ಕಲುಷಿತ ನೀರು ದಿನ ಬಳಕೆಗೆ ಯೋಗ್ಯವಲ್ಲ ಎಂದು ಪರಿಗಣಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು ೨೦೧೮ರ ತೀರ್ಪಿನ ನಂತರ ಕರ್ನಾಟದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಈ ಡ್ಯಾಮ್ ನ ಪುನಶ್ಚೇತನಕ್ಕಾಗಿ ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು Taken Report ನೀಡುವುದು)

(ಉ) ೨೦೨೨-೨೩ರಲ್ಲಿ ರಾಜ್ಯ ಸರ್ಕಾರದ ವತಿಯಿಂದ ರೂ.೩೧೨ ಕೋಟಿಗಳ ಅನುದಾನವನ್ನು ತಿಪ್ಪಗೊಂಡನಹಳ್ಳಿ ಡ್ಯಾಮ್ Rejuvenation ಆಗಿ ಬಿಡುಗಡೆ ಮಾಡಿದ್ದು, ಅನುದಾನ ಬಳಕೆ ಬಗ್ಗೆ ವಿವರ ನೀಡುವುದು? (ಕಾಮಗಾರಿ ವಿವರ ನೀಡುವುದು)

# ಬೆಂಗಳೂರು ನಗರದ ಟ್ರಾಫಿಕ್ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ

ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-

೧೦೬೮ (೧೨೮೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರದಲ್ಲಿ ಟ್ರಾಫಿಕ್ ಸಮಸ್ಯೆಯನ್ನು ಪರಿಹರಿಸಲು ಪೊಲೀಸ್ ಇಲಾಖೆಯಿಂದ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸುತ್ತಿರುವ ಮಾಹಿತಿ ನಿಜವೇ: ಹಾಗಿದ್ದಲ್ಲಿ, ಆ ತಂತ್ರಜ್ಞಾನದ ಕುರಿತು ವಿವರವಾದ ಮಾಹಿತಿ ನೀಡುವುದು;

(ಆ) ಈ ಟ್ರಾಫಿಕ್ ಸಮಸ್ಯೆಗಳನ್ನು ಪರಿಹರಿಸಲು ಉಪಯೋಗಿಸಲಾಗುತ್ತಿರುವ ಯಂತ್ರೋಪಕರಣಗಳು ಯಾವುವು;

(ಇ) ಈ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳನ್ನು ಭಾರತದ ಯಾವ ಮಹಾನಗರದಲ್ಲಿ ಮತ್ತು ಬೇರೆ ದೇಶಗಳಲ್ಲಿ ಉಪಯೋಗಿಸಲಾಗುತ್ತಿದೆ; (ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದ್ದು, ಪೊಲೀಸ್ ಇಲಾಖೆ ವತಿಯಿಂದ ಈ ಅಪರಾಧಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು;

(ಉ) ಕರ್ನಾಟಕ ರಾಜ್ಯವನ್ನು ಸುರಕ್ಷಿತ ರಾಜ್ಯವನ್ನಾಗಿಸಲು ಇಲಾಖೆಯು ರೂಪಿಸಿಕೊಂಡಿರುವ ಯೋಜನೆಗಳು ಯಾವುವು; ಮತ್ತು ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಆಧುನೀಕರಣವನ್ನು ತರಲು ಇಲಾಖೆ ವತಿಯಿಂದ ಕೈಗೊಂಡಿರುವ ಕ್ರಮಗಳು ಯಾವುವು?

## ಪ್ರವಾಸಿ ತಾಣಗಳಲ್ಲಿ ಇರುವ ಸಮಸ್ಯೆಗಳ ಕುರಿತು

**ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೬೯ (೧೨೮೩) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರವಾಸಿ ಸ್ಥಳಗಳಲ್ಲಿ ನುರಿತ/ತರಬೇತಿ ಪಡೆದ ನೌಕರರ ಕೊರತೆ ಪ್ರವಾಸೋದ್ಯಮ ಇಲಾಖೆಯಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಪ್ರವಾಸಿ ಸ್ಥಳಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇದ್ದು ಕುಡಿಯುವ ನೀರು/ಸುಧಾರಿತ ಶೌಚಾಲಯಗಳು ಸೌಲಭ್ಯಗಳ (Well Maintained Toilets) ಪ್ರಥಮ ಚಿಕಿತ್ಸಾ ಕಿಟ್ ಗಳು/ ಕೆಫೆಟೇರಿಯಾಗಳ ಕೊರತೆ ಇರುವುದನ್ನು ಸರಿಪಡಿಸಲು ಸರಿಪಡಿಸಲು ಸರ್ಕಾರವು ಯಾವ ಕ್ರಮಗಳನ್ನು ತೆಗೆದುಕೊಂಡಿದೆ;

(ಇ) ಕರ್ನಾಟಕ ಪ್ರವಾಸೋದ್ಯಮದ ಪ್ರಮುಖ ಸವಾಲುಗಳಲ್ಲಿ ಭದ್ರತಾ ವಿಷಯವು ಒಂದಾಗಿದ್ದು. ವಿದೇಶ ಪ್ರವಾಸಿಗರ ಮೇಲೆ ಮತ್ತು ಮಹಿಳೆಯವರ ಮೇಲೆ ಲೈಂಗಿಕ ದೌರ್ಜನ್ಯ ಕಳ್ಳತನ ಮತ್ತು ಕ್ರೆಡಿಟ್ ಕಾರ್ಡ್ ವಂಚನೆಯ ಪ್ರಕರಣಗಳು ಹೆಚ್ಚಾಗುತ್ತಿದ್ದು, ಸಾರ್ವಜನಿಕ ಹಿಂಸಾಚಾರವು ಪ್ರವಾಸೋದ್ಯಮ ಇಲಾಖೆಯಲ್ಲಿ ಪ್ರಗತಿ ಸಾಧಿಸುವಲ್ಲಿ ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ. ಇವುಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಈ) ಕೇಂದ್ರ ಸರ್ಕಾರವು ಪ್ರವಾಸೋಧ್ಯಮವನ್ನು ಉತ್ತೇಜಿಸಲು "ಸ್ವದೇಶ ದರ್ಶನ ಯೋಜನೆ" ಈಗಾಗಲೇ ಜಾರಿಗೆ ತಂದಿದ್ದು. ಈ ರೀತಿ ರಾಜ್ಯದಲ್ಲಿ ಪ್ರವಾಸಿ ಸಾಮರ್ಥ್ಯವನ್ನು ಉತ್ತೇಜಿಸಲು

ಅಭಿವೃದ್ಧಿಪಡಿಸಲು ಮತ್ತು ಹೆಚ್ಚಿನ ಲಾಭಾಂಶವನ್ನು ಪಡೆದುಕೊಳ್ಳಲು "ನಾಡ ದರ್ಶನ" ದಂತಹ ಯಾವುದಾದರೂ ಯೋಜನೆ ರೂಪಿಸಲು ಯೋಜಿಸಿದೆಯೇ? (ಮಾಹಿತಿ ನೀಡುವುದು)

## ಮಹಿಳಾ ತಂತ್ರಜ್ಞಾನ ಉದ್ಯಾನವನಗಳ (Women Technology Park) ಕುರಿತು

**ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೭೦ (೧೨೮೪) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೇಂದ್ರ ಸರ್ಕಾರವು ಮಹಿಳಾ ತಂತ್ರಜ್ಞಾನ (Women Technology Park) ಒಂದು ಪ್ರದೇಶದಲ್ಲಿ ಮಹಿಳೆಯರ ಜೀವನೋಪಾಯ ವ್ಯವಸ್ಥೆಯನ್ನು ಸುಧಾರಿಸುವ ಗುರಿಯನ್ನು ಹೊಂದಿ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅವಿಷ್ಕಾರಗಳು ಮಧ್ಯಸ್ಥಿಕೆಗಳ ಮೂಲಕ ಜೀವನೋಪಾಯ ವ್ಯವಸ್ಥೆಯ ಬಲವಾದ ಲಿಂಕ್‌ನ್ನು ಆಧರಿಸಿ ಸಾಮಾಜಿಕ ಉದ್ಯಮಶೀಲತೆ ಮತ್ತು ಮಹಿಳಾ ಉದ್ಯೋಗವನ್ನು ಉತ್ತೇಜಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದನ್ನು ರಾಜ್ಯದಲ್ಲೂ ಅನುಷ್ಠಾನಗೊಳಿಸಲಾಗಿದೆಯೇ;

(ಆ) ಹಾಗಿದ್ದಲ್ಲಿ, ಕಳೆದ ಮೂರ ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಮಹಿಳೆಯರ ಈ ಯೋಜನೆ/ಕಾರ್ಯಕ್ರಮದ ಲಾಭ ಪಡೆದಿದ್ದಾರೆ; ಇಲ್ಲವಾದಲ್ಲಿ, ಈ ಕಾರ್ಯಕ್ರಮದ ಕುರಿತು ಜಾಗೃತಿ ಮೂಡಿಸಲು ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಮಹಿಳೆಯರ ಸಬಲೀಕರಣಕ್ಕಾಗಿ ಈ ಕಾರ್ಯಕ್ರಮವನ್ನು ಹೊರತುಪಡಿಸಿ

ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ಯೋಜನೆ/ ಕಾರ್ಯಕ್ರಮಗಳಾವುವು? (ವಿವರ ನೀಡುವುದು)

## ಜನತಾ ದರ್ಶನದ ಕುರಿತು

**ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ):-**

೧೦೭೧ (೧೧೭೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರಸ್ತುತ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಈವರೆಗೆ (೩೦.೧೧.೨೦೨೪ರವರೆಗೆ) ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಂಡಿದ್ದ ಜನತಾ ದರ್ಶನದಲ್ಲಿ ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು).

(ಆ) ಈ ಅರ್ಜಿಗಳ ಪೈಕಿ ಎಷ್ಟು ಅರ್ಜಿಗಳಿಗೆ ಪರಿಹಾರ ಕಲ್ಪಿಸಲಾಗಿದೆ; ಬಾಕಿ ಇರುವ ಅರ್ಜಿಗಳಷ್ಟು; ಬಾಕಿ ಅರ್ಜಿಗಳ ವಿಲೇವಾರಿಗೆ ಕೈಗೊಂಡಿರುವ ಕ್ರಮಗಳೇನು; (ಸಮಗ್ರ ವಿವರಗಳನ್ನು ಇಲಾಖೆವಾರು ಒದಗಿಸುವುದು)

(ಇ) ಜಿಲ್ಲಾ ಮಟ್ಟದಲ್ಲಿ ಸಚಿವರಿಂದ ಎಷ್ಟು ಬಾರಿ ಜನತಾ ದರ್ಶನ ನಡೆದಿದೆ; ಸಚಿವರಿಂದ ನಿಯಮಿತವಾಗಿ ಜನತಾ ದರ್ಶನ ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಜಿಲ್ಲಾ ಉಸ್ತುವಾರಿ ಸಚಿವರು/ಸಚಿವರಿಂದ ಜಿಲ್ಲೆಗಳಲ್ಲಿ ಯಾವ ದಿನಾಂಕಗಳಂದು ಜನತಾ ದರ್ಶನ ನಡೆಸಲಾಗಿದೆ; (ಸಮಗ್ರವಾದ ವಿವರ ನೀಡುವುದು)

(ಈ) ಜನತಾ ದರ್ಶನ ವೇಳೆ ಎಷ್ಟು ಜನ ಸರ್ಕಾರಿ ಅಧಿಕಾರಿ/ನೌಕರರ ವಿರುದ್ಧ ದೂರುಗಳು ಬಂದಿವೆ; ಈ ದೂರುಗಳ ಆಧಾರದ

ಮೇಲೆ ಸದರಿ ಅಧಿಕಾರಿ/ನೌಕರರ ವಿರುದ್ಧ ಕೈಗೊಂಡಿರುವ ಕ್ರಮಗಳೇನು?

## ಪೊಲೀಸ್ ಕಾನ್‌ಸ್ಟೇಬಲ್‌ಗಳನ್ನು ವರ್ಗಾವಣೆ ಕುರಿತು

ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ):-

೧೦೭೨ (೧೧೭೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ೩ ವರ್ಷಗಳಲ್ಲಿ ಎಷ್ಟು ಪೊಲೀಸ್ ಹೆಡ್ ಕನ್‌ಸ್ಟೇಬಲ್‌ಗಳ ಮತ್ತು ಕಾನ್‌ಸ್ಟೇಬಲ್‌ಗಳ ವರ್ಗಾವಣೆ ಆಗಿದ್ದಾರೆ; ವರ್ಗಾವಣೆ ಕೋರಿ ಸಲ್ಲಿಕೆಯಾಗಿದ್ದ ಮನವಿಗಳೆಷ್ಟು; ವಗಾವಣೆಗಾಗಿ ಬಡ್ತಿ ತೊರೆದು ವರ್ಗಾವಣೆ ಅರ್ಜಿ ಸಲ್ಲಿಸಿದ್ದ ಸಿಬ್ಬಂದಿಗಳೆಷ್ಟು; ಈ ಪೈಕಿ ಎಷ್ಟು ಸಿಬ್ಬಂದಿಗಳನ್ನು ವರ್ಗಾವಣೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಆ) ಅಂತರ್ ಜಿಲ್ಲಾ ವರ್ಗಾವಣೆಯೂ ಸೇರಿದಂತೆ ವರ್ಗಾವಣೆ ಕೋರಿಕೆ ಸಲ್ಲಿಸಿರುವ ಅರ್ಹ ಸಿಬ್ಬಂದಿಗಳ ವರ್ಗಾವಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ವರ್ಗಾವಣೆಗೆ ಕ್ರಮ ವಹಿಸಲಾಗುವುದು;

(ಇ) ಒಂದು ಘಟಕದಿಂದ ಮತ್ತೊಂದು ಘಟಕಕ್ಕೆ ವರ್ಗಾವಣೆಗೊಂಡಲ್ಲಿ, ತಮ್ಮ ಸೇವಾ ಜೇಷ್ಠತೆ ಬಿಟ್ಟು ಆ ಘಟಕದ ಕಿರಿತನಕ್ಕೆ ಅನುಗುಣವಾಗಿ ಸೇವಾ ಜೇಷ್ಠತೆಯನ್ನು ಹೊಂದಬೇಕೆಂಬ ಷರತ್ತು ವಿಧಿಸಲಾಗಿದೆಯೇ; ಈ ಷರತ್ತಿಗೆ ಒಪ್ಪಿ ಎಷ್ಟು ಸಿಬ್ಬಂದಿಗಳು ವರ್ಗಾವಣೆ ಕೋರಿಕೆ ಸಲ್ಲಿಸಿದ್ದರು; ಎಷ್ಟು ಸಿಬ್ಬಂದಿಗಳ ವರ್ಗಾವಣೆ ಆಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಈ) ವರ್ಗಾವಣೆ ಅವಕಾಶ ಸಿಗದೆ ಸಿಬ್ಬಂದಿಗಳಿಗೆ ತೀವ್ರ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ವರ್ಗಾವಣೆ ಕೋರಿರುವ ಸಿಬ್ಬಂದಿಗಳ ಹಿತದೃಷ್ಟಿಯಿಂದ ವರ್ಗಾವಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

**ಎನ್.ಪಿ.ಎಸ್ ರದ್ದುಗೊಳಿಸಿ ಒ.ಪಿ.ಎಸ್ ಜಾರಿಗೊಳಿಸುವ ಕುರಿತು**

**ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ):-**

೧೦೭೩ (೧೧೭೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಎನ್.ಪಿ.ಎಸ್. ರದ್ದುಗೊಳಿಸಿ ಒ.ಪಿ.ಎಸ್. ಜಾರಿಗೊಳಿಸುವ ಪ್ರಕ್ರಿಯೆ ಸರ್ಕಾರದ ಹಂತದಲ್ಲಿದೆಯೇ:

(ಅ) ಒ.ಪಿ.ಎಸ್. ಜಾರಿಗೊಳಿಸಲು ಇರುವ ಅಡಚಣೆಗಳೇನು: (ವಿವರಿಸುವುದು)

(ಇ) ಒ.ಪಿ.ಎಸ್. ಜಾರಿಗೋಳಿಸಿದ್ದಲ್ಲಿ ಒಟ್ಟು ಸರ್ಕಾರಕ್ಕೆ ತಗಲುವ ಅಂದಾಜು ಮೊತ್ತ ಎಷ್ಟು; (ಮಾಹಿತಿಯೊಂದಿಗೆ ವಿವರಿಸುವುದು)

(ಈ) ರಾಜ್ಯ ಸರ್ಕಾರಿ ನೌಕರರ ಒ.ಪಿ.ಎಸ್. ಬೇಡಿಕೆಯನ್ನು ಸರ್ಕಾರವು ಈಡೇರಿಸುವುದೇ ಯಾವ ಕಾಲಮಿತಿಯೊಳಗೆ ಈಡೇರಿಸಲಾಗುವುದೆಂದು ತಿಳಿಸುವುದು?

**ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿನ ಸರ್ಕಾರದ ವಿವಿಧ ಹುದ್ದೆಗಳ ಕುರಿತು**

**ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ):-**

೧೦೭೪ (೧೧೭೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರಸ್ತುತ ವರ್ಷದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ರಾಜ್ಯ ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿ ಹಂತದಲ್ಲಿರುವ ಪರೀಕ್ಷೆಗಳಾವುವು; (ಇಲಾಖೆವಾರು/ಹುದ್ದೆವಾರು ಮಾಹಿತಿ ನೀಡುವುದು)

(ಆ) ಸದರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಸಂಖ್ಯೆ ಮತ್ತು ಸಂಗ್ರಹವಾದ ಶುಲ್ಕದ ಒಟ್ಟು ಮೊತ್ತ ಎಷ್ಟು; (ನೇಮಕಾತಿ ಅಧಿಸೂಚನೆಗಳಿಗುನಪಾರ ಪೂರ್ಣ ಮಾಹಿತಿಯನ್ನು ಒದಗಿಸುವುದು)

(ಇ) ಸದರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳು ಯಾವ ಹಂತದಲ್ಲಿವೆ ಮತ್ತು ಯಾವ ಕಾಲಮಿತಿಯಲ್ಲಿ ಈ ನೇಮಕಾತಿಗಳನ್ನು ಪೂರ್ಣಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)

## ಅಕ್ರಮ ಮದ್ಯ ಮಾರಾಟ ಮಾಡುತ್ತಿರುವವರ ಕುರಿತು

**ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ):-**

೧೦೭೫ (೧೧೮೦) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಿಜಯಪುರ, ಬಾಗಲಕೋಟಿ ಮತ್ತು ಬೆಳಗಾವಿ ಜಿಲ್ಲೆಯ ಗಡಿ ಭಾಗದಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಲೈಸೆನ್ಸ್ ಇಲ್ಲದೆ. ಪ್ರತಿ ಹಳ್ಳಿಗಳಲ್ಲಿಯೂ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರದ ಕ್ರಮವೇನು;

(ಆ) ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಕುರಿತು ಸಾರ್ವಜನಿಕರಿಂದ ದಾಖಲಾದ ದೂರುಗಳ ಸಂಖ್ಯೆ ಎಷ್ಟು; ದೂರು ದಾಖಲಾದ ಮೇಲೆ ಸರ್ಕಾರ ಅಂತವರ ವಿರುದ್ಧ ಯಾವ ಕ್ರಮ ಕೈಗೊಂಡಿದೆ: (ಪ್ರಕರಣವಾರು ಮತ್ತು ಪೊಲೀಸ್ ಠಾಣೆವಾರು ಮಾಹಿತಿ ನೀಡುವುದು)

(ಇ) ಗಡಿ ಭಾಗದ ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವವರ ವಿರುದ್ಧ ಸಾರ್ವಜನಿಕ ಹಿತದೃಷ್ಟಿಯಿಂದ ಸ್ವ-ಇಚ್ಛೆಯಿಂದ ಪ್ರಕರಣಗಳನ್ನು ದಾಖಲಿಸಲಾಗಿದೆಯೇ; ದಾಖಲಿಸಿದ್ದಲ್ಲಿ, ಮಾಹಿತಿ ನೀಡುವುದು:

(ಈ) ವಿಜಯಪುರ ಜಿಲ್ಲೆಯ ಗಡಿ ಭಾಗಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವವರೊಂದಿಗೆ ಸ್ಥಳೀಯ ಪೊಲೀಸ್ ಅಧಿಕಾರಿಗಳು ಮತ್ತು ಅಬಕಾರಿ ಅಧಿಕಾರಿಗಳೇ ಶಾಮೀಲಾಗಿ ಅಕ್ರಮ ಮದ್ಯ ಮಾರಾಟ ಮಾಡಲು ಅನುವು ಮಾಡಿಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ. ಅಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ತಾಲ್ಲೂಕುವಾರು/ ಪ್ರಕರಣವಾರು ಸಂಪೂರ್ಣ ಮಾಹಿತಿ ನೀಡುವುದು)

## ಹಟ್ಟಿ ಪಟ್ಟಣಕ್ಕೆ ಅಗ್ನಿಶಾಮಕ ಠಾಣೆ ಮಂಜೂರು ಮಾಡುವ ಬಗ್ಗೆ

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೭೬ (೧೨೫೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಯಚೂರು ಜಿಲ್ಲೆ, ಲಿಂಗಸೂರು ತಾಲ್ಲೂಕಿನ ಹಟ್ಟಿ ಪಟ್ಟಣಕ್ಕೆ ಅಗ್ನಿಶಾಮಕ ಠಾಣೆ ಮಂಜೂರು ಮಾಡಬೇಕೆಂಬ ಬೇಡಿಕೆ ಬಹುಕಾಲದಿಂದ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಹಟ್ಟಿ ಪಟ್ಟಣಕ್ಕೆ ಅಗ್ನಿ ಶಾಮಕ ಠಾಣೆ ಕಟ್ಟಡ ಮಂಜೂರು ಮಾಡಿ ಅಗತ್ಯ ಸಿಬ್ಬಂದಿಗಳನ್ನು ಒದಗಿಸಿ ಆ ಮೂಲಕ ಆಗ್ನಿಶಾಮಕ ಠಾಣೆ ಕಾರ್ಯಾರಂಭ ಮಾಡಲು ಇದುವರೆವಿಗೂ ಸರ್ಕಾರ ಅಗತ್ಯ ಕ್ರಮ ವಹಿಸದಿರಲು ಕಾರಣಗಳೇನು;

(ಇ) ಯಾವ ಕಾಲಮಿತಿಯೊಳಗೆ ಅಗ್ನಿಶಾಮಕ ಠಾಣೆಗೆ ಕಟ್ಟಡ ಮಂಜೂರು ಮಾಡಿ ಅದು ಕಾರ್ಯಾರಂಭ ಮಾಡಲು ಸರ್ಕಾರ ಅಗತ್ಯ ಕ್ರಮ ವಹಿಸುವುದೆ?

## ಕರಾವಳಿಯ ಪ್ರವಾಸೋದ್ಯಮ ಅಭಿವೃದ್ಧಿ ಕುರಿತು

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೭೭ (೧೨೮೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹೊಸ ಬಗೆಯ ಪ್ರವಾಸಿ ಆಕರ್ಷಣೆಗಳಿಗೆ ಪೂರಕವಾದ ಭೌಗೋಳಿಕ, ಸಾಂಸ್ಕೃತಿಕ ಹಾಗೂ ಪಾರಂಪರಿಕ ಹಿನ್ನಲೆಯನ್ನು ಹೊಂದಿರುವ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ಹೇರಳ ಅವಕಾಶಗಳಿರುವ ಕರಾವಳಿಯ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಹಾಗೂ ರೂಪಿಸಿರುವ ಯೋಜನೆಗಳೇನು;

(ಆ) ಪ್ರವಾಸೋದ್ಯಮ ಚಟುವಟಿಕೆಗಳನ್ನು ಯೋಜಿತ ರೀತಿಯಲ್ಲಿ ನಡೆಸಲು ಹಾಗೂ ಉತ್ತೇಜನ ನೀಡಲು "ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ" ಯನ್ನು ಸ್ಥಾಪಿಸಲು ಸರ್ಕಾರ ಕೂಡಲೇ ಕ್ರಮ ವಹಿಸುವುದೇ

(ಇ) ಕರಾವಳಿಯಲ್ಲಿ ಯೋಜಿತ ಸುಸ್ಥಿರ ಹಾಗೂ ಪರಿಸರ ಸ್ನೇಹಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಮಾಸ್ಟರ್ ಪ್ಲಾನ್ ರೂಪಿಸಿ ಆ ಮೂಲಕ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಸಮುದಾಯದ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಸಮನ್ವಯ ಸಾಧಿಸಲು ಸರ್ಕಾರ ವಹಿಸಲಿರುವ ಕ್ರಮಗಳೇನು?

## ಬಂಡವಾಳ ವೆಚ್ಚದ ಕೊರತೆಯಿರುವ ಬಗ್ಗೆ

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೭೮ (೧೨೮೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರದ ರಾಜಸ್ವ ವೆಚ್ಚದ ಹೆಚ್ಚಳದಿಂದಾಗಿ ಶೇಕಡವಾರು ಬಂಡವಾಳ ವೆಚ್ಚದಲ್ಲಿ ಕುಸಿತ ಕಂಡಿದೆಯೇ;

(ಆ) ಪ್ರಸ್ತುತ ಸರ್ಕಾರವು ಬಂಡವಾಳ ವೆಚ್ಚದ ಕೊರತೆಯಿಂದಾಗಿ ಯಾವ ಯಾವ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಕೈಬಿಟ್ಟಿದೆ; (ಇಲಾಖಾವಾರು ವಿವರ ಹಾಗೂ ಮೊತ್ತವನ್ನು ತಿಳಿಸುವುದು)

(ಇ) ಬಂಡವಾಳದ ಕೊರತೆಯಿಂದಾಗಿ ಭೌತಿಕ ಗುರಿಗಳನ್ನು ಯಾವ ಯಾವ ಯೋಜನೆ ಹಾಗೂ ಕಾರ್ಯಕ್ರಮಗಳಲ್ಲಿ ಕಡಿತ ಮಾಡಲಾಗಿದೆ; (ಇಲಾಖಾವಾರು ವಿವರ ಹಾಗೂ ಮೊತ್ತವನ್ನು ತಿಳಿಸುವುದು)

(ಈ) ರಾಜಸ್ವ ವೆಚ್ಚದ ಹೆಚ್ಚಳವನ್ನು ಬೆಲೆ ಏರಿಕೆ ಹಾಗೂ ಹಣದುಬ್ಬರದಿಂದ ಸರಿಪಡಿಸಿಕೊಳ್ಳುವುದು ವೈಜ್ಞಾನಿಕ ವಿಧಾನವೇ?

## ರಾಜಸ್ವ ಜಮೆಯ ನಿರೀಕ್ಷಿತ ಗುರಿಯನ್ನು ತಲುಪದಿರುವ ಬಗ್ಗೆ

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ (ವಿಧಾನ ಸಭೆಯಿಂದ ಚುನಾಯಿತರಾದವರು):-**

೧೦೭೯ (೧೨೮೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೨೩-೨೪ನೇ ಸಾಲಿನಲ್ಲಿ ಎಷ್ಟು ರಾಜಸ್ವ ಜಮೆಯನ್ನು ಅಂದಾಜಿಸಲಾಗಿತ್ತು: ಸಾಧಿಸಿದ ಗುರಿಯೆಷ್ಟು;

(ಆ) ಅಂದಾಜಿಸಲಾದ ಗುರಿಯನ್ನು ತಲುಪುವಲ್ಲಿ ಹಣಕಾಸು ಇಲಾಖೆ ವಿಫಲವಾಗಲು ಕಾರಣಗಳೇನು:

(ಇ) ನಿರೀಕ್ಷಿತ ಗುರಿಯ ರಾಜಸ್ವ ಜಮೆಯ ವೈಫಲ್ಯವನ್ನು ಹೇಗೆ ಸರಿದೂಗಿಸಲಾಯಿತು: ಯಾವ ಯೋಜನೆಯನ್ನು ಕೈಬಿಡಲಾಯಿತು?

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ/ಮೇಲ್ದರ್ಜೆಗೇರಿಸಿದ ಪೊಲೀಸ್ ಠಾಣೆಗಳ ಕುರಿತು

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೮೦ (೧೨೯೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು ಮತ್ತು ಯಾವುವು; ಸದರಿ ಠಾಣೆಗಳಿಗೆ ಮಂಜೂರಾಗಿರುವ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಲ್ಲಿ ಹೊಸದಾಗಿ ಎಷ್ಟು ಪೊಲೀಸ್ ಠಾಣೆಗಳನ್ನು ಪ್ರಾರಂಭಿಸಲಾಗಿದೆ: ಅಥವಾ ಮೇಲ್ದರ್ಜೆಗೇರಿಸಲಾಗಿದೆ;

(ಇ) ಸದರಿ ಹೊಸದಾಗಿ ಪ್ರಾರಂಭಿಸಲಾದ ಅಥವಾ ಮೇಲ್ದರ್ಜೆಗೇರಿಸಲಾದ ಎಲ್ಲಾ ಪೊಲೀಸ್ ಠಾಣೆಗಳಿಗೆ ಅಗತ್ಯ ಕಛೇರಿಗಳು ಸಿಬ್ಬಂದಿಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಕಲ್ಪಿಸಲಾಗಿದೆಯೇ;

(ಈ) ಸದರಿ ಹೊಸದಾಗಿ ಪ್ರಾರಂಭಿಸಲಾದ ಅಥವಾ ಮೇಲ್ದರ್ಜೆಗೇರಿಸಲಾದ ಎಲ್ಲಾ ಪೊಲೀಸ್ ಠಾಣೆಗಳಿಗೆ ಪೂರ್ಣ ಪ್ರಮಾಣದಲ್ಲಿ ಸಿಬ್ಬಂದಿಗಳು ಹಾಗೂ ಅಧಿಕಾರಿಗಳನ್ನು ನಿಯುಕ್ತಿಗೊಳಿಸಲಾಗಿದೆಯೇ?

**ಬಿ.ಬಿ.ಎಂ.ಪಿ., ಯಲ್ಲಿ ನಡೆದಿರುವ ಅಕ್ರಮ ಎ–ಖಾತಾ ಹಂಚಿಕೆ ಬಗ್ಗೆ**

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು):–**

೧೦೮೧ (೧೧೬೪) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಕಲಿ 'ಎ' ಖಾತೆ ಸೃಷ್ಟಿಯಿಂದ ಸರ್ಕಾರಕ್ಕೆ ನಷ್ಟ ಉಂಟಾಗಿರುವ ಬಗ್ಗೆ ದೂರುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ತನಿಖೆ ನಡೆಸಿದೆಯೇ; (ದೂರುಗಳ ವಿವರ ನೀಡುವುದು)

(ಆ) ಎಷ್ಟು ನಕಲಿ 'ಎ' ಖಾತಾ ಸೃಷ್ಟಿಸಲಾಗಿದೆ; ಇದರಿಂದ ಆಗಿರುವ ನಷ್ಟ ಎಷ್ಟು; ಬೆಳಕಿಗೆ ಬಂದಿರುವ ಪ್ರಕರಣಗಳ ಹೊರತಾಗಿ

ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿ ನಡೆದಿರುವ ಈ ರೀತಿಯ ಪ್ರಕರಣಗಳನ್ನು ಪತ್ತೆ ಹಚ್ಚಲು ಉನ್ನತ ಮಟ್ಟದ ತನಿಖೆಗೆ ಸರ್ಕಾರ ಆದೇಶಿಸುವುದೇ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

(ಇ) ನಕಲಿ 'ಎ' ಖಾತೆ ಸೃಷ್ಟಿ ಪ್ರಕರಣದಲ್ಲಿ ಎಷ್ಟು ಜನ ಅಧಿಕಾರಿ/ ನೌಕರರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; ಎಷ್ಟು ಜನರನ್ನು ಬಂಧಿಸಲಾಗಿದೆ; (ಅಧಿಕಾರಿ/ನೌಕರರ ವಿವರ ನೀಡುವುದು)

(ಈ) ಅಕ್ರಮವಾಗಿ ನೀಡಿರುವ 'ಎ' ಖಾತೆ ರದ್ದು ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ; ಈವರೆಗೆ ರದ್ದುಗೊಂಡಿರುವ 'ಎ' ಖಾತೆ ಆಸ್ತಿಗಳೆಷ್ಟು' (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

(ಉ) ನಕಲಿ 'ಎ' ಖಾತೆ ಸೃಷ್ಟಿ ವಿಚಾರದಲ್ಲಿ ರಾಜ್ಯ ಉಚ್ಚ ನ್ಯಾಯಾಲಯ ನೀಡಿರುವ ಸೂಚನೆ ಏನು; ನ್ಯಾಯಾಲಯದ ಸೂಚನೆಯನ್ನು ಪಾಲಿಸಲಾಗಿದೆಯೇ? (ವಿವರ ನೀಡುವುದು)

## ಎತ್ತಿನ ಹೊಳೆ ಸಮಗ್ರ ಕುಡಿಯುವ ಯೋಜನೆ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) ಹಾಗೂ**

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೮೨ (೧೧೬೫+೧೧೬೧) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಎತ್ತಿನಹೊಳೆ ಯೋಜನೆ ಆರಂಭವಾಗಿದ್ದು, ಯಾವಾಗ; ಎಷ್ಟು ಹಂತಗಳಲ್ಲಿ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿತ್ತು; ಪ್ರಸ್ತುತ ಯೋಜನೆಯ ಕಾಮಗಾರಿ ಯಾವ ಹಂತದಲ್ಲಿದೆ; ಯೋಜನೆಯ ಸಮಗ್ರ ಮಾಹಿತಿ ನೀಡುವುದು;

(ಆ) ಯೋಜನೆಯ ಅಂದಾಜು ವೆಚ್ಚ ಎಷ್ಟು; ಪ್ರಸ್ತುತ ಯೋಜನಾ ವೆಚ್ಚದಲ್ಲಿ ಆಗಿರುವ ಹೆಚ್ಚಳ ಎಷ್ಟು; ಈವರೆಗೆ ವೆಚ್ಚ ಮಾಡಿರುವ ಹಣ ಎಷ್ಟು; ನಿರ್ವಹಿಸಿರುವ ಕಾಮಗಾರಿಗಳು ಯಾವುವು; ಈ ಕಾಮಗಾರಿಗಳಿಗೆ ಆಗಿರುವ ವೆಚ್ಚ ಎಷ್ಟು; (ಕಾಮಗಾರಿವಾರು ವಿವರ ನೀಡುವುದು)

(ಇ) ಈ ಯೋಜನೆಯಿಂದ ಎಷ್ಟು ಜಿಲ್ಲೆಗಳು ಮತ್ತು ತಾಲ್ಲೂಕುಗಳಿಗೆ ಅನುಕೂಲವಾಗಲಿದೆ ಅವು ಯಾವುವು; ಯಾವ ಯಾವ ಜಿಲ್ಲೆಗಳಿಗೆ/ ತಾಲ್ಲೂಕುಗಳಿಗೆ/ಗ್ರಾಮಗಳಿಗೆ ಎಷ್ಟೆಷ್ಟು ಪ್ರಮಾಣದ ನೀರನ್ನು ಹರಿಸಲಾಗುವುದು;

(ಈ) ಯೋಜನೆ ಉದ್ಘಾಟನೆ ನಂತರ ಎಷ್ಟು ಹಳ್ಳಿಯ ಜನರಿಗೆ ಕುಡಿಯುವ ನೀರು ಪೂರೈಸಲಾಗಿದೆ; ಎಷ್ಟು ಕೆರೆಗಳನ್ನು ತುಂಬಿಸಲಾಗಿದೆ; (ಜಿಲ್ಲಾವಾರು ಕೆರೆಗಳ ಹೆಸರು ಸಹಿತ ವಿವರ ನೀಡುವುದು)

(ಉ) ಈ ಯೋಜನೆಗೆ ನೀರಿನ ಲಭ್ಯತೆ ಕುರಿತು ನಡೆಸಿದ್ದ ಅಧ್ಯಯನ ವರದಿಯ ಪ್ರತಿ ನೀಡುವುದು; ಅಧ್ಯಯನ ವರದಿಯಲ್ಲಿ ತಪ್ಪಾಗಿದ್ದು, ಎತ್ತಿನಹೊಳೆ ಯೋಜನೆ ಅವೈಜ್ಞಾನಿಕವೆಂದು ಕೇಂದ್ರೀಯ ಜಲ ಆಯೋಗ ಪತ್ರ ಬರೆದಿರುವುದು ನಿಜವೇ; (ಪತ್ರದ ಪ್ರತಿ ನೀಡುವುದು) ಈ ಕುರಿತು ಸರ್ಕಾರದ ವಾದವೇನು;

(ಊ) ಈ ಯೋಜನೆಗೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ತಕರಾರು ತೆಗೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ತಕರಾರು ವ್ಯಕ್ತಪಡಿಸಲು ಕಾರಣವೇನು; ತಕರಾರಿಗೆ ನೀಡಿರುವ ಸ್ಪಷ್ಟನೆ ಹಾಗೂ ಹೆಚ್ಚುವರಿ ಮಾಹಿತಿಗಳೇನು; (ರಾಜ್ಯ ಸರ್ಕಾರದಿಂದ ಬರೆದಿರುವ ಪತ್ರದ ಪ್ರತಿ ನೀಡುವುದು)

(ಋ) ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಚಿಕ್ಕಮಗಳೂರು ನಗರದಲ್ಲಿ ಕೆರೆ/ಕಾಲುವೆ/ನಾಲೆಗಳ ಒತ್ತುವರಿ ಬಗ್ಗೆ**

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೮೩ (೧೧೬೬) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಚಿಕ್ಕಮಗಳೂರು ನಗರದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸೇರಿದ ಎಷ್ಟು ಕಾಲುವೆಗಳು/ನಾಲೆಗಳು/ಕೆರೆಗಳು ಒತ್ತುವರಿ ಆಗಿವೆ; ಎಲ್ಲಿ, ಎಷ್ಟು ಪ್ರಮಾಣದಲ್ಲಿ ಒತ್ತುವರಿ ಆಗಿದೆ; (ಸಂಪೂರ್ಣ ವಿವರ ಒದಗಿಸುವುದು)

(ಆ) ಕಾಲುವೆಗಳು/ನಾಲೆಗಳು/ಕೆರೆಗಳ ಪಕ್ಕದಲ್ಲಿ ನಿಗದಿಪಡಿಸಿರುವ ಬಫರ್ ಝೋನ್ ಎಷ್ಟು; (ವಿವರ ನೀಡುವುದು)

(ಇ) ಒತ್ತುವರಿಯಾಗಿರುವ ಕೆರೆಗಳು/ನಾಲೆಗಳು/ಕಾಲುವೆಗಳ ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈವರೆಗೆ ಎಷ್ಟು ಒತ್ತುವರಿ ತೆರವುಗೊಳಿಸಲಾಗಿದೆ; (ಸಮಗ್ರ ವಿವರ ನೀಡುವುದು)

(ಈ) ಒತ್ತುವರಿ ತೆರವುಗೊಂಡ ಪ್ರದೇಶವನ್ನು ರಕ್ಷಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

## ಅಬಕಾರಿ ಕಛೇರಿಗಳಲ್ಲಿನ ಲೋಕಾಯುಕ್ತ ದಾಳಿ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೮೪ (೧೧೬೭) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಅಬಕಾರಿ ಇಲಾಖೆಯ ಕಛೇರಿಗಳ ಮೇಲೆ ಲೋಕಾಯುಕ್ತ ದಾಳಿ ನಡೆದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಯಾವ್ಯಾವ ಕಛೇರಿಗಳ ಮೇಲೆ ದಾಳಿ ನಡೆದಿದೆ; (ವಿವರ ನೀಡುವುದು)

(ಆ) ಅಬಕಾರಿ ಇಲಾಖೆಯಲ್ಲಿ ನಡೆಯುತ್ತಿರುವ ವ್ಯಾಪಕ ಅಕ್ರಮ/ಅವ್ಯವಹಾರಗಳ ಬಗ್ಗೆ ಲೋಕಾಯುಕ್ತಕ್ಕೆ ದೂರು ಸಲ್ಲಿಕೆಯಾಗಿದ್ದ ಕಾರಣ ದಾಳಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಲೋಕಾಯುಕ್ತ ದಾಳಿ ವೇಳೆ ಕಂಡುಬಂದಿರುವ ಅಕ್ರಮ/ಅವ್ಯವಹಾರಗಳ ವಿವರ ನೀಡುವುದು; ದಾಳಿಯ ನಂತರ ದಾಖಲಾಗಿರುವ ಪ್ರಕರಣಗಳು ಎಷ್ಟು; (ಪ್ರಕರಣವಾರು ವಿವರ ನೀಡುವುದು)

(ಈ) ಈ ಅಕ್ರಮ/ಅವ್ಯವಹಾರಗಳಿಗೆ ಸಂಬಂಧಪಟ್ಟಂತೆ ಎಷ್ಟು ಜನರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

## ಪೊಲೀಸ್ ಪೇದೆಗಳ ವರ್ಗಾವಣೆಯಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೮೫ (೧೧೬೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ೦೩ ವರ್ಷಗಳಿಂದ ಎಷ್ಟು ಪೊಲೀಸ್ ಹೆಡ್ ಕಾನ್‌ಸ್ಟೇಬಲ್‌ಗಳು ಮತ್ತು ಕಾನ್‌ಸ್ಟೇಬಲ್‌ಗಳ ವರ್ಗಾವಣೆ ಆಗಿದೆ; ವರ್ಗಾವಣೆ ಕೋರಿ ಸಲ್ಲಿಕೆಯಾಗಿದ್ದ ಮನವಿಗಳೆಷ್ಟು; ವರ್ಗಾವಣೆಗಾಗಿ ಬಡ್ತಿ ತೊರೆದು ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದ ಸಿಬ್ಬಂದಿಗಳೆಷ್ಟು; ಈ ಪೈಕಿ ಎಷ್ಟು ಸಿಬ್ಬಂದಿಗಳನ್ನು ವರ್ಗಾವಣೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಆ) ಅಂತರ್ ಜಿಲ್ಲಾ ವರ್ಗಾವಣೆಯೂ ಸೇರಿದಂತೆ ವರ್ಗಾವಣೆ ಕೋರಿಕೆ ಸಲ್ಲಿಸಿರುವ ಅರ್ಹ ಸಿಬ್ಬಂದಿಗಳ ವರ್ಗಾವಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ವರ್ಗಾವಣೆಗೆ ಕ್ರಮ ವಹಿಸಲಾಗುವುದು;

(ಇ) ಒಂದು ಘಟಕದಿಂದ ಮತ್ತೊಂದು ಘಟಕಕ್ಕೆ ವರ್ಗಾವಣೆಗೊಂಡಲ್ಲಿ ತಮ್ಮ ಸೇವಾ ಜೇಷ್ಠತೆ ಬಿಟ್ಟು, ಆ ಘಟಕದ ಹಿರಿತನಕ್ಕೆ ಅನುಗುಣವಾಗಿ ಸೇವಾ ಜೇಷ್ಠತೆ ಹೊಂದಬೇಕೆಂಬ ಷರತ್ತು ವಿಧಿಸಲಾಗಿದೆಯೇ; ಈ ಷರತ್ತಿಗೆ ಒಪ್ಪಿ ಎಷ್ಟು ಸಿಬ್ಬಂದಿಗಳು ವರ್ಗಾವಣೆಗೆ ಕೋರಿಕೆ ಸಲ್ಲಿಸಿದ್ದರು; ಈ ಪೈಕಿ ಎಷ್ಟು ಸಿಬ್ಬಂದಿಗಳ ವರ್ಗಾವಣೆ ಆಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಈ) ವರ್ಗಾವಣೆಗೆ ಅವಕಾಶ ಸಿಗದೆ ಸಿಬ್ಬಂದಿಗಳಿಗೆ ತೀವ್ರ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ, ವರ್ಗಾವಣೆ ಕೋರಿರುವ ಸಿಬ್ಬಂದಿಗಳ ಕೋರಿಕೆಯಂತೆ ವರ್ಗಾವಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ರಾಜ್ಯದಲ್ಲಿ ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ನಗರ ನಿರ್ಮಾಣ ಕುರಿತು

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೮೬ (೧೧೫೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:-

ರಾಜ್ಯದಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ನಗರ ನಿರ್ಮಿಸುವ ಯೋಜನೆಯು ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕ್ರೀಡಾ ನಗರಕ್ಕೆ ಅವಶ್ಯಕವಿರುವ ಜಮೀನು ಮತ್ತು ಅಗತ್ಯ ಅನುದಾನವನ್ನು ಯುವಜನ ಮತ್ತು ಕ್ರೀಡಾ ಇಲಾಖೆಗೆ ಒದಗಿಸಲಾಗಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯ ಸಿವಿಲ್ ಸೇವೆಗಳ ಹುದ್ದೆಗಳನ್ನು ಭರ್ತಿ ಮಾಡುವಾಗ ಅನುಸರಿಸುವ ವರ್ಗೀಕರಣ ಕುರಿತು

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಹಾಗೂ**
**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೮೭ (೧೧೫೩+೧೧೫೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡುವಾಗ ರಿಕ್ತಸ್ಥಾನ ಆಧಾರಿತ ವರ್ಗೀಕರಣದ ಬದಲಾಗಿ ಹುದ್ದೆ ಆಧಾರಿತ ವರ್ಗೀಕರಣವನ್ನು ಅನುಸರಿಸುವ ಕುರಿತು

ದಿನಾಂಕ: ೧೦.೧೨.೨೦೨೧ರಂದು ಸರ್ಕಾರ ಹೊರಡಿಸಿರುವ ಆದೇಶವಿದ್ದಾಗ್ಯೂ ಸಹ ಆಡಳಿತ ಇಲಾಖೆಗಳು ಅನುಸರಿಸದಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಈ ಆದೇಶವನ್ನು ಕಡ್ಡಾಯವಾಗಿ ಅನುಸರಿಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)

(ಆ) ಈ ಆದೇಶವನ್ನು ಅನುಸರಿಸದಿರುವ ಇಲಾಖೆಗಳ ವಿರುದ್ಧ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ, ಯಾವಾಗ ಮತ್ತು ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು; ಕ್ರಮ ಕೈಗೊಳ್ಳುವ ಕುರಿತು ಕಾಲಮಿತಿಯೇನಾದೂ ವಿಧಿಸಿದೆಯೇ; (ಮಾಹಿತಿ ನೀಡುವುದು)

(ಇ) ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸುವ ಕುರಿತು ಮೇಲಿನ ಆದೇಶವನ್ನು ಹೊರತುಪಡಿಸಿ ಸರ್ಕಾರ ಇತ್ತೀಚಿಗೆ ಆದೇಶಗಳೇನಾದರೂ ಹೊರಡಿಸಿದೆಯೇ, ಹಾಗಿದ್ದಲ್ಲಿ, ಅವುಗಳ ಪ್ರತಿಗಳನ್ನು ನೀಡುವುದು, ಹೊರಡಿಸದಿದ್ದಲ್ಲಿ ಮೇಲಿನ ಆದೇಶದನ್ವಯ ಮುಂದಿನ ದಿನಗಳಲ್ಲಿ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಆಡಳಿತ ಇಲಾಖೆಗಳು ಪ್ರಕಟಿಸುವಂತೆ ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ, ಯಾವ ರೀತಿಯ ಕ್ರಮ ಕೈಗೊಳ್ಳುವುದು; ಕೈಗೊಳ್ಳದಿದ್ದಲ್ಲಿ, ಕಾರಣಗಳೇನು; ಈ ಕುರಿತು ಪುನಃ ಸುತ್ತೋಲೆ ಅಥವಾ ಜ್ಞಾಪನವನ್ನು ಹೊರಡಿಸುವುದೇ; (ಮಾಹಿತಿ ನೀಡುವುದು)

(ಈ) ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡುವಾಗ ರಿಕ್ತಸ್ಥಾನ ಆಧಾರಿತ ವರ್ಗೀಕರಣದ ಬದಲಾಗಿ ಹುದ್ದೆ ಆಧಾರಿತ ವರ್ಗೀಕರಣವನ್ನು ಅನುಸರಿಸುವ ಕುರಿತು ಮೇಲಿನ ಆದೇಶವನ್ನು ಅನುಸರಿಸಲು ಆಡಳಿತ ಇಲಾಖೆಗಿರುವ ಸಮಸ್ಯೆಗಳೇನು; ಈ ಕುರಿತು ಸರ್ಕಾರದ ನಿಲುವೇನು? (ಮಾಹಿತಿ ನೀಡುವುದು)

# ನಿವೃತ್ತ ಸರ್ಕಾರಿ ನೌಕರರು ಗುತ್ತಿಗೆ/ಹೊರಗುತ್ತಿಗೆ ಆಧಾರದಲ್ಲಿ ಮುಂದುರೆಯುತ್ತಿರುವ ಕುರಿತು

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೮೮ (೧೧೫೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಇತ್ತೀಚಿನ ದಿನಗಳಲ್ಲಿ ನಿರುದ್ಯೋಗದ ಸಮಸ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಉನ್ನತ ವ್ಯಾಸಂಗ ಮಾಡಿ, ಅತ್ಯುನ್ನತ ಕೌಶಲ್ಯಗಳನ್ನೊಳಗೊಂಡ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೆಲೆ ಯಾವುದೇ ಸೌಲಭ್ಯಗಳನ್ನು ಪಡೆಯದೆ, ಕಡಿಮೆ ವೇತನಕ್ಕೆ ದುಡಿಯುತ್ತಿರುವುದು ನಿಜವಲ್ಲವೇ;

(ಇ) ನಿಜವಾಗಿದ್ದಲ್ಲಿ, ಸರ್ಕಾರವೇ ನಿವೃತ್ತಿಗೆ ವಯೋಮಿತಿ ನಿಗದಿಪಡಿಸಿದ್ದರೂ ಸಹ ವಯಸ್ಸಾದ ನಿವೃತ್ತ ಸರ್ಕಾರಿ ನೌಕರರನ್ನು ಪುನಃ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಇಲಾಖೆಗಳಿಗೆ ನಿಗಮ ಮಂಡಳಿಗಳಿಗೆ ನೇಮಿಸುವುದರಿಂದ ಸರ್ಕಾರದ ಪಿಂಚಣಿಯ ಜೊತೆಗೆ ವೇತನ, ಇತರೆ ಭತ್ಯೆಗಳು ಹಾಗೂ ನೀಡುತ್ತಿರುವ ಎಲ್ಲಾ ಸೌಲಭ್ಯಗಳಿಂದ ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟ ಉಂಟಾಗುತ್ತಿಲ್ಲವೇ;

(ಈ) ಹಾಗಿದ್ದಲ್ಲಿ, ಈ ಆರ್ಥಿಕ ನಷ್ಟವನ್ನು ಸರಿದೂಗಿಸಲು ಹಾಗೂ ನಿವೃತ್ತ ಸರ್ಕಾರಿ ಅಧಿಕಾರಿ/ನೌಕರರನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸುವ ಕುರಿತು ಸರ್ಕಾರದ ನಿಲುವೇನು? (ಮಾಹಿತಿ ನೀಡುವುದು)

## ಸಂಘ-ಸಂಸ್ಥೆಗಳಿಗೆ ಬಿಡುಗಡೆ ಮಾಡಬೇಕಾದ ಅನುದಾನದ ಕುರಿತು

ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

೧೦೪೯ (೧೧೫೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯು ೨೦೨೦-೨೦೨೩ನೇ ಸಾಲಿನವರೆಗೆ ಕೆಲವು ಸಂಘ ಸಂಸ್ಥೆಗಳಿಗೆ ಅನುದಾನ ಮಂಜೂರಾತಿ ಆದೇಶ ಹೊರಡಿಸಿ, ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ; ಆದರೆ, ಬಿಡುಗಡೆಗೆ ಬಾಕಿಯಿರುವ ಎರಡನೇ ಕಂತಿನ ಅನುದಾನದ ಬಿಡುಗಡೆಗಾಗಿ ಸಂಬಂಧಿಸಿದ ಜಿಲ್ಲಾಧಿಕಾರಿಗಳ ಮುಖಾಂತರ ಕೋರಿಕೆಗಳು ಬಂದು ೨-೩ ವರ್ಷಗಳಾಗಿದ್ದರೂ ಸಹ ಬಾಕಿ ಹಣ ಬಿಡುಗಡೆ ಮಾಡದಿರಲು ಕಾರಣಗಳೇನು; (ವಿವರ ನೀಡುವುದು)

(ಆ) ಸದರಿ ಸಂಘ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲು ಜೇಷ್ಠತೆಯುನ್ನು ಪಾಲಿಸದಿರಲು ಕಾರಣವೇನು; (ವಿವರ ನೀಡುವುದು)

(ಇ) ಬಾಕಿ ಅನುದಾನ ಬಿಡುಗಡೆಗೆ ಸಂಘ ಸಂಸ್ಥೆಯವರು ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸಿ ೨-೩ ವರ್ಷಗಳಾಗಿದ್ದು, ಬಾಕಿಯಿರುವ ಅನುದಾನವನ್ನು ಯಾವ ಕಾಲಮಿತಿಯೊಳಗೆ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು)

## ಸರ್ಕಾರ ವಿವಿಧ ಇಲಾಖೆ, ನಿಗಮ/ಮಂಡಳಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಸರ್ಕಾರಿ ನೌಕರರ ಕುರಿತು

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೯೯೦ (೧೧೫೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರವಾಸೋದ್ಯಮ, ಇಲಾಖೆಯಡಿ ಬರುವ ನಿಗಮಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ ಆಧಾರದ ಮೇಲೆ ನಿವೃತ್ತ ಸರ್ಕಾರಿ ಅಧಿಕಾರಿ/ನೌಕರರು ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸಿಬ್ಬಂದಿ/ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಪಾವತಿಸುತ್ತಿರುವ ವೇತನ, ಇತರೆ ಭತ್ಯೆಗಳು ಹಾಗೂ ನೀಡುತ್ತಿರುವ ಎಲ್ಲಾ ಸೌಲಭ್ಯಗಳ ವಿವರಗಳನ್ನು ಆದೇಶದ ಪ್ರತಿಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು;

(ಆ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ನಿಗಮ ಮಂಡಳಿಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನಿವೃತ್ತ ಸರ್ಕಾರಿ ಅಧಿಕಾರಿ/ನೌಕರರನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸಲು ಸರ್ಕಾರ ಆದೇಶಿಸಿ ಸುಮಾರು ೫ ತಿಂಗಳುಗಳು ಕಳೆದರೂ, ಇಂದಿಗೂ ಪ್ರವಾಸೋದ್ಯಮ ಇಲಾಖೆ ಹಾಗೂ ಇಲಾಖೆಯಡಿ ಬರುವ ನಿಗಮ ಮಂಡಳಿಗಳಲ್ಲಿ ನಿವೃತ್ತ ಸರ್ಕಾರಿ ಅಧಿಕಾರಿ/ನೌಕರರು ಕರ್ತವ್ಯ ನಿರ್ವಹಿಸುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಸದರಿಯವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ಇಂದಿಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು; ಸದರಿಯವರನ್ನು

ಕರ್ತವ್ಯದಿಂದ ಬಿಡುಗಡೆಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯೊಳಗಾಗಿ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)

## IRB ನೇಮಕಾತಿ ಕುರಿತು

**ಶ್ರೀ ರವಿಕುಮಾರ್ ಎನ್. (ವಿಧಾನಸಭೆಯಿಂದ ಚುನಾಯಿತರಾದವರು):-**

೧೮೯೧ (೧೨೦೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ADGP ಕೆ.ಎಸ್.ಆರ್.ಪಿ, ADGP ನೇಮಕಾತಿ ಮತ್ತು ADGP ಆಡಳಿತ ಹಾಗೂ ACS ಗೃಹ ಇಲಾಖೆಯವರನ್ನೊಳಗೊಂಡಂತೆ ದಿನಾಂಕ:೨೨.೦೩.೨೦೨೨ರಂದು ನಡೆದ ಸಭಾ ನಡವಳಿ ಸಂ:ಒಇ:೪೨:ಪಿಪಿಎಸ್:೨೦೧೯, ದಿನಾಂಕ:೩೧.೦೫.೨೦೨೨ರಲ್ಲಿ ಸ್ಪಷ್ಟವಾಗಿ ಕರೆ ಪತ್ರ ಕಳುಹಿಸಲಾದ ೪೮೮ ಅಭ್ಯರ್ಥಿಗಳಲ್ಲಿ ೧೧೧ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಿದ್ದು, ಬಾಕಿ ಉಳಿಕೆ ಅಭ್ಯರ್ಥಿಗಳಿಗೆ ಅದೇ ಕ್ರಮವನ್ನು ಮುಂದುವರೆಸಿ ಒಂದು ಬಾರಿಯ ಕ್ರಮವಾಗಿ ಮಾನವೀಯ ನೆಲೆಯಲ್ಲಿ ನೇಮಕಾತಿ ಆದೇಶವನ್ನು ನೀಡಲು ಸಚಿವ ಸಂಪುಟದ ಸಭೆಯಲ್ಲಿ ನಿರ್ಣಯವನ್ನು ಕೈಗೊಳ್ಳುವುದಾಗಿ ದಿ:೨೩.೦೨.೨೦೨೪ರಂದು ಸದನದಲ್ಲಿ ಗೃಹ ಸಚಿವರು ಭರವಸೆ ನೀಡಿದ್ದು, ಪ್ರಸ್ತುತ ಈ ಭರವಸೆಯನ್ನು ಪೂರ್ಣಗೊಳಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ;

(ಆ) ಸದನದಲ್ಲಿ ನೀಡಿದ ಭರವಸೆಯಂತೆ IRB ಅಭ್ಯರ್ಥಿಗಳ ನೇಮಕಾತಿ ಕುರಿತ ಕಡತವು ಸಂಪುಟ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗಿದೆಯೇ; ಇಲ್ಲವಾದಲ್ಲಿ, ಸಚಿವ ಸಂಪುಟದ ಅನುಮೋದನೆ ಪಡೆಯಲಾಗುವುದು ಯಾವಾಗ;

(ಇ) ಬಾಕಿ ಉಳಿದ IRB ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದು ಯಾವಾಗ; ಹಲವಾರು ಅಭ್ಯರ್ಥಿಗಳು ವಯೋಮಿತಿ ಮೀರುವ ಹಂತದಲ್ಲಿದ್ದು, ಮಾನವೀಯ ನೆಲೆಯಲ್ಲಿ ತುರ್ತಾಗಿ ನೇಮಕಾತಿ ಆದೇಶ ನೀಡಲು ಯಾವ ಕ್ರಮಕೈಗೊಳ್ಳಲಾಗಿದೆ?

## ಬಡ್ಡಿ ಮೊತ್ತವನ್ನು ಬ್ಯಾಂಕಿನಲ್ಲಿ ಡೆಪಾಸಿಟ್ ಮಾಡಿರುವ ಕುರಿತು

**ಶ್ರೀ ರವಿಕುಮಾರ್ ಎನ್. (ವಿಧಾನಸಭೆಯಿಂದ ಚುನಾಯಿತರಾದವರು):-**

೧೮೯೨ (೧೨೦೨) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ಕಳೆದ ೫ ವರ್ಷಗಳಲ್ಲಿ ಗಳಿಸಿದ ೧೨೮೧.೬೫ ಕೋಟಿ ರೂ. ಬಡ್ಡಿಯ ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಜಮಾ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಡ್ಡಿ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡದೆ ಬಳಸಿದ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಆ) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ೧೨೮೧.೬೫ ಕೋಟಿ ರೂ. ಬಡ್ಡಿ ಮೊತ್ತವು ಯಾವ ಕಾರಣದಿಂದ ಸಂಗ್ರಹವಾಗಿದೆ; ಯಾವ ಆರ್ಥಿಕ ಸಂಸ್ಥೆಗಳಲ್ಲಿ ಸರ್ಕಾರದ ಮೊತ್ತವನ್ನು ಡೆಪಾಸಿಟ್ ಮಾಡಲಾಗಿದೆ; (ಡೆಪಾಸಿಟ್ ಮಾಡಲಾದ ಬ್ಯಾಂಕುಗಳ ಹೆಸರಿನೊಂದಿಗೆ ಮೊತ್ತದ ವಿವರ ನೀಡುವುದು)

(ಇ) ಸದರಿ ಮೊತ್ತವನ್ನು ಯಾರ ಆದೇಶದ ಮೇಲೆ ಡೆಪಾಸಿಟ್ ಮಾಡಲಾಗಿದೆ; ಸರ್ಕಾರದ ಹಣವನ್ನು ಬ್ಯಾಂಕುಗಳಲ್ಲಿ ಡೆಪಾಸಿಟ್ ಮಾಡಲು ಇರುವ ನಿಯಮಗಳೇನು? (ವಿವರ ನೀಡುವುದು)

## ಕೆರೆಗಳ ಬಫರ್ ವಲಯದಲ್ಲಿ ನಿರ್ಮಾಣಗೊಂಡಿರುವ ಕಟ್ಟಡಗಳ ಕುರಿತು

**ಶ್ರೀ ರವಿಕುಮಾರ್ ಎನ್. (ವಿಧಾನಸಭೆಯಿಂದ ಚುನಾಯಿತರಾದವರು):-**

೧೮೯೩ (೧೨೦೩) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕೆರೆಗಳ ಬಫರ್ ವಲಯದಲ್ಲಿ ನಿರ್ಮಾಣಗೊಂಡಿರುವ ಕಟ್ಟಡಗಳ ಸಂಖ್ಯೆ ಎಷ್ಟು;ಅದರಲ್ಲಿ ೩ಕ್ಕಿಂತ ಹೆಚ್ಚು ಮಹಡಿ ಹೊಂದಿರುವ ಕಟ್ಟಡಗಳ ಸಂಖ್ಯೆ ಎಷ್ಟು; ಈ ಕಟ್ಟಡಗಳು ಯಾವ ಕೆರೆಯ ಬಫರ್ ವ್ಯಾಪ್ತಿಯಲ್ಲಿ ಬರುತ್ತದೆ; (ಕೆರೆಗಳವಾರು ಕಟ್ಟಡದ ಹೆಸರಿನೊಂದಿಗೆ ಮಾಹಿತಿ ನೀಡುವುದು)

(ಆ) ಕೆರೆಗಳ ಬಫರ್ ವಲಯದಲ್ಲಿ ನಿರ್ಮಾಣಗೊಂಡಿರುವ ಕಟ್ಟಡಗಳ ಮಾರಾಟ ಮತ್ತು ಖರೀದಿಯನ್ನು ತಡೆಯಲು ಸರ್ಕಾರ ಯಾವ ಕ್ರಮಕೈಗೊಂಡಿದೆ;

(ಇ) ಬೆಂಗಳೂರು ದಕ್ಷಿಣ ತಾಲ್ಲೂಕಿನ ಪರಪ್ಪನ ಅಗ್ರಹಾರ ಕೆರೆಯ ಮೂಲ ವಿಸ್ತೀರ್ಣವೆಷ್ಟು; ಪ್ರಸ್ತುತ ಅದು ಎಷ್ಟು ವಿಸ್ತೀರ್ಣದಲ್ಲಿದೆ;

(ಈ) ಕಳೆದ ೩ ವರ್ಷಗಳಲ್ಲಿ ಪರಪ್ಪನ ಅಗ್ರಹಾರ ಕೆರೆಯ ಅಭಿವೃದ್ಧಿಗೆ ಕೈಗೊಂಡ ಕ್ರಮಗಳೇನು; ಕೆರೆಯ ಅಭಿವೃದ್ಧಿಗೆ ಎಷ್ಟು ಮೊತ್ತ ವೆಚ್ಚ ಮಾಡಲಾಗಿದೆ; ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; (ಪೂರ್ಣಗೊಂಡ ಕಾಮಗಾರಿಗಳ ವಿವರ ನೀಡವುದು)

(ಉ) ಪರಪ್ಪನ ಅಗ್ರಹಾರ ಕೆರೆಯ ಆವರಣದಲ್ಲಿ ಬಿಲ್ಡರ್‌ಗಳು ಕಟ್ಟಡ ನಿರ್ಮಾಣದ ತ್ಯಾಜ್ಯಗಳನ್ನು ಸುರಿಯುತ್ತಿರುವುದು ಸರ್ಕಾರದ

ಗಮನಕ್ಕೆ ಬಂದಿದೆಯೇ; ಕೆರೆ ಒತ್ತುವರಿಯಾಗಿರುವ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು)

## ನಿವೃತ್ತ ನೌಕರರ ನೇಮಕಾತಿ ಕುರಿತು

**ಶ್ರೀ ರವಿಕುಮಾರ್ ಎನ್. (ವಿಧಾನಸಭೆಯಿಂದ ಚುನಾಯಿತರಾದವರು):-**

೧೯೪೪ (೧೨೦೪೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಉಡುಪಿ ಜಿಲ್ಲೆಯ ಬಾರ್ಕೂರು ಇತಿಹಾಸ ಪ್ರಸಿದ್ಧ ಸ್ಥಳವಾಗಿದ್ದು, ಈ ಪ್ರದೇಶವನ್ನು ಹಂಪಿ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರ ಯಾವ ಯೋಜನೆಯನ್ನು ಹಾಕಿಕೊಂಡಿದೆ; (ವಿವರ ನೀಡುವುದು)

(ಆ) ಈ ಪ್ರದೇಶದ ಉತ್ಖನನ ಹಾಗೂ ಸ್ಮಾರಕಗಳ ರಕ್ಷಣೆಗೆ ಕಳೆದ ೩ ವರ್ಷಗಳಲ್ಲಿ ವೆಚ್ಚ ಮಾಡಿದ ಮೊತ್ತವೆಷ್ಟು; ಇಲ್ಲವಾದಲ್ಲಿ, ಕರಾವಳಿ ಭಾಗದ ಈ ಇತಿಹಾಸ ಪ್ರಸಿದ್ಧ ಸ್ಥಳವನ್ನು ಕಡೆಗಣಿಸಲು ಕಾರಣವೇನು;

(ಇ) ವರ್ಷಗಳ ಹಿಂದೆ ಆಳುಪೋತ್ಸವ ಎಂಬ ಕಾರ್ಯಕ್ರಮದ ಮೂಲಕ ತುಳು ಅರಸರ ಸಾಧನೆಗಳು ಕೊಡುಗೆಗಳನ್ನು ಸಮಾಜಕ್ಕೆ ನೆನಪು ಮಾಡಿಕೊಳ್ಳುವ ಕಾರ್ಯಕ್ರಮಗಳನ್ನು ಸರ್ಕಾರದ ವತಿಯಿಂದ ಏರ್ಪಡಿಸಲಾಗಿದ್ದು, ಪ್ರಸ್ತುತ ಈ ರೀತಿಯ ಕಾರ್ಯಕ್ರಮವನ್ನು ಯಾವಾಗ ಏರ್ಪಡಿಸಲಾಗುವುದು; ಈ ಕುರಿತು ಸರ್ಕಾರದ ನಿಲುವೇನು;

(ಈ) ಪ್ರವಾಸೋದ್ಯಮ ಇಲಾಖೆಯಡಿ ಬರುವ ನಿಗಮಗಳಲ್ಲಿ ನೇಮಕಗೊಂಡ ನಿವೃತ್ತ ಸರ್ಕಾರಿ ನೌಕರರ ಸಂಖ್ಯೆ ಎಷ್ಟು; ಅವರಿಗೆ ನೀಡಲಾಗುತ್ತಿರುವ ವೇತನ ಎಷ್ಟು; ವಾಹನ ಸೌಲಭ್ಯ ನೀಡಲಾಗುತ್ತಿದೆಯೇ; ಯಾವ ಹಂತದ ನೌಕರರಿಗೆ ನೀಡಲಾಗುತ್ತದೆ; (ನೇಮಕಗೊಂಡ ನಿವೃತ್ತ ನೌಕರರ ಹೆಸರು ಮತ್ತು ಅವರಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರದೊಂದಿಗೆ ಹುದ್ದೆವಾರು ಮಾಹಿತಿ ನೀಡುವುದು)

## ಜಲಸಂಪನ್ಮೂಲ ಇಲಾಖೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವಲ್ಲಿ ನಡೆದ ಹಗರಣದ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-**

೧೮೫೫ (೧೨೧೭) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ನೀರಾವರಿ ಇಲಾಖೆಯ ೨೦೨೨ರ ಎಸ್.ಡಿ.ಎ., ಬ್ಯಾಕ್‌ಲಾಗ್ ನೇಮಕಾತಿ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳು ನಕಲಿ ಅಂಕಪಟ್ಟಿ ಇತ್ಯಾದಿ ದಾಖಲೆಗಳನ್ನು ಸಲ್ಲಿಸಿದ್ದು ನಿಜವೇ; ಈ ವಿಷಯದ ಕುರಿತು ಯಾರಿಂದ ದೂರುಗಳು ಇಲಾಖೆಗೆ ಬಂದಿರುತ್ತವೆ; (ವಿವರವಾದ ಮಾಹಿತಿ ನೀಡಿ)

(ಆ) ಅಂಕಪಟ್ಟಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿ ಮಾಡುವ ಸಂದರ್ಭದಲ್ಲಿ ಎಷ್ಟು ಅಭ್ಯರ್ಥಿಗಳು ನಕಲಿ ದಾಖಲೆಗಳನ್ನು ಸಲ್ಲಿಸಿರುವ ಬಗ್ಗೆ ತನಿಖೆಯಿಂದ ಹೊರ ಬಿದ್ದಿವೆ; ಮತ್ತು ಅಂತಹವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ;

(ಇ) ಈ ಪ್ರಕರಣದಲ್ಲಿ ಸಿ.ಸಿ.ಬಿ., ರವರು ನಕಲಿ ಅಂಕಪಟ್ಟಿ ಸೃಷ್ಟಿ ಮಾಡಿರುವ ತಂಡವನ್ನು ಗುರುತಿಸಿದ್ದಾರೆಯೇ; (ವಿವರವಾದ ಮಾಹಿತಿ ನೀಡಿ)

(ಈ) ನೇಮಕಾತಿ ಕುರಿತು ನಡೆದಿರುವ ವಿವಿಧ ವಿಚಾರಣೆಗಳು ಯಾವ ಅವಧಿಯಲ್ಲಿ ಪೂರ್ಣಗೊಳ್ಳುತ್ತವೆ ಮತ್ತು ಅಭ್ಯರ್ಥಿಗಳಿಗೆ ಯಾವಾಗ ನ್ಯಾಯ ಒದಗಿಸಲಾಗುವುದು?

## ಸರ್ಕಾರವು ಅಂಗವಿಕಲರ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳಿಗೆ ಅನುದಾನ ಕಡಿತ ಮಾಡಿರುವ ಬಗ್ಗೆ

**ಶ್ರೀ ವೈ. ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೯೬ (೧೨೬೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಅಂಗವಿಕಲರ ಕಲ್ಯಾಣ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ಆರ್ಥಿಕ ಇಲಾಖೆಯಿಂದ ನೀಡಲಾದ ಅನುದಾನ ಎಷ್ಟು; (ಸಂಬಳ, ಸಾರಿಗೆ ಮತ್ತು ಕಾರ್ಯಕ್ರಮಗಳು ಮತ್ತು ಅಭಿವೃದ್ಧಿಗೆ ಪ್ರತ್ಯೇಕವಾಗಿ ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

(ಆ) ಈ ಆರ್ಥಿಕ ವರ್ಷ ಅಂಗವಿಕಲರ ಕಲ್ಯಾಣ ಇಲಾಖೆಯಿಂದ ಹೆಚ್ಚುವರಿ ಅಥವಾ ಪೂರ್ಣ ಪ್ರಮಾಣದ ಅನುದಾನಕ್ಕೆ ಪತ್ರ ವ್ಯವಹಾರವನ್ನು ನಡೆಸಲಾಗಿದೆಯೇ; ಇದ್ದಲ್ಲಿ, ಅವರ ಕೋರಿಕೆಯ ಪತ್ರ ಮತ್ತು ಬಿಡುಗಡೆಯಾದ ಅನುದಾನದ ವಿವರಗಳನ್ನು ಒದಗಿಸುವುದು;

(ಇ) ಅಂಗವಿಕಲರ ಕಲ್ಯಾಣ ಇಲಾಖೆಗೆ ಪೂರ್ಣ ಪ್ರಮಾಣದ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಒದಗಿಸಲಾಗುವುದು?

# ನಾರಾಯಣಪುರ ಬಲದಂಡೆ ಕಾಲುವೆ ನಿರ್ಮಾಣದಲ್ಲಿನ ಅಕ್ರಮದ ಬಗ್ಗೆ

ಶ್ರೀ ವೈಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

೧೯೭೭ (೧೧೮೩) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಯ ಆರಂಭದಿಂದ ೯೫ ಕಿಮೀ ವರೆಗಿನ ಆಧುನೀಕರಣ ಪ್ಯಾಕೇಜ್ ಕಾಮಗಾರಿ ಹಾಗೂ ೧ ರಿಂದ ೧೮ ರವರೆಗಿನ ಉಪ/ಸೀಳು ಕಾಲುವೆಗಳ ನಿರ್ಮಾಣ, ವಿಸ್ತರಣೆ ಮತ್ತು ನವೀಕರಣ ಕಾಮಗಾರಿಗಳಲ್ಲಿ ಅಕ್ರಮಗಳು ನಡೆದಿರುವ ಸಮಗ್ರ ವಿವರ ಒದಗಿಸುವುದು;

(ಆ) ಸದರಿ ಕಾಮಗಾರಿಗಳಲ್ಲಿ ಒಟ್ಟು ಅಂದಾಜು ಮೊತ್ತ ಎಷ್ಟು; ಕಾಮಗಾರಿಗಳಲ್ಲಿ ಅಕ್ರಮಗಳು ನಡೆದಿರುವ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಆಗಿರುವ ನಷ್ಟ ಎಷ್ಟು ಹಾಗೂ ಹೊಣೆಗಾರರು ಯಾರು; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಈ ಕಾಮಗಾರಿಗೆ ಗುತ್ತಿಗೆ ನೀಡುವಾಗ ಟೆಂಡರ್ ಕರೆಯಲಾಗಿತ್ತೇ; ಟೆಂಡರ್ ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳು ನಮೂದಿಸಿದ್ದ ಟೆಂಡರ್ ಮೊತ್ತ ಎಷ್ಟು; ಅಂತಿಮವಾಗಿ ಯಾವ ಸಂಸ್ಥೆಗೆ ಟೆಂಡರ್ ನೀಡಲಾಗಿತ್ತು; ಅವರು ನಮೂದಿಸಿದ್ದ ಮೊತ್ತ ಎಷ್ಟು; (ಟೆಂಡರ್ ಕರೆಯಲಾದ ಜಾಹಿರಾತು ಪ್ರತಿ ಹಾಗೂ ಟೆಂಡರ್ ಅನುಮೋದನೆಗೊಂಡ ಕಡತಗಳ ಪ್ರತಿ ಒದಗಿಸುವುದು)

(ಈ) ಟೆಂಡರ್ ಪಡೆದಿದ್ದ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಬಿಲ್ ಪಾವತಿ ಮಾಡಲಾಗಿದೆಯೇ; ಅಕ್ರಮಗಳು ನಡೆದಿದ್ದರೂ ಬಿಲ್ ಪಾವತಿ ಮಾಡಲು ಕಾರಣಕರ್ತರು ಯಾರು; ಬಿಲ್

ಪಾವತಿಸುವಂತೆ ಸೂಚನೆ ನೀಡಿದ್ದು, ಯಾರು; (ಹಣ ಪಾವತಿಸುವಂತೆ ಆದೇಶ ಹೊರಡಿಸಲಾದ ಕಡತಗಳ ಪ್ರತಿ ಒದಗಿಸುವುದು)

(ಉ) ಕಾಮಗಾರಿ ಕುರಿತು ಕರ್ನಾಟಕ ವಿಧಾನ ಮಂಡಲದ ಅಂದಾಜು ಸಮಿತಿ ನೀಡಿದ್ದ ಅಭಿಪ್ರಾಯವೇನು; (ಅಂದಾಜು ಸಮಿತಿ ವ್ಯವಸ್ಥಾಪಕ ನಿರ್ದೇಶಕರಿಗೆ ಬರೆದಿರುವ ಪತ್ರಗಳ ಪ್ರತಿ ಒದಗಿಸುವುದು) ಸಮಿತಿಯ ಅಭಿಪ್ರಾಯವನ್ನು ಮೀರಿ ಹಣ ಬಿಡುಗಡೆ ಮಾಡಿರುವವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು? (ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

## ಸರ್ಕಾರದ ನಿಗಮ/ಮಂಡಳಿಗಳಲ್ಲಿ ನಿವೃತ್ತ ಸರ್ಕಾರಿ ನೌಕರರನ್ನು ನೇಮಿಸಿಕೊಂಡಿರುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೦೯೮ (೧೨೦೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರವಾಸೋದ್ಯಮ ಇಲಾಖೆಯಡಿ ಬರುವ ನಿಗಮಗಳಲ್ಲಿ ಗುತ್ತಿಗೆ, ಹೊರ ಗುತ್ತಿಗೆ ಆಧಾರದ ಮೇಲೆ ನಿವೃತ್ತ ಸರ್ಕಾರಿ ಅಧಿಕಾರಿ/ ನೌಕರರು ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸಿಬ್ಬಂದಿ/ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಪಾವತಿಸುತ್ತಿರುವ ವೇತನ, ಇತರೆ ಭತ್ಯೆಗಳು ಹಾಗೂ ನೀಡುತ್ತಿರುವ ಎಲ್ಲಾ ಸೌಲಭ್ಯಗಳ ವಿವರಗಳನ್ನು ಆದೇಶದ ಪ್ರತಿಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು;

(ಆ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ನಿಗಮ ಮಂಡಳಿಗಳಲ್ಲಿ ಗುತ್ತಿಗೆ,ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನಿವೃತ್ತ ಸರ್ಕಾರಿ ಅಧಿಕಾರಿ/ನೌಕರರನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸಲು ಆದೇಶಿಸಿ ಸುಮಾರು ೦೫ ತಿಂಗಳುಗಳು ಕಳೆದರೂ ಇಂದಿಗೂ ಪ್ರವಾಸೋದ್ಯಮ ಇಲಾಖೆ ಹಾಗೂ ಇಲಾಖೆಯಡಿ ಬರುವ ನಿಗಮ ಮಂಡಳಿಗಳಲ್ಲಿ ನಿವೃತ್ತ ಸರ್ಕಾರಿ ಅಧಿಕಾರಿ/ನೌಕರರು ಕರ್ತವ್ಯ ನಿರ್ವಹಿಸುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಸದರಿಯವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸದಿರಲು ಕಾರಣಗಳೇನು; ಸದರಿಯವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯೊಳಗಾಗಿ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು ವಿವರ ನೀಡುವುದು;

(ಇ) ಇತ್ತೀಚಿನ ದಿನಗಳಲ್ಲಿ ನಿರುದ್ಯೋಗದ ಸಮಸ್ಯೆ ಹೆಚ್ಚಾಗಿದ್ದು, ಉನ್ನತ ವ್ಯಾಸಂಗ ಮಾಡಿ, ಅತ್ಯುನ್ನತ ಕೌಶಲ್ಯಗಳನ್ನು ಒಳಗೊಂಡು ಗುತ್ತಿಗೆ, ಹೊರ ಗುತ್ತಿಗೆ ಆಧಾರದ ಮೇಲೆ ಯಾವುದೇ ಸೌಲಭ್ಯಗಳನ್ನು ಪಡೆಯದೇ ಕಡಿಮೆ ವೇತನಕ್ಕೆ ದುಡಿಯುವವರು ಹೆಚ್ಚಾಗಿರುವಂತಹ ಸಂದರ್ಭದಲ್ಲಿ ಸರ್ಕಾರವೇ ನಿವೃತ್ತಿಗೆ ವಯೋಮಿತಿ ನಿಗಧಿಪಡಿಸಿದ್ದರೂ ಸಹ ಇಂತಹ ವಯಸ್ಸಾದ ನಿವೃತ್ತ ಸರ್ಕಾರಿ ನೌಕರರನ್ನು ಪುನಃ ಗುತ್ತಿಗೆ, ಹೊರಗುತ್ತಿಗೆ ಆಧಾರದ ಮೇಲೆ ಇಲಾಖೆಗಳಿಗೆ,ನಿಗಮ ಮಂಡಳಿಗಳಿಗೆ ನೇಮಿಸುವುದರಿಂದ ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟ ಉಂಟಾಗುತ್ತಿಲ್ಲವೇ; ಹಾಗಿದ್ದಲ್ಲಿ, ಈ ಆರ್ಥಿಕ ನಷ್ಟವನ್ನು ಸರಿದೂಗಿಸಲು ಹಾಗೂ ನಿವೃತ್ತ ಸರ್ಕಾರಿ ಅಧಿಕಾರಿ/ನೌಕರರನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸಲು ಸರ್ಕಾರದ ನಿಲುವೇನು; ಮಾಹಿತಿ ನೀಡುವುದು?

## ಹೆಲಿ ಟೂರಿಸಂ/ಸೀ ಪ್ಲೇನ್ ಟೂರಿಸಂ ಯೋಜನೆಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೦೯೯ (೧೨೬೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮುಂದಿನ ೫ ವರ್ಷಗಳಲ್ಲಿ ಕರ್ನಾಟಕದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸರ್ಕಾರವು ಕೈಗೊಂಡಿರುವ ಯೋಜನೆಗಳು ಯಾವುವು;

(ಆ) ಪ್ರಸ್ತುತ ಹೆಲಿ ಟೂರಿಸಂ ಯೋಜನೆಯನ್ನು ರಾಜ್ಯದ ಯಾವ ಯಾವ ಸ್ಥಳದಲ್ಲಿ ರೂಪಿಸಲಾಗಿದೆ; ಈ ಯೋಜನೆ ಪ್ರವಾಸಿ ತಾಣಗಳಿಗೆ ಸೀಮಿತವಾಗಿದ್ದು, ಇದನ್ನು ಇತರ ಪ್ರವಾಸಿ ತಾಣಗಳಿಗೆ ವಿಸ್ತರಿಸುವ ಯೋಜನೆ ಸರ್ಕಾರದ ಮುಂದಿದೆಯೇ;

(ಇ) ಸೀ ಪ್ಲೇನ್ ಟೂರಿಸಂ ಪ್ರವಾಸಿಗರನ್ನು ಆಕರ್ಷಿಸುತ್ತಿದ್ದು, ರಾಜ್ಯದಲ್ಲಿ ಎಷ್ಟು ಸ್ಥಳಗಳಲ್ಲಿ ಸೀ ಪ್ಲೇನ್ ಟೂರಿಸಂ ನಡೆಯುತ್ತಿದೆ; ಮುಂದಿನ ದಿನಗಳಲ್ಲಿ ಕರಾವಳಿ ಪ್ರದೇಶಗಳಲ್ಲಿ ನಡೆಸಲು ಸರ್ಕಾರ ಚಿಂತಿಸಿದೆಯೇ;

(ಈ) ಕರ್ನಾಟಕದಲ್ಲಿನ ಹಿನ್ನೀರು ಪ್ರದೇಶಗಳಲ್ಲಿ ಸರ್ಕಾರ ಪ್ರವಾಸೋದ್ಯಮ ಅಭಿವೃದ್ಧಿಗೆ ಕೈಗೊಂಡ ಕ್ರಮಗಳೇನು?

## ಅಕ್ರಮ ಮದ್ಯ ಮಾರಾಟ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೦೦ (೧೨೬೮) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಗ್ರಾಮಾಂತರ ಪ್ರದೇಶದಲ್ಲಿ ಪರವಾನಗಿ ಇಲ್ಲದೇ ಅಕ್ರಮವಾಗಿ ಮದ್ಯ ಮಾರಾಟ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಪ್ರಕರಣಗಳ ಸಂಖ್ಯೆ ಎಷ್ಟು; ಹಾಗೂ ಇದಕ್ಕೆ ಕಾರಣರಾದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; ಈ ಅಕ್ರಮ ದಂಧೆಯಲ್ಲಿ ಶಾಮೀಲಾಗಿರುವ ಇಲಾಖೆಯ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಉತ್ತರ ಕರ್ನಾಟಕದ ಗಡಿ ಜಿಲ್ಲೆಗಳಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಕೆ ಮತ್ತು ಸೇವನೆ ಅವ್ಯಾಹತವಾಗಿ ನಡೆಯುತ್ತಿರುವುದು ಹಾಗೂ ಕಳ್ಳಭಟ್ಟಿ ಕುಡಿದು ಅನೇಕರು ಪ್ರಾಣ ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ಕಳ್ಳಭಟ್ಟಿ ತಯಾರಿಸುವವರ ವಿರುದ್ದ ಸರ್ಕಾರ ಕೈಗೊಂಡ ಕ್ರಮಗಳೇನು;

(ಇ) ಕಳೆದ ಐದು ವರ್ಷಗಳಲ್ಲಿ ಇಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ ಮತ್ತು ಎಷ್ಟು ಜನರ ಮೇಲೆ ಕೇಸ್ ದಾಖಲಿಸಿ ಶಿಕ್ಷೆ ವಿಧಿಸಲಾಗಿದೆ; (ತಾಲ್ಲೂಕುವಾರು, ಪ್ರಕರಣವಾರು ಕಳೆದ ಐದು ವರ್ಷಗಳ ಮಾಹಿತಿ ನೀಡುವುದು)

(ಈ) ಕಳೆದ ಎರಡು ವರ್ಷಗಳಲ್ಲಿ ಮದ್ಯದ ಮೇಲಿನ ಅಬಕಾರಿ ಸುಂಕವನ್ನು ಎಷ್ಟು ಬಾರಿ ಹೆಚ್ಚಿಸಲಾಗಿದೆ; ಯಾವ ಯಾವ ಬ್ರಾಂಡ್‌ನ ಮದ್ಯದ ಬಾಟಲಿಗಳ ಮೇಲೆ ಎಷ್ಟು ಪ್ರಮಾಣದ ದರ ಹೆಚ್ಚಳವಾಗಿದೆ; (ಕಳೆದ ಎರಡು ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು)

(ಉ) ಈ ರೀತಿ ಮದ್ಯದ ದರ ವಿಪರೀತವಾಗಿ ಏರಿಕೆಯಾಗುತ್ತಿರುವುದರಿಂದ ಬಡ ಕೂಲಿ ಕಾರ್ಮಿಕರು ಹಾಗೂ

ಮಧ್ಯಮ ವರ್ಗದವರ ಸಂಸಾರಗಳು ಬೀದಿಗೆ ಬರುತ್ತಿರುವ ಪ್ರಕರಣಗಳು ವರದಿಯಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ; ಇದ್ದಲ್ಲಿ, ಇದರ ನಿವಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು;

(ಊ) ಹೊರ ರಾಜ್ಯಗಳಿಗೂ ನಮ್ಮ ರಾಜ್ಯದಲ್ಲಿರುವ ಮದ್ಯದ ದರಕ್ಕೂ ಇರುವ ವ್ಯತ್ಯಾಸ ಎಷ್ಟು; ಹೊರ ರಾಜ್ಯಗಳಲ್ಲಿ ಮದ್ಯದ ದರ ಕಡಿಮೆ ಇರಲು ಕಾರಣ ಏನು; ನಮ್ಮ ರಾಜ್ಯದಲ್ಲಿ ದರ ಹೆಚ್ಚಾಗಿರುವ ಕಾರಣ ಪಕ್ಕದ ರಾಜ್ಯಗಳಿಂದ ಅಕ್ರಮವಾಗಿ ಮದ್ಯ ಸರಬರಾಜು ಆಗುತ್ತಿದ್ದು, ಇದರಿಂದ ರಾಜ್ಯ ಸರ್ಕಾರಕ್ಕೆ ಬರುವ ವರಮಾನ ಕಡಿಮೆಯಾಗುವುದಿಲ್ಲವೇ; ಮದ್ಯದ ದರ ಇಳಿಕೆಗೆ ಸರ್ಕಾರ ಮುಂದಾಗುವುದೇ? (ಮಾಹಿತಿ ನೀಡುವುದು)

## ಮಾದಕ ದ್ರವ್ಯ ಅಕ್ರಮ ಗಾಂಜಾ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):**

೧೧೦೧ (೧೨೬೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಗಣ್ಯ ವ್ಯಕ್ತಿಗಳು ಅವರ ಮಕ್ಕಳೂ ಹಾಗೂ ಸೆಲೆಬ್ರಿಟಿಗಳು ಮಾದಕ ದ್ರವ್ಯ ಹಾಗೂ ಅಕ್ರಮ ಗಾಂಜಾ ಸೇವನೆ ಮತ್ತು ಮಾರಾಟ ಪ್ರಕರಣಗಳಲ್ಲಿ ಭಾಗಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಂತಹ ಎಷ್ಟು ಪ್ರಕರಣಗಳು ವರದಿಯಾಗಿವೆ; ಎಷ್ಟು ಜನರನ್ನು ಬಂಧಿಸಲಾಗಿದೆ; ಹಾಗೂ ನ್ಯಾಯಾಯಲಕ್ಕೆ ಚಾರ್ಜ್ ಶೀಟ್ ಸಲ್ಲಿಕೆಯಾದ ಪ್ರಕರಣಗಳ ಸಂಖ್ಯೆ ಎಷ್ಟು; (ಕಳೆದ ಐದು ವರ್ಷಗಳ ಮಾಹಿತಿ ನೀಡುವುದು)

(ಆ) ಕಳೆದ ಐದು ವರ್ಷಗಳಲ್ಲಿ ನ್ಯಾಯಾಲಯದಲ್ಲಿ ಸಾಬೀತಾಗಿ ಶಿಕ್ಷೆಯಾಗಿರುವ ಪ್ರಕರಣಗಳು ಎಷ್ಟು; ಈ ಪ್ರಕರಣಗಳಲ್ಲಿ ಭಾಗಿಯಾದ ಎಷ್ಟು ಜನ ಪೋಲಿಸ್ ಅಧಿಕಾರಿಗಳ ಮೇಲೆ ಪ್ರಕರಣ ದಾಖಲಾಗಿವೆ ಅಮಾನತ್ತುಗೊಂಡ ಅಧಿಕಾರಿಗಳು ಎಷ್ಟು; (ಹೆಸರಿನೊಂದಿಗೆ ಪ್ರಕರಣವಾರು ಮಾಹಿತಿ ನೀಡುವುದು)

(ಇ) ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳ ಗಡಿಗೆ ಹೊಂದಿಕೊಂಡಿರುವ ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಅಕ್ರಮ ಗಾಂಜಾ ಸೇವನೆ ಮತ್ತು ಮಾರಾಟ ಪ್ರಕರಣಗಳ ಸಂಖ್ಯೆ ಎಷ್ಟು ಈ ಸಂಬಂಧ ಎಷ್ಟು ಜನರನ್ನು ಬಂಧಿಸಲಾಗಿದೆ; ಹಾಗೂ ಅವರಿಂದ ವಶಪಡಿಸಿಕೊಂಡ ಗಾಂಜಾ ಪ್ರಮಾಣ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಈ ಜಿಲ್ಲೆಗಳಲ್ಲಿ ಅಕ್ರಮ ಗಾಂಜಾ ಹಾಗೂ ಮಟ್ಕಾ ಹಾವಳಿ ವಿಪರೀತವಾಗಿದ್ದು ಇದು ಬಡ ಹಾಗೂ ಮಧ್ಯಮ ವರ್ಗದ ಜನರ ಮೇಲೆ ದುಷ್ಪಪರಿಣಾಮ ಬೀರುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಕ್ರಮವಾಗಿ ಬೆಳೆಯಲಾದ ಗಾಂಜಾ ಬೆಳೆದ ಜಮೀನಿಗೆ ದಾಳಿ ಮಾಡಿದ ಪೋಲಿಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದು ಈ ಪ್ರಕರಣದಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದೆಯೇ; ಈ ಪ್ರಕರಣ ಪ್ರಸ್ತುತ ಯಾವ ಹಂತದಲ್ಲಿದೆ; (ಮಾಹಿತಿ ನೀಡುವುದು)

(ಉ) ಕಲಬುರಗಿ ವಿಜಯಪುರ ಮತ್ತು ಬೀದರ್ ಜಿಲ್ಲೆಗಳಲ್ಲಿ ನಕಲಿ ಗುಟ್ಕಾ ತಯಾರಿಸುವ ಕಂಪನಿಗಳು ಸಕ್ರಿಯವಾಗಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದು ಜನರ ಆರೋಗ್ಯದ

ಮೇಲೆ ತೀವ್ರವಾದ ದುಷ್ಪರಿಣಾಮ ಬೀರುತ್ತಿದ್ದು, ಇದರ ನಿಗ್ರಹಕ್ಕೆ ಸರ್ಕಾರ ಮುಂದಾಗುವುದೇ;

(ಊ) ಕಲಬುರಗಿ ಜಿಲ್ಲೆ ಹಾಗೂ ಸುತ್ತಮುತ್ತ ಕೊಲೆ ಸುಲಿಗೆ, ಅತ್ಯಾಚಾರ, ಗಾಂಜಾ, ಗುಟ್ಕಾ, ಬೆಟ್ಟಿಂಗ್ ಪ್ರಶ್ನೆ ಪತ್ರಿಕೆ ಲೀಕ್ ಸೇರಿದಂತೆ ಹಲವಾರು ಸಮಾಜ ಬಾಹಿರ ಚಟುವಟಿಕೆಗಳು ವರದಿಯಾಗುತ್ತಿದ್ದು ಇಂತಹ ಸಮಾಜ ದ್ರೋಹಿ ಕೃತ್ಯಗಳಲ್ಲಿ ತೊಡಗಿಸಿಕೊಂಡವರಿಗೆ ಕಾನೂನಿನ ಭಯ ಇಲ್ಲದಂತಾಗಿರುವುದು ಇವುಗಳ ನಿಗ್ರಹಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು? (ಮಾಹಿತಿ ನೀಡುವುದು)

## ಸೈಬರ್ ಕ್ರೈಂ ವಂಚನೆಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೦೨ (೧೨೭೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಆನ್ ಲೈನ್ ಮುಖಾಂತರ ವಂಚನೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಷ್ಟು ಪ್ರಕರಣಗಳು ದಾಖಲಾಗಿವೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಆ ಪೈಕಿ ಎಷ್ಟು ಪ್ರಕರಣಗಳಲ್ಲಿ ನ್ಯಾಯ ದೊರಕಿದೆ; ಇಲ್ಲವಾದಲ್ಲಿ ವಿಳಂಬವಾಗುತ್ತಿರುವುದಕ್ಕೆ ಮೂಲ ಕಾರಣವೇನು; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಅತಿ ಹೆಚ್ಚು ಪ್ರಕರಣ ದಾಖಲಾಗಿರುವುದು ಯಾವ ಜಿಲ್ಲೆಯಲ್ಲಿ ಅದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ಸೈಬರ್ ಕ್ರೈಂ ಪ್ರಕರಣದಲ್ಲಿ ಮೋಸಕ್ಕೊಳಗಾದವರು ಕಳೆದುಕೊಂಡ ಹಣ ಮತ್ತು ಆರೋಪಿಗಳಿಂದ ವಸೂಲಿ ಮಾಡಿದ ಹಣ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಸೈಬರ್ ಕ್ರೈಂ ಪ್ರಕರಣಗಎಳಲ್ಲಿ ಶಾಶ್ವತವಾಗಿ ಪತ್ತೆ ಹೆಚ್ಚಿ ಆರೋಪಿಗಳನ್ನು ಬಂಧಿಸುವ ನಿಟ್ಟಿನಲ್ಲಿ ಸರ್ಕಾರವು ಹೊಸ ತಂತ್ರಜ್ಞಾನವನ್ನು ಅಳವಡಿಸಿರುವ ಕುರಿತು ವಿವರವಾದ ಮಾಹಿತಿ ನೀಡುವುದು;

(ಊ) ಸೈಬರ್ ಕ್ರೈಂ ಪ್ರಕರಣಗಳನ್ನು ತ್ವರಿತವಾಗಿ ಪತ್ತೆ ಹಚ್ಚಿ ಆರೋಪಿಗಳನ್ನು ಬಂದಿಸಿರುವ ನಿಟ್ಟಿನಲ್ಲಿ ಸರ್ಕಾರವು ಹೊಸ ತಂತ್ರಜ್ಞಾನವನ್ನು ಅಳವಡಿಸಿರುವ ವಿವರವಾದ ಮಾಹಿತಿ ನೀಡುವುದು; ಕರ್ನಾಟಕದಲ್ಲಿ Forensic Science/ವಿಧಿ ವಿಜ್ಞಾನ ಪ್ರಯೋಗಾಲಯಗಳಲ್ಲಿ ಇರುವ ವಿಭಾಗಗಳ ಕುರಿತು ಮಾಹಿತಿ ನೀಡುವುದು: ರಾಜ್ಯದಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯಗಳನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ ಚಿಂತಿಸಿದೆಯೇ; ಚಿಂತಿಸಿದ್ದಲ್ಲಿ, ಸರ್ಕಾರದ ಪ್ರಸ್ತಾವನೆ ಮತ್ತು ಯೋಜನೆಗಳ ಕುರಿತು ಮಾಹಿತಿ ನೀಡುವುದು?

## ಸರ್ಕಾರದ ನ್ಯಾಯಾಲಯಗಳ ಪ್ರಕರಣಗಳ ಬಗ್ಗೆ

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೦೩ (೧೧೮೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೧೫ ವರ್ಷಗಳಿಂದ ಇಲ್ಲಿಯವರೆಗೆ ಸರ್ಕಾರದ ವಿವಿಧ ಇಲಾಖೆಗಳು ನ್ಯಾಯಾಲಯಗಳಲ್ಲಿ ಎಷ್ಟು ದಾವೆಗಳನ್ನು ಹಾಕಿವೆ: ಮುಗಿದಿರುವ ಮತ್ತು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು: (ಇಲಾಖೆವಾರು ಮಾಹಿತಿ ನೀಡುವುದು)

(ಆ) ಸದರಿ ನ್ಯಾಯಾಲಯಗಳ ಪ್ರಕರಣಗಳಲ್ಲಿ ಅತಿ ಮುಖ್ಯವಾದ ಪ್ರಕರಣಗಳ ಸಂಖ್ಯೆ ಎಷ್ಟು; ಎಷ್ಟು ಪ್ರಕರಣಗಳು ಸರ್ಕಾರದ ಪರವಾಗಿ ತೀರ್ಪು ಬಂದಿದೆ;

(ಇ) ಬಹಳಷ್ಟು ಪ್ರಕರಣಗಳಲ್ಲಿ ಸರ್ಕಾರಕ್ಕೆ ಹಿನ್ನಡೆಯಗುತ್ತಿರುವುದಕ್ಕೆ ನ್ಯಾಯಾಲಯಗಳ ಪ್ರಕರಣಗಳನ್ನು ಶೀಘ್ರದಲ್ಲಿ ಇತ್ಯರ್ಥ ಪಡಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

## ಸರ್ಕಾರದ ಸಚಿವಾಲಯಗಳಲ್ಲಿ ವಿವಿಧ ವೃಂದಗಳಲ್ಲಿ ಮಂಜೂರು ಹುದ್ದೆಗಳ ಕುರಿತು

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-**

೧೧೦೪ (೧೨೩೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ವಿವಿಧ ವೃಂದಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿಗೆ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಸದರಿ ಹುದ್ದೆಗಳಲ್ಲಿ ಕಲ್ಯಾಣ ಕರ್ನಾಟಕ ರಾಜ್ಯ ಮಟ್ಟದ ಸ್ಥಳೀಯ, ವೃಂದದಲ್ಲಿ ಶೇ.೯೮ರಷ್ಟು ಕಾಯ್ದಿರಿಸಲಾದ ಹುದ್ದೆಗಳ ಸಂಖ್ಯೆ ಎಷ್ಟು;

(ಆ) ಸದರಿ ವೃಂದಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿ ಮೂಲಕ ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ವೃಂದವಾರು ಮಾಹಿತಿ ನೀಡುವುದು)

(ಇ) ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ದಾಖಲಾದ WP ೧೬೮೬೮ ೨೦೨೦ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ ೦೧.೦೮.೨೦೨೩ ರಂದು ನೀಡಿರುವ ತೀರ್ಪನಂತೆ ಸದರಿ

ಅರ್ಜಿದಾರರುಗಳ ಪ್ರಕರಣದಲ್ಲಿ ಜೇಷ್ಠತೆಯನ್ನು ಮರು ನಿಗದಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ನ್ಯಾಯಾಲಯದ ತೀರ್ಪಿನನ್ವಯ ದಿನಾಂಕ:೨೨.೦೭.೨೦೨೪ ರಂದು ಸಹಾಯಕ ವೃಂದದ ನೌಕರರ ಜೇಷ್ಠತೆಯನ್ನು ಮರು ನಿಗದಿ ಪಡಿಸಿ ಆದೇಶ ಹೊರಡಿಸಿದ್ದು ಉಳಿದ ಶೀಘ್ರಲಿಪಿಗಾರ ವೃಂದ ಹಿರಿಯ ಸಹಾಯಕ ವೃಂದ ಶಾಖಾಧಿಕಾರಿ ವೃಂದ ಮತ್ತು ಅಧೀನ ಕಾರ್ಯದರ್ಶಿ ವೃಂದಗಳ ಜೇಷ್ಠತೆಯನ್ನು ಮರು ನಿಗದಿ ಪಡಿಸುವ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಈ ಬಗ್ಗೆ ಸರ್ಕಾರದ ನಿಲುವೇನು?

## ಕೆ.ಎ.ಎಸ್ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಮರು ಪರೀಕ್ಷೆಯ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-**

೧೧೦೫ (೧೨೫೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಲೋಕಸೇವಾ ಆಯೋಗದಿಂದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಿದ್ದು ಯಾವಾಗ; ಅಧಿಸೂಚನೆ ಹೊರಡಿಸಿದ ನಂತರದಲ್ಲಿ ಪೂರ್ವಭಾವಿ ಪರೀಕ್ಷೆಯನ್ನು ನಡೆಸಿದ್ದು ಯಾವಾಗ; ಕೆ.ಎ.ಎಸ್. ಮರು ಪರೀಕ್ಷೆಯನ್ನು ನಡೆಸಲು ನಿರ್ಧರಿಸಿದ್ದು ಯಾವ ಕಾರಣಕ್ಕಾಗಿ;

(ಆ) ಆಗಸ್ಟ್ ೨೭ ರಂದು ನಡೆದ ಕೆ.ಎ.ಎಸ್ ಪೂರ್ವ ಭಾವಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿ ಉಂಟಾದ ಲೋಪದೋಷಗಳು ಏನು; ಈ ಲೋಪದೋಷಗಳನ್ನು ಪತ್ತೆ ಹಚ್ಚಲು ಆಯೋಗವು ಸಿದ್ದಪಡಿಸಿರುವ ವರದಿಯ ಕುರಿತು ವಿವರ ನೀಡುವುದು;

(ಇ) ಸದರಿ ಪರೀಕ್ಷೆಯನ್ನು ನಡೆಸಲು ಉಂಟಾದ ಖರ್ಚು ಎಷ್ಟು; ಖರ್ಚಿನ ವಿವರಗಳೊಂದಿಗೆ ಸರ್ಕಾರದ ಬೊಕ್ಕಸಕ್ಕೆ ಎಷ್ಟು ನಷ್ಟವನ್ನುಂಟು ಮಾಡಿದೆ ಹಾಗೂ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; (ಕೈಗೊಂಡ ಕ್ರಮಗಳ ಕುರಿತು ಮಾಹಿತಿಯನ್ನು ಒದಗಿಸುವುದು)

(ಈ) ಮೊದಲ ಬಾರಿ ನಡೆದ ಪರೀಕ್ಷೆಯನ್ನು ರದ್ದುಪಡಿಸಿ ಸರ್ಕಾರವು ಮರು ಪರೀಕ್ಷೆಯನ್ನು ನಡೆಸಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಧಾರವಾಡ ಉಚ್ಚ ನ್ಯಾಯಾಲಯದಲ್ಲಿ ಯಥಾಸ್ಥಿತಿಯನ್ನು ಕಾಪಾಡುವಂತೆ ಆದೇಶವಾಗಿದ್ದು, ಈ ಆದೇಶವನ್ನು ಹಿಂಪಡೆಯುವ ನಿಟ್ಟಿನಲ್ಲಿ ಸರ್ಕಾರವು ಸರ್ಕಾರಿ ವಕೀಲರನ್ನು ನೇಮಿಸಿದೆಯೇ; (ಈ ಕುರಿತು ಮಾಹಿತಿಯನ್ನು ಒದಗಿಸುವುದು)

(ಉ) ಈಗಾಗಲೇ ಹೊರಡಿಸಿರುವ ಅಧಿಸೂಚನೆಯನ್ನು ಹಿಂಪಡೆದು, ಕೆಎಎಸ್ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಜೊತೆಗೆ ಒಳ ಮೀಸಲಾತಿಯನ್ನೂ ಅನ್ವಯಿಸಿ ಮರು ಅಧಿಸೂಚನೆ ಹೊರಡಿಸುವ ಆಲೋಚನೆಯೇನಾದರೂ ಇದೆಯೇ; ಇದ್ದಲ್ಲಿ, ಈ ಕುರಿತು ಲಕ್ಷಾಂತರ ಅಭ್ಯರ್ಥಿಗಳ ಗೊಂದಲವನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳೇನು? (ವಿವರವನ್ನು ನೀಡುವುದು)

## ಖಾಲಿ ಹುದ್ದೆಗಳ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-**

೧೧೦೬ (೧೨೫೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ಪ್ರಸ್ತುತ ಹುದ್ದೆಗಳ ಸಂಖ್ಯೆ ಎಷ್ಟು; ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಉಳಿದಿರುವ ಹುದ್ದೆಗಳ ಸಂಖ್ಯೆ ಎಷ್ಟು; (ಇಲಾಖಾವಾರು ಹುದ್ದೆಗಳ ಮಾಹಿತಿ ನೀಡುವುದು)

(ಆ) ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ಪ್ರತ್ಯೇಕ ಇಲಾಖಾವಾರು ಮಾಹಿತಿ ನೀಡುವುದು)

## ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಪರಿಕ್ಷೆಗಳ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-**

೧೧೦೭ (೧೩೧೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸುವ ವಿವಿಧ ಹುದ್ದೆಗಳ ಪರೀಕ್ಷೆಗಾಗಿ ಅಭ್ಯರ್ಥಿಗಳ ಪರಿಕ್ಷಾ ಕೇಂದ್ರಗಳನ್ನು ಯಾವ ನಿಯಮ ಹಾಗೂ ಮಾನದಂಡದಡಿಯಲ್ಲಿ ನಿಗದಿ ಪಡಿಸಲಾಗುತ್ತಿದೆ;

(ಆ) ಅಭ್ಯರ್ಥಿಗಳ ಪರೀಕ್ಷಾ ಕೇಂದ್ರಗಳನ್ನು ಅವರ ಸ್ಥಳೀಯ ಜಿಲ್ಲೆಗಳಿಗೆ ನಿಗದಿ ಪಡಿಸದೇ ದೂರದ ಜಿಲ್ಲಾ ಕೇಂದ್ರಗಳಿಗೆ ನಿಗದಿಪಡಿಸಲು ಕಾರಣವೇನು; ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮಾದರಿಯಲ್ಲೇ ಅಭ್ಯರ್ಥಿಗಳು ಇಚ್ಚಿಸಿದ ಅಥವಾ ಅವರ ಸ್ಥಳೀಯ ಜಿಲ್ಲೆಗಳಿಗೆ ಪರೀಕ್ಷಾ ಕೇಂದ್ರಗಳನ್ನು ನಿಗದಿಪಡಿಸಬಹುದಲ್ಲವೇ;

(ಇ) ಅಭ್ಯರ್ಥಿಗಳ ಸ್ಥಳೀಯ ಜಿಲ್ಲೆಗಳಿಂದ ದೂರದ ಜಿಲ್ಲೆಗಳಿಗೆ ಪರೀಕ್ಷಾ ಕೇಂದ್ರಗಳಿಗೆ ನಿಗದಿ ಮಾಡುವುದರಿಂದ ಬಡ ಹಾಗೂ ನಿರುದ್ಯೋಗ

ಅಭ್ಯರ್ಥಿಗಳಿಗೆ ಬೇರೆ ಜಿಲ್ಲೆಗೆ ಪ್ರಯಾಣ, ವಸತಿ ಸೇರಿ ಹೆಚ್ಚಿನ ಆರ್ಥಿಕ ಹೊರೆ ಬೀಳುವುದಿಲ್ಲವೇ ಈ ಕುರಿತು ಅಭ್ಯರ್ಥಿಗಳ ಹಿತದೃಷ್ಟಿಯಿಂದ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು: ಅಭ್ಯರ್ಥಿಗಳಿಗೆ ವಸತಿಯಂತಹ ವ್ಯವಸ್ಥೆಯನ್ನು ಮಾಡಲು ಕ್ರಮ ಕೈಗೊಳ್ಳುವುದೇ;

(ಈ) ಪ್ರತಿ ಬಾರಿ ಪರೀಕ್ಷಾ ಅಕ್ರಮಗಳು ನಡೆಯುವ ಪರೀಕ್ಷಾ ಕೇಂದ್ರಗಳನ್ನು ಹೊಂದಿರುವ ಜಿಲ್ಲೆಗಳಲ್ಲಿ ಕೆಲವು ವರ್ಷಗಳ ಕಾಲ ತಾತ್ಕಾಲಿಕವಾಗಿ ಯಾವುದೇ ಪರೀಕ್ಷೆಗಳನ್ನು ನಡೆಸದೇ ಸರ್ಕಾರ ತೀರ್ಮಾನಿಸಿದೆಯೇ?

## ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸುವ ವಿವಿಧ ಪರೀಕ್ಷೆಗಳು ವಿಳಂಬವಾಗುತ್ತಿರುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-**

೧೧೦೮ (೧೨೩೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ಲೋಕಸೇವಾ ಆಯೋಗವು ಕಳೆದ ಒಂದು ವರ್ಷದಲ್ಲಿ ವಿವಿಧ ಹುದ್ದೆಗಳ ನೇಮಕಾತಿಗಾಗಿ ಒಟ್ಟು ಎಷ್ಟು ಅಧಿಸೂಚನೆಗಳನ್ನು ಹೊರಡಿಸಿದೆ;

(ಆ) ಅಧಿಸೂಚನೆ ಹೊರಡಿಸಿರುವ ನೇಮಕಾತಿಗಳಲ್ಲಿ ಯಾವ ಯಾವ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಲಾಗಿದೆ: ಫಲಿತಾಂಶಕ್ಕಾಗಿ ಬಾಕಿ ಉಳಿದಿರುವ ಅಧಿಸೂಚನೆಗಳನ್ನು ಯಾವ ಕಾಲಮಿತಿಯಲ್ಲಿ ಪ್ರಕಟಿಸಲಾಗುವುದು: (ವಿವರ ನೀಡುವುದು)

(ಇ) ಪ್ರಸ್ತುತ ನೇಮಕಾತಿ ಹಂತದಲ್ಲಿರುವ ಎಲ್ಲಾ ಹುದ್ದೆಗಳ ಪರೀಕ್ಷೆಗಳಿಗೆ ವೇಳಾಪಟ್ಟಿಗಳನ್ನು ನಿಗಧಿ ಪಡಿಸಲಾಗಿದೆಯೇ? (ವೇಳಾಪಟ್ಟಿಯನ್ನು ನೀಡುವುದು)

## ಆಲಮಟ್ಟಿ ಜಲಾಶಯದ ಕಾಮಗಾರಿಗಳ ವಿವರಣೆಯ ಬಗ್ಗೆ

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಹಾಗೂ**
**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೦೯ (೧೨೦೬+೧೨೦೮) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸರ್ಕಾರವು ಕೃಷ್ಣಾ ಮೇಲ್ದಂಡೆ ಯೋಜನೆಯ ಮೂಲಕ ಎಷ್ಟು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ; ಪ್ರಸ್ತುತ ಸದರಿ ಕಾಮಗಾರಿಗಳ ನೈಜ ವರದಿಯನ್ನು ತಿಳಿಸುವುದು;

(ಆ) ಸದರಿ ಜಲಾಶಯದ ಒಳಮಟ್ಟದ ಸಾಮರ್ಥ್ಯದ ೫೧೯.೬೦ ಮೀಟರ್ ದಿಂದ ೫೨೪.೨೫ ಮೀ. ವರೆಗೆ ಹೆಚ್ಚಿಸುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ; ವಿಳಂಬವಾಗಲು ಕಾರಣವೇನು; ಸದರಿ ವಿಳಂಬ ನಿವಾರಿಸಲು ಸರ್ಕಾರವು ಯಾವ ಕ್ರಮಗಳನ್ನು ತೆಗೆದುಕೊಂಡಿದೆ; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

(ಇ) ಕೊಪ್ಪಳ ಏತ ನೀರಾವರಿ ಯೋಜನೆಯ ಪ್ರಸ್ತುತ ಯಾಥಾಸ್ಥಿತಿ ಹಾಗೂ ಈ ಯೋಜನೆಯಲ್ಲಿ ನಿರ್ವಹಿಸಿದ ಕಾಮಗಾರಿಗಳು ಕಳಪೆ ಮಟ್ಟದಿಂದ ಕೂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗೂ ತರಾತುರಿಯಲ್ಲಿ ಯೋಜನೆಯುನ್ನು ಸರ್ಕಾರಕ್ಕೆ ಹಸ್ತಾಂತರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಆಲಮಟ್ಟಿ ಡ್ಯಾಂನ ಪ್ರಸ್ತುತ ಎತ್ತರ ಎಷ್ಟು ಹಾಗೂ ಪ್ರಸ್ತುತ ಎಷ್ಟು ಎಕರೆ ಪ್ರದೇಶವು ನೀರಾವರಿ ಯೋಜನೆಯಡಿಯಲ್ಲಿ ಬರುತ್ತದೆ; (ವಿವರ ನೀಡುವುದು)

(ಉ) ಆಲಮಟ್ಟಿ ಡ್ಯಾಂನ ಎತ್ತರ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಈ ಕುರಿತು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳ ವಿವರ ನೀಡುವುದು;

(ಊ) ಆಲಮಟ್ಟಿ ಡ್ಯಾಂನ ಎತ್ತರ ಹೆಚ್ಚಳ ಮಾಡುವುದರಿಂದ ಆ ಭಾಗದ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಡ್ಯಾಂನ ಎತ್ತರ ಹೆಚ್ಚಳ ಮಾಡಲು ಸರ್ಕಾರ ಮುಂದಾಗುವುದೇ? (ಮಾಹಿತಿ ನೀಡುವುದು)

## ರಾಜ್ಯದ ಬುಡಕಟ್ಟು ಜನಾಂಗಗಳಿಗೆ ನೀಡುತ್ತಿರುವ ಪೌಷ್ಟಿಕ ಆಹಾರದ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ (ನಾಮನಿರ್ದೇಶನ ಹೊಂದಿದವರು):-**

೧೧೧೦ (೧೨೧೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಎಷ್ಟು ಬುಡಕಟ್ಟು ಜನಾಂಗಗಳಿಗೆ ಪೌಷ್ಟಿಕ ಆಹಾರ ನೀಡಲಾಗುತ್ತಿದೆ; (ಜಿಲ್ಲಾವಾರು ಜನಾಂಗಗಳ ಸಹಿತ ಮಾಹಿತಿ ನೀಡುವುದು)

(ಆ) ಪೌಷ್ಟಿಕ ಆಹಾರ ನೀಡುತ್ತಿರುವ ಅವಧಿ ಮತ್ತು ಆಹಾರ ಸಾಮಾಗ್ರಿಗಳ ಪ್ರಮಾಣವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಬುಡಕಟ್ಟು ಇರುಳಿಗ ಜನಾಂಗಕ್ಕೆ ಪೌಷ್ಟಿಕ ಆಹಾರದ ಪಟ್ಟಿಯಲ್ಲಿ ಸೇರಿಸುವ ಯೋಚನೆ ಸರ್ಕಾರಕ್ಕೆ ಇದೆಯೇ?

## ಚಾಮರಾಜನಗರ ಜಿಲ್ಲೆಯಲ್ಲಿರುವ ಬುಡಕಟ್ಟು ಡೊಂಗ್ರಿ ಗರಾಸಿಯ ಜನಾಂಗದ ಕುರಿತು

ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ (ನಾಮನಿರ್ದೇಶನ ಹೊಂದಿದವರು):-

೧೧೧೧ (೧೨೧೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಚಾಮರಾಜನಗರ ಜಿಲ್ಲೆಯಲ್ಲಿ ಅಸ್ತಿತ್ವದ ಅಳಿವಿನಂಚಿರುವ ಬುಡಕಟ್ಟು ಡೊಂಗ್ರಿ ಗರಾಸಿಯ ಜನಾಂಗದ ಒಟ್ಟು ಎಷ್ಟು ಕುಟುಂಬಗಳಿವೆ; ಇದರಲ್ಲಿ ಜಮೀನು ಮತ್ತು ಮನೆಗಳನ್ನು ಹೊಂದಿರುವ ಕುಟುಂಬಗಳೆಷ್ಟು;

(ಆ) ಗುಂಡ್ಲುಪೇಟೆ ನಗರದ ವಾರ್ಡ್ ನಂಬರ್ ೨೩ರ ಬಿ.ಜೆ.ಆರ್. ಬಡಾವಣೆಯಲ್ಲಿ ಇರುವ ೧೫ ಡೊಂಗ್ರಿ ಗರಾಸಿಯ ಕುಟುಂಬಗಳು ಸ್ವಂತ ಜಾಗ ಮತ್ತು ಮನೆಗಳಿಲ್ಲದೆ ಮೂಲಭೂತ ಸೌಕರ್ಯಗಳಿಂದ ವಂಚಿತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ; ಬಂದಿದ್ದಲ್ಲಿ, ಇವರುಗಳಿಗೆ ಸರ್ಕಾರವು ಆಶ್ರಯ ಕಲ್ಪಿಸಿ ಮೂಲಸೌಲಭ್ಯ ಒದಗಿಸಲು ತೆಗೆದುಕೊಳ್ಳುವ ಕ್ರಮವೇನು?

## ಉತ್ತರ ಕನ್ನಡ ಜಿಲ್ಲೆಯ ಕ್ರೀಡಾಪಟುಗಳು, ಕಿಟ್‌ಗಳು ಮತ್ತು ಆರ್ಚರಿ ಕೇಂದ್ರದ ಕುರಿತು

ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ (ನಾಮನಿರ್ದೇಶನ ಹೊಂದಿದವರು):-

೧೧೧೨ (೧೨೧೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗದ ಕ್ರೀಡಾಪಟುಗಳಿಗೆ ಕಳೆದ ೦೨ ವರ್ಷದಲ್ಲಿ ಎಷ್ಟು ಕ್ರೀಡಾ ಕಿಟ್ ಗಳನ್ನು ನೀಡಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು) ಈ ಕ್ರೀಡಾಪಟುಗಳಿಗೆ ಕ್ರೀಡಾಕಿಟ್‌ಗಳನ್ನು ವಿತರಿಸುವಾಗ ಅನುಸರಿಸುವ ಮಾನದಂಡಗಳು ಯಾವುವು;

(ಆ) ಸದರಿ ಜಿಲ್ಲೆಯಲ್ಲಿ ಅರ್ಚರಿ ವಿಭಾಗದಲ್ಲಿ ಆಡಲು ಬುಡಕಟ್ಟು ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿ ತೋರುತ್ತಿರುವುದರಿಂದ ಈ ಜಿಲ್ಲೆಯಲ್ಲಿ ಅರ್ಚರಿ ತರಬೇತಿ ಕೇಂದ್ರ ಪ್ರಾರಂಭಿಸುವ ಯೋಚನೆ ಸರ್ಕಾರಕ್ಕೆ ಇದೆಯೇ? (ಇದ್ದಲ್ಲಿ ವಿವರಿಸುವುದು)

## ರಾಜ್ಯದಲ್ಲಿ ಇರುವ ಪರಿಶಿಷ್ಠ ಪಂಗಡದ ವಿದ್ಯಾರ್ಥಿ ನಿಲಯಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ (ನಾಮನಿರ್ದೇಶನ ಹೊಂದಿದವರು):-**

೧೧೧೩ (೧೨೧೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗಾಗಿ ಎಷ್ಟು ವಸತಿ ಶಾಲೆಗಳನ್ನು ತೆರೆಯಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ವಸತಿ ಶಾಲೆಗಳನ್ನು ನಡೆಸುವ ಏಜೆನ್ಸಿಗಳು ಯಾರು ಯಾರು; ಒಟ್ಟು ವಸತಿ ಶಾಲೆಗಳಲ್ಲಿ ಸ್ವಂತ ಕಟ್ಟಡ ಮತ್ತು ಪೀಠೋಪಕರಣ ಇರುವ ವಸತಿ ಶಾಲೆಗಳು ಮತ್ತು ಬಾಡಿಗೆ ಕಟ್ಟಡದಲ್ಲಿ ನಡೆಯುವ ವಸತಿ ಶಾಲೆಗಳೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

## ಜಿಲ್ಲಾ ಮತ್ತು ತಾಲ್ಲೂಕ್ ಮಟ್ಟದ ಇಲಾಖೆಗಳಲ್ಲಿ ಜಾರಿಗೆ ತಂದಿರುವ ಇ–ಫೈಲಿಂಗ್ ವ್ಯವಸ್ಥೆಯ ಸಮಸ್ಯೆ ಕುರಿತು

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು):–**

೧೧೧೪ (೧೧೮೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕ್ ಮಟ್ಟದ ಯಾವ ಕಛೇರಿಗಳಲ್ಲಿ/ಇಲಾಖೆಗಳಲ್ಲಿ ಇ–ಫೈಲಿಂಗ್ ವ್ಯವಸ್ಥೆ ಜಾರಿ ಮಾಡಿದೆ; (ವಿವರ ನೀಡುವುದು)

(ಆ) ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ತಂತ್ರಾಂಶ ಅಳವಡಿಕೆ, ಆಡಳಿತದಲ್ಲಿ ಪಾರದರ್ಶಕತೆ ಮತ್ತು ವಿಕೇಂದ್ರೀಕರಣದಂತಹ ವಿಷಯಗಳನ್ನು ಜನಸಾಮಾನ್ಯರಿಗೆ ತಲುಪಿಸಲು ಕೈಗೊಂಡ ಕ್ರಮಗಳೇನು;

(ಇ) ಈಗ ವ್ಯವಸ್ಥೆ ಮಾಡಿರುವ ಇ_ಫೈಲಿಂಗ್ ಕೇವಲ ಅಧಿಕಾರಿಗಳು ಮತ್ತು ಸಂಬಂಧಿಸಿದ ಸಿಬ್ಬಂದಿಗೆ ಮಾತ್ರ ತಿಳಿಯುತ್ತದೆಯೇ; ಜನಸಾಮಾನ್ಯರಿಗೆ ತಮ್ಮ ಅರ್ಜಿ ಫೈಲ್ ಯಾವ ಹಂತದಲ್ಲಿದೆ ಎಂದು ತಿಳಿಯಲು ಏನು ವ್ಯವಸ್ಥೆ ಮಾಡಲಾಗಿದೆ;

(ಈ) ಕಾಲಕಾಲಕ್ಕೆ ಹೊರಡಿಸುವ ಆದೇಶ ಪತ್ರಗಳು, ಸುತ್ತೋಲೆಗಳು, ಕಾನೂನುಗಳು/ನಿಯಮಾವಳಿಗಳು ಜಿಲ್ಲಾ, ತಾಲ್ಲೂಕ್ ಮತ್ತು ಗ್ರಾಮಗಳ ಮಟ್ಟದಲ್ಲಿ ಜನರಿಗೆ ತಲುಪಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರಣೆ ನೀಡುವುದು)

## ರಾಜ್ಯದ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಕುರಿತು

**ಶ್ರೀ ಕೆ. ಎ. ತಿಪ್ಪಸ್ವಾಮಿ (ನಾಮನಿರ್ದೇಶನ ಹೊಂದಿದವರು):-**

೧೧೧೫ (೧೨೨೧) ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರವಾಸೋದ್ಯಮ ಇಲಾಖೆಯಿಂದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸಿಗರ ಹೋಟೆಲ್ ಹಾಗೂ ಪ್ರವಾಸಿ ತಾಣಗಳನ್ನು ಸರ್ಕಾರದ ವತಿಯಿಂದ ನಿರ್ಮಿಸಲಾಗಿದೆಯೇ; (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು)

(ಆ) ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ವಿಶೇಷ ಆರ್ಥಿಕ ಸಹಾಯ ಯೋಜನೆ ಅಡಿ ಅಭಿವೃದ್ಧಿಗಾಗಿ ರಾಜ್ಯದಲ್ಲಿ ಆಯ್ಕೆ ಮಾಡಿರುವ ಪ್ರವಾಸಿ ತಾಣಗಳು ಯಾವುವು ಮತ್ತು ಇವುಗಳನ್ನು ಯಾವ ಆದಾರದ ಮೇಲೆ ಆಯ್ಕೆ ಮಾಡಲಾಗಿದೆ; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯ ಸರ್ಕಾರಕ್ಕೆ, ಈ ಯೋಜನೆ ಅಡಿ ದೊರೆಯುವ ವಿಶೇಷ ಆರ್ಥಿಕ ನೆರವು ಮತ್ತು ಸವಲತ್ತುಗಳು ಯಾವುವು ಈ ನೆರವು ಮತ್ತು ಸವಲತ್ತುಗಳನ್ನು ಬಳಸಿಕೊಳ್ಳಲು ಸರ್ಕಾರ ಮಾಡಿರುವ ಕ್ರಿಯಾ ಯೋಜನೆಗಳು ಯಾವುವು; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯ ಸರ್ಕಾರ ಮೇಲಿನ ಯೋಜನೆ ಅಡಿ ಕೇಂದ್ರ ಸರ್ಕಾರದ ನೆರವು ಪಡೆದು ಅಭಿವೃದ್ಧಿಪಡಿಸಲು ಗುರುತಿಸಿರುವ ಪ್ರವಾಸಿಗರ ತಾಣಗಳು ಯಾವುವು; ಮತ್ತು ಈ ಬಗ್ಗೆ ರಾಜ್ಯ ಸರ್ಕಾರದಿಂದ

ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆಯೇ? (ಪೂರ್ಣ ಮಾಹಿತಿ ನೀಡುವುದು)

## ಬೆಂಗಳೂರು ನಗರದ ವ್ಯಾಪ್ತಿಯ ಕಣಿವೆಗಳ ಸ್ಥಿತಿಗತಿಗಳ ಬಗ್ಗೆ

**ಶ್ರೀ ಕೆ.ಎ. ತಿಪ್ಪಸ್ವಾಮಿ (ನಾಮನಿರ್ದೇಶನ ಹೊಂದಿದವರು):-**

೧೧೧೬ (೧೨೨೨) ಮಾನ್ಯ ಸಣ್ಣ ನೀರಾವರಿ ಮತ್ತು ವಿಜ್ಞಾನ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರದಲ್ಲಿರುವ ಕಣಿವೆಗಳು ಯಾವುವು ಮತ್ತು ಈ ಕಣಿವೆಗಳ ವ್ಯಾಪ್ತಿಯಲ್ಲಿ ಬರುವ ಕೆರೆಗಳು ಯಾವುವು; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

(ಆ) ಬೆಂಗಳೂರು ನಗರದ ಕಲುಷಿತ ನೀರನ್ನು ಶುದ್ದೀಕರಿಸಿ ಯಾವ ಯಾವ ಕಣಿವೆಗಳ ಮುಖೇನಾ ನಗರದ ಪಕ್ಕದ ಜಿಲ್ಲೆಗಳಲ್ಲಿನ ಕೆರೆಗಳನ್ನು ತುಂಬಿಸಲು ಯೋಜನೆಗಳನ್ನು ರೂಪಿಸಲಾಗಿದೆ; ಮತ್ತು ಈ ಯೋಜನೆಗಳ ಅನುಷ್ಠಾನ ಯಾವ ಹಂತದಲ್ಲಿವೆ; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯ ಸರ್ಕಾರ ಈ ಯೋಜನೆಗಳಿಗೆ ನಿಗದಿಪಡಿಸಿದ ಒಟ್ಟು ಅವುದಾನವೆಷ್ಟು; ಮತ್ತು ಇದುವರೆಗೂ ಎಷ್ಟು. ಅನುದಾನವನ್ನು ಬಳಸಿಕೊಳ್ಳಲಾಗಿದೆ; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯ ಸರ್ಕಾರ ಕಲುಷಿತ ನೀರನ್ನು ಶುದ್ದೀಕರಿಸಿ ನಾಗರೀಕರು ಮತ್ತು ರೈತರು ಉಪಯೋಗಿಸುವುದರಿಂದ ಈ ಬಗ್ಗೆ ಉಂಟಾಗುವ ಹಾನಿಕಾರಕ ವಿಷಯಗಳ ಬಗ್ಗೆ ಸರ್ಕಾರ ಅಧ್ಯಯನ ನಡೆಸಿದೆಯೇ; ಹಾಗಿದಲ್ಲಿ ಅಧ್ಯಯನದಿಂದ ಹೊರ ಹೊಮ್ಮಿದ ವಿಷಯಗಳು ಯಾವುವು? (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

# ಬೆಂಗಳೂರು ನಗರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯ ಅನುಷ್ಠಾನದ ಬಗ್ಗೆ

**ಶ್ರೀ ಕೆ.ಎ. ತಿಪ್ಪಸ್ವಾಮಿ (ನಾಮನಿರ್ದೇಶನ ಹೊಂದಿದವರು):-**

೧೧೧೭ (೧೨೨೩) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯಿದೆ ಅಡಿಯಲ್ಲಿ ಪ್ರತಿ ೧೦ ವರ್ಷಕ್ಕೆ ಒಮ್ಮೆ ಸ್ಥಳೀಯ ಯೋಜನೆ ಪ್ರದೇಶದ ಮಹಾ ಯೋಜನೆ ತಯಾರಿಸುವುದು ಕಡ್ಡಾಯವಲ್ಲವೇ; ಹಾಗಿದ್ದಲ್ಲಿ. ಬೆಂಗಳೂರು ನಗರಕ್ಕೆ ಇಂತಹ ಯೋಜನೆಯನ್ನು ಸರ್ಕಾರ ತಯಾರಿಸುತ್ತಿದೆಯೇ;

(ಆ) ಈ ಮಹಾ ಯೋಜನೆಯನ್ನು ತಯಾರಿಸಲು ಯಾವ ಸಂಸ್ಥೆಗೆ ವಹಿಸಲಾಗಿದೆ: ಮತ್ತು ಯಾವ ಹಂತದಲ್ಲಿದೆ; (ಮಾಹಿತಿ ನೀಡುವುದು)

(ಇ) ಈ ಯೋಜನೆಯನ್ನು ತಯಾರಿಸಲು ಅನುಸರಿಸುತ್ತಿರುವ ಮಾನದಂಡಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಈ) ಅನುಮೋದಿತ ನಗರ ಮಹಾ ಯೋಜನೆ ಇಲ್ಲದೆ ನಗರ ಸ್ಥಳೀಯ ಸಂಸ್ಥೆಗಳ ವ್ಯವಸ್ಥಿತ ರೀತಿಯಲ್ಲಿ ಕಾರ್ಯನಿರ್ವಹಿಸದೆ ಹಲವು ರೀತಿಯ ಅಕ್ರಮಗಳಿಗೆ ಎಡೆಮಾಡಿಕೊಡುವುದನ್ನು ಸರ್ಕಾರ ಗಮನಿಸಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

# ತುಂಗಭದ್ರಾ ಜಲಾಶಯದ ಸಾಮರ್ಥ ಹೆಚ್ಚಿಸುವ ಸಂಬಂಧ ಕೈಗೊಂಡಿರುವ ಕ್ರಮಗಳ ಬಗ್ಗೆ

**ಶ್ರೀ ಕೆ.ಎ. ತಿಪ್ಪಸ್ವಾಮಿ (ನಾಮನಿರ್ದೇಶನ ಹೊಂದಿದವರು):-**

೧೧೧೮ (೧೨೨೪) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಪ್ರಮುಖ ಅಣೆಕಟ್ಟಿನಲ್ಲಿ ಒಂದಾದ ತುಂಗಾಭದ್ರ ಜಲಾಶಯವು ಹೂಳಿನಿಂದ ತುಂಬಿ ಜಲಾಶಯದ ಸಾಮರ್ಥ್ಯ ಕುಗ್ಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪೂರ್ಣ ಮಾಹಿತಿ ನೀಡುವುದು)

(ಆ) ತುಂಗಾಭದ್ರ ಜಲಾಶಯ ಸಾಮರ್ಥ್ಯ ಹೆಚ್ಚಿಸಲು ನವಲಿ ಬಳಿ ಸಮಾನಂತರ ಜಲಾಶಯ ನಿರ್ಮಿಸಲು ವಿಸ್ತ್ರತ ಯೋಜನಾ ವರದಿಯನ್ನು ರಾಜ್ಯ ಸರ್ಕಾರ ತಯಾರಿಸಿದೆಯೇ; ಹಾಗಿದ್ದಲ್ಲಿ. ಈ ಯೋಜನೆಯ ರೂಪುರೇಷಗಳು ಯಾವುವು ಮತ್ತು ಈ ಯೋಜನೆಯ ಅನುಷ್ಠಾನ ಯಾವ ಹಂತದಲ್ಲಿದೆ;

(ಇ) ಈ ಸಮಾನಂತರ ಜಲಾಶಯದ ನಿರ್ಮಾಣದಲ್ಲಿ ಆಂಧ್ರ-ತೆಲಂಗಾಣ ಹಾಗೂ ಕೇಂದ್ರ ಸರ್ಕಾರದಿಂದ ಅಗತ್ಯವಿರುವ ಸಹಮತಿ ಹಾಗೂ ಮಂಜೂರಾತಿಗಳನ್ನು ಪಡೆಯಲಾಗಿದೆಯೇ; ಪೂರ್ಣ ಮಾಹಿತಿ ಅಗತ್ಯವಿರುವ ಸಹಮತಿ ಹಾಗೂ ಮಂಜೂರಾತಿಗಳನ್ನು ಪಡೆಯಾಲಾಗಿದೆಯೇ? (ಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ನಡೆದಿರುವ ಅತ್ಯಾಚಾರ ಪ್ರಕರಣದ ಬಗ್ಗೆ

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು):-**

೧೧೯೯ (೧೨೧೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಕಳೆದ ೦೫ ವರ್ಷದ ಅವಧಿಯಿಂದ ಇಲ್ಲಿಯವರೆಗೂ ದಾಖಲಾಗಿರುವ ಮಹಿಳೆಯರ ಅತ್ಯಾಚಾರ ಪ್ರಕರಣಗಳ ಸಂಖ್ಯೆಯೆಷ್ಟು; (ಜಿಲ್ಲಾವಾರು) ದಾಖಲಾಗಿರುವ ಪ್ರಕರಣಗಳಲ್ಲಿ ಇದುವರೆಗೂ ಎಷ್ಟು ಅಪರಾಧಿಗಳಿಗೆ ಶಿಕ್ಷೆಯಾಗಿದೆ; ಎಷ್ಟು ಪ್ರಕರಣಗಳು ಬಾಕಿ ಇದೆ; ಬಾಕಿ ಇದ್ದಲ್ಲಿ ಕಾರಣಗಳೇನು;

(ಆ) ಅತ್ಯಾಚಾರ ಪ್ರಕರಣದಲ್ಲಿ ದೇಶದಲ್ಲೇ ರಾಜ್ಯವು ಯಾವ ಸ್ಥಾನದಲ್ಲಿದೆ ಹಾಗೂ ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಯರಿಗೆ ಸರ್ಕಾರದಿಂದ ಯಾವ ರೀತಿಯ ನೆರವನ್ನು ನೀಡಲಾಗುತ್ತಿದೆ;

(ಇ) ಅತ್ಯಾಚಾರ ಹಾಗೂ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಯಲು ಸರ್ಕಾರ ಯಾವ ಯಾವ ಕ್ರಮಗಳನ್ನುಕೈಗೊಂಡಿದೆ;

(ಈ) ಪೊಲೀಸ್ ಇಲಾಖೆಯು ಸರಿಯಾದ ಸಾಕ್ಷ್ಯಗಳನ್ನು ಸಂಗ್ರಹಿಸುವಲ್ಲಿ ವಿಫಲವಾಗಿರುವುದರಿಂದ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿ ಕೊಳ್ಳುತ್ತಿದ್ದಾರೆ ಎಂಬುದನ್ನು ಸರ್ಕಾರ ಒಪ್ಪಿಕೊಳ್ಳುವುದೇ?

## ಕೋಮುವಾದ ತಡೆಗಟ್ಟಲು ಪ್ರತ್ಯೇಕ ಪೊಲೀಸ್ ವಿಭಾಗ ತೆರೆಯುವ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೨೦ (೧೯೯೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ೫ ವರ್ಷಗಳಲ್ಲಿ ಕೋಮುವಾದ ತಡೆ ಕಾನೂನುಗಳಡಿ ದಾಖಲಾದ ಪ್ರಕರಣಗಳೆಷ್ಟು; (ವರ್ಷವಾರು ವಿವರ ಒದಗಿಸುವುದು)

(ಆ) ಕಳೆದ ಕೆಲವು ವರ್ಷಗಳಿಂದ ಕೋಮುವಾದ ಹೆಚ್ಚಾಗಿ ಕೆಲವು ಕೋಮುವಾದಿಗಳು ಯಾವುದೇ ಕಾನೂನಿನ ಕ್ರಮದ ಭಯವಿಲ್ಲದೆ ದ್ವೇಷ ಭಾಷಣಗಳನ್ನು ಮಾಡುತ್ತಿರುವುದರಿಂದ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಉಂಟಾಗಿದ್ದು, ಇದನ್ನು ತಡೆಗಟ್ಟಲು ಪ್ರತ್ಯೇಕ ಪೊಲೀಸ್ ವಿಭಾಗ ಇದೆಯೇ;

(ಇ) ಇಲ್ಲದಿದ್ದಲ್ಲಿ, ಈ ರೀತಿಯ ಹೊಸ ವಿಭಾಗ ತೆರೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ? (ವಿವರ ಒದಗಿಸುವುದು)

## ಕೋಮು ನಿಂದನೆ ಹೆಚ್ಚುತ್ತಿರುವ ಕುರಿತು

**ಡಾ. ಯತೀಂದ್ರ ಎಸ್. (ವಿಧಾನ ಸಭೆಯಿಂದ ಚುನಾಯಿತರಾದವರು):-**

೧೧೨೧ (೧೯೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ಕೆಲವು ವರ್ಷಗಳಿಂದ ಕೋಮು ನಿಂದನೆ ಸರ್ವೆ ಸಾಮಾನ್ಯವಾಗಿದ್ದು, ಇದರಿಂದ ಸಾಕಷ್ಟು ಮಾನವ ಹಕ್ಕುಗಳು ಉಲ್ಲಂಘನೆಯಾಗುತ್ತಿರುವ ವಿಚಾರ ಕುರಿತು ಕರ್ನಾಟಕ ಮಾನವ ಹಕ್ಕುಗಳ ಆಯೋಗದಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ; (ಪ್ರಕರಣಗಳ ವಿವರ ಒದಗಿಸುವುದು)

(ಆ) ಕೋಮು ನಿಂದನೆ ತಡೆಯಲು ಕರ್ನಾಟಕ ಮಾನವ ಹಕ್ಕುಗಳ ಆಯೋಗದಡಿ ಪ್ರತ್ಯೇಕ ವಿಭಾಗವಿದೆಯೇ; ಇಲ್ಲದಿದ್ದಲ್ಲಿ, ಒಂದು ಹೊಸ ವಿಭಾಗ ಸ್ಥಾಪಿಸುವ ಉದ್ದೇಶವಿದೆಯೇ? (ವಿವರ ಒದಗಿಸುವುದು)

## ಸುಳ್ಳು ಸುದ್ದಿ ತಡೆ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೨೨ (೧೧೯೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸುಳ್ಳು ಸುದ್ದಿ ಪ್ರಚಾರ ಮಾಡುವುದು ಒಂದು ಸಾಮಾಜಿಕ ಪಿಡುಗಾಗಿದ್ದು ಈ ಸುಳ್ಳು ಸುದ್ದಿಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)

(ಆ) ಸುಳ್ಳು ಸುದ್ದಿ ತಡೆಗಟ್ಟಲು ಪ್ರತ್ಯೇಕ ವಿಭಾಗ ಇದೆಯೇ; ಇಲ್ಲದಿದ್ದಲ್ಲಿ, ಸುಳ್ಳು ಸುದ್ದಿ ಪತ್ತೆ ವಿಭಾಗವನ್ನು ಹೊಸದಾಗಿ ಸೃಷ್ಟಿಸುವ ಉದ್ದೇಶ ಇದೆಯೇ? (ವಿವರ ಒದಗಿಸುವುದು)

## ನಬಾರ್ಡ್‌ನಿಂದ ದೊರೆಯುವ ಸಾಲದ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೨೩ (೧೧೯೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೧೪ ರಿಂದ ೨೦೨೪ರವರೆಗೆ ರಾಜ್ಯಕ್ಕೆ ನಬಾರ್ಡ್‌ನಿಂದ ಎಷ್ಟು ಕೋಟಿ ರೂ. ಸಾಲ ದೊರಕಿದೆ; (ವರ್ಷಾವಾರು ವಿವರ ಒದಗಿಸುವುದು)

(ಆ) ಇತ್ತೀಚಿಗೆ ನಬಾರ್ಡ್‌ನಿಂದ ಸಿಗುವ ಸಾಲದ ಮೊತ್ತದಲ್ಲಿ ಗಣನೀಯ ಇಳಿಕೆಯಾಗುತ್ತಿರುವುದರಿಂದ ಕರ್ನಾಟಕದ ರೈತರಿಗೆ ಅನ್ಯಾಯವಾಗುತ್ತಿದ್ದು, ಈ ಅನ್ಯಾಯವನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)

## ಪ್ರವಾಸಿ ಸ್ಥಳಗಳನ್ನು ಗುರುತಿಸುವ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೨೪ (೧೧೯೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಪ್ರವಾಸಿ ತಾಣಗಳು ಮತ್ತು ಪಾರಂಪರಿಕ ತಾಣಗಳನ್ನು ಗುರುತಿಸಲಾಗಿದೆ; (ವಿವರ ಒದಗಿಸುವುದು)

(ಆ) ಈಗಾಗಲೇ ಗುರುತಿಸಲಾಗಿರುವ ಪ್ರವಾಸ ತಾಣಗಳಿಗೆ ಬೇಕಾದ ಮೂಲಭೂತ ಸೌಕರ್ಯಗಳಿಗಾಗಿ ಕಳೆದ ೫ ವರ್ಷಗಳಲ್ಲಿ ನೀಡಿರುವ ಅನುದಾನವೆಷ್ಟು? (ವಿವರ ನೀಡುವುದು)

## ಮೈಸೂರು ಪೊಲೀಸ್ ಭವನಕ್ಕೆ ಸಂಬಂಧಿಸಿದ ಪ್ರಶ್ನೆಗಳು

**ಶ್ರೀ ಅಡಗೂರು ಹೆಚ್.ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು):-**

೧೧೨೫ (೧೧೮೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮೈಸೂರು ಪೊಲೀಸ್ ಭವನ ಎಂಬ ಸಮುದಾಯ ಭವನ ಕಟ್ಟಲು ಪೊಲೀಸ್ ವೆಲ್ಫೇರ್ ಟ್ರಸ್ಟ್ (ರಿ) ಎಂಬ "ಖಾಸಗಿ ಟ್ರಸ್ಟ್" ರವರಿಗೆ ಕೆ.ಎ.ಆರ್.ಪಿ. ಮೌಂಟೆಡ್ ಕಂಪನಿಗೆ. ಸರ್ಕಾರಕ್ಕೆ ಸೇರಿದ ಭೂಮಿಯನ್ನು ಯಾವ ಸರ್ಕಾರಿ ಆದೇಶದ ಪ್ರಕಾರ ನೀಡಲಾಗಿದೆ; (ಆದೇಶದ ಪ್ರತಿ ನೀಡುವುದು)

(ಆ) ಮೈಸೂರು ಪೊಲೀಸ್ ಭವನದ ಆಡಳಿತಾತ್ಮಕ ಮತ್ತು ಹಣಕಾಸಿನ ವ್ಯವಹಾರವನ್ನು ಮೈಸೂರು ಪೊಲೀಸ್ ಆಯುಕ್ತರೆ ಅಧ್ಯಕ್ಷರಾಗಿ,

ಅಧಿಕಾರ ನಿರ್ವಹಿಸುತ್ತಿರುವುದರಿಂದ ೧೯೯೭ ರಿಂದ ೨೦೨೪ರ ವರೆಗೆ ಸರ್ಕಾರದಿಂದ ಪೂರ್ವಾನುಮತಿ ಪಡೆದಿರುವ ದಾಖಲಾತಿ ಒದಗಿಸುವುದು;

(ಇ) ದಿನಾಂಕ:೦೧.೧೧.೨೦೦೦ ರಿಂದ ೦೧.೧೧.೨೦೨೪ರವರೆಗೆ ಮೈಸೂರು ಪೊಲೀಸ್ ಭವನದಿಂದ ಬಾಡಿಗೆ ರೂಪದಲ್ಲಿ ಸಾರ್ವಜನಿಕರಿಂದ ಎಷ್ಟು ಹಣವನ್ನು ಪಡೆಯಲಾಗಿದೆ: ಪಡೆದ ಹಣವನ್ನು ಸರ್ಕಾರದ ಯಾವ ಲೆಕ್ಕ ಶೀರ್ಷಿಕೆಗೆ ಜಮಾಯಿಸಲಾಗಿದೆ ಮತ್ತು ಪಡೆದ ಹಣಕ್ಕೆ ಜಿ.ಎಸ್.ಟಿ. ಕಟ್ಟಲಾಗಿದೆಯೇ; (ಎಲ್ಲಾ ವರ್ಷದ ಆದಾಯ ತೆರಿಗೆ ಪಾವತಿ ಮಾಡಿರುವ ರಿಟರ್ನ್ಸ್ ಒದಗಿಸುವುದು)

(ಈ) ಈ ಅವಧಿಯಲ್ಲಿ ಜಿ.ಎಸ್.ಟಿ. ಇಲಾಖೆಯು ಸದರಿ ಮೈಸೂರು ಪೊಲೀಸ್ ಭವನಕ್ಕೆ ನೀಡಿರುವ ನೋಟೀಸ್ ಮತ್ತು ಆದೇಶಗಳನ್ನು ನೀಡುವುದು ಹಾಗೂ ಯಾವ ಯಾವ ಅವಧಿಯಲ್ಲಿ ಯಾವ ಯಾವ ಪೊಲೀಸ್ ಆಯುಕ್ತರು ಕಾರ್ಯನಿರ್ವಹಿಸುತ್ತಿದ್ದರು; (ಅವರುಗಳ ಪದನಾಮ, ಹಾಲಿ ಮತ್ತು ನಿವೃತ್ತಿ ಹೊಂದಿದ ಅಧಿಕಾರಿಗಳ ವಿಳಾಸದ ಮಾಹಿತಿ ನೀಡುವುದು)

(ಉ) ಸದರಿ ಮೈಸೂರು ಪೊಲೀಸ್ ಭವನ ಕಟ್ಟಡಕ್ಕೆ ಸಿ.ಆರ್. ಹಾಗೂ ಅಗ್ನಿಶಾಮಕ ಇಲಾಖೆಯಿಂದ ಅನುಮತಿ ಪಡೆಯಲಾಗಿದೆಯೇ? (ದಾಖಲೆ ನೀಡುವುದು)

## ಸಣ್ಣ ಕೆರೆ–ಕಟ್ಟೆಗಳನ್ನು ಅಭಿವೃದ್ಧಿ ಮಾಡುವ ಕುರಿತು

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ):-**

೧೧೨೬ (೧೨೩೫) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ ಜಿಲ್ಲೆಗಳಲ್ಲಿ ಬರುವ ಸಣ್ಣ ಕೆರೆ ಕಟ್ಟೆಗಳು ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ. ಅವುಗಳು ಯಾವುವು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಸಣ್ಣ ಕೆರೆ ಕಟ್ಟೆಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ೨೦೨೩ ರಿಂದ ೨೦೨೪ನೇ ಸಾಲಿನವರೆಗೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು; (ಕಾಮಗಾರಿಯ ಪೂರ್ಣ ವಿವರ ನೀಡುವುದು)

(ಇ) ಸಣ್ಣ ಕೆರೆ ಕಟ್ಟೆಗಳನ್ನು ನಂಬಿಕೊಂಡು ಈ ಜಿಲ್ಲೆಯ ರೈತರು ವ್ಯವಸಾಯವನ್ನು ಮಾಡುತ್ತಾ ಬಂದಿದ್ದು ಈ ಕೆರೆ ಕಟ್ಟೆಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಹೂಳು ತೆಗೆದು ಅಭಿವೃದ್ಧಿ ಮಾಡಲು ಹೆಚ್ಚಿನ ಅನುದಾನವನ್ನು ನೀಡಿ ಅಭಿವೃದ್ಧಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

## ಕ್ರೀಡಾಂಗಣ ನಿರ್ಮಾಣ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೨೭ (೧೧೭೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೀದರ್ ಜಿಲ್ಲೆಯ ವ್ಯಾಪ್ತಿಯ ತಾಲ್ಲೂಕುಗಳ ಕ್ರೀಡಾಂಗಣವಿಲ್ಲದೆ ಕ್ರೀಡಾಪಟುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು;

(ಆ) ಸದರಿ ಜಿಲ್ಲೆಯ ತಾಲ್ಲೂಕುಗಳಲ್ಲಿ ಹೊಸ ಕ್ರೀಡಾಂಗಣ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು? (ವಿವರ ನೀಡುವುದು)

## ಪರಿಷ್ಕರಿಸುವ ಆದೇಶ ಹೊರಡಿಸುವ ಬಗ್ಗೆ

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೨೮ (೧೧೮೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಿನಾಂಕ: ೦೧.೦೭.೨೦೨೨ ರಿಂದ ३೧.೦೭.೨೦೨೪ರ ಅವಧಿಯಲ್ಲಿ ನಿವೃತ್ತರಾದ ನೌಕರರಿಗೆ ಡಿ.ಸಿ.ಆರ್.ಜಿ ಕಮ್ಯುಟೇಶನ್, ಗಳಿಕೆ ರಜೆ ನಗದೀಕರಣ ಮೊತ್ತವನ್ನು ೭ನೇ ವೇತನ ಆಯೋಗದ ಲೆಕ್ಕಾಚಾರದಲ್ಲಿ ಪರಿಷ್ಕರಿಸುವ ಆದೇಶ ಹೊರಡಿಸುವ ಸಂಬಂದ ನಿವೃತ್ತ ನೌಕರರು ಹೋರಾಟ/ ಧರಣಿ/ ಸತ್ಯಾಗ್ರಹ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಆ) ಬಂದಿದಲ್ಲಿ ಸರ್ಕಾರದ ಪರಿಷ್ಕೃತ ಆದೇಶ ಹೋರಡಿಸಲು ಸರ್ಕಾರ ಕೈಗೊಂಡ ಕ್ರಮವೇನು; ಯಾವಾಗ ಪರಿಷ್ಕೃತ ಆದೇಶ ಹೊರಡಿಸಲಾಗುವುದು?

## ಬೆಂಗಳೂರು ಉತ್ತರ ತಾಲ್ಲೂಕಿನ ದೊಡ್ಡಬಿದರಕಲ್ಲು ಮತ್ತು ಮಾದಾವರ ಕೆರೆಗಳ ಅಭಿವೃದ್ಧಿ ಬಗ್ಗೆ

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಕ್ಷೇತ್ರ):-**

೧೧೨೯ (೧೨೫೧) ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಉತ್ತರ ತಾಲ್ಲೂಕಿನ ಮಾದನಾಯಕನಹಳ್ಳಿ ನಗರ ಸಭೆ ವ್ಯಾಪ್ತಿಯಲ್ಲಿ ಇರುವ ಕೆರೆಗಳು ಯಾವುವು; (ಕೆರೆಗಳ ಹೆಸರುಗಳನ್ನು ತಿಳಿಸುವುದು)

(ಆ) ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಯ ದೊಡ್ಡಬಿದರಕಲ್ಲು ಮತ್ತು ಮಾದಾವರ ಗ್ರಾಮದ ಕರೆಯ ವಿಸ್ತೀರ್ಣವೆಷ್ಟು; ಈ ಕೆರೆಯ ನೀರನ್ನು ಉಪಯೋಗ ಮಾಡುವ ಸುತ್ತಮುತ್ತಲ ಗ್ರಾಮಗಳೆಷ್ಟು; (ವಿವರ ತಿಳಿಸುವುದು)

(ಇ) ಸದರಿ ಕೆರೆಯು ಒತ್ತುವರಿಯಾಗಿದೆಯೇ; ಇದ್ದಲ್ಲಿ, ಎಷ್ಟು ವಿಸ್ತೀರ್ಣದ ಕೆರೆ ಒತ್ತುವರಿಯಾಗಿದೆ ಮತ್ತು ತೆರೆವುಗೊಳಿಸಲು ಕೈಗೊಂಡಿರುವ ಕ್ರಮಗಳೇನು;

(ಈ) ಕೆರೆಯ ಸುತ್ತಮುತ್ತಲಿನ ಗ್ರಾಮಗಳಲ್ಲಿನ ಕೊಳವೆ ಬಾವಿಗಳಲ್ಲಿ ಅಂತರ್ಜಲ ಬತ್ತಿ ಹೋಗಿರುವುದರಿಂದ ಗ್ರಾಮಸ್ಥರು ಅಂತರ್ಜಲ ವೃದ್ಧಿಸಲು ನಾಗಸಂದ್ರ ಎಸ್‌ಟಿಪಿ ಯಿಂದ ಸಂಸ್ಕರಿಸಿದ ನೀರನ್ನು ಕೆರೆಗೆ ಹರಿಸಲು ಮನವಿ ನೀಡಿರುವುದು ನಿಜವೇ; ಇದ್ದಲ್ಲಿ ನೀರು ಹರಿಸಲು ಕೈಗೊಂಡಿರುವ ಕ್ರಮಗಳೇನು;

(ಉ) ಈ ಕೆರೆಯ ಹೂಳೆತ್ತಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರದಿಂದ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)

## ಬೆಂಗಳೂರು ಉತ್ತರ ತಾಲ್ಲೂಕಿನ ಕೆಲವು ಭಾಗಗಳನ್ನು ಬಿ.ಬಿ.ಎಂ.ಪಿ ವ್ಯಾಪ್ತಿಗೆ ಪರಿಗಣಿಸುವ ಬಗ್ಗೆ

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೩೦ (೧೨೬೦) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಉತ್ತರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ದೊಡ್ಡ ಬಿದರಕಲ್ಲು ಚನ್ನನಾಯಕನ ಪಾಳ್ಯ, ತಿಪ್ಪೇನಹಳ್ಳಿ, ಇತ್ಯಾದಿ ಗ್ರಾಮಗಳನ್ನು ಯಾವ ದಿನಾಂಕದಂದು ಬಿಬಿಎಂಪಿ ವ್ಯಾಪ್ತಿಗೆ

ಒಳಪಡಿಸಲಾಯಿತು; ಸದರಿ ಗ್ರಾಮಗಳನ್ನು ಬಿಬಿಎಂಬಿ ವ್ಯಾಪ್ತಿಗೊಳಪಡಿಸಿದ ನಂತರ ಬಿಬಿಎಂಬಿ ವತಿಯಿಂದ ಈವರೆವಿಗೂ ಯಾವ್ಯಾವ ಮುಲಸೌಕರ್ಯಗಳನ್ನು ಒದಗಿಸಲಾಗಿದೆ; (ವಿವರ ನೀಡುವುದು)

(ಆ) ಚನ್ನನಾಯಕನ ಪಾಳ್ಯದ ಪಕ್ಕದಲ್ಲಿ ಮತ್ತು ಎನ್.ಹೆಚ್–೪ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಚಿಕ್ಕಬಿದರಕಲ್ಲು ಗ್ರಾಮವನ್ನು ಬಿಬಿಎಂಪಿ ವ್ಯಾಪ್ತಿಗೆ ಒಳಪಡಿಸದೆ ಇರಲು ಕಾರಣಗಳೇನು; ಈ ಗ್ರಾಮವನ್ನು ಯಾವ ಕಾಲಮಿತಿಯೊಳಗೆ ಬಿಬಿಎಂಪಿ ವ್ಯಾಪ್ತಿಗೊಳಪಡಿಸಿ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗುವುದು?

## ಕಲಬುರಗಿ ಜಿಲ್ಲೆಯ ಕಮಲಾಪುರ ಗಂಡೋರಿ ನಾಲಾ ಮುಖ್ಯ ಕಾಲುವೆ ದುರಸ್ತಿ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೧೧೩೧ (೧೨೬೧) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯ ಕಮಲಾಪುರ ತಾಲ್ಲೂಕಿನ ಗಂಡೋರಿ ನಾಲಾ ಅಣೆಕಟ್ಟೆಯ ಮುಖ್ಯ ಕಾಲುವೆ ಹಾಗೂ ವಿತರಣಾ ನಾಲೆಗಳ ದುರಸ್ತಿಗೆ ಬಿಡುಗಡೆಯಾದ ಅನುದಾನದಲ್ಲಿ ಕಳಪೆ ಕಾಮಗಾರಿ ನಿರ್ವಹಿಸಲಾಗಿದೆ ಎಂಬ ದೂರು ಲೋಕಾಯುಕ್ತಕ್ಕೆ ಸಲ್ಲಿಕೆಯಾಗಿರುವುದು ಹಾಗೂ ಕಾಮಗಾರಿಗಳಲ್ಲಿ ಅಕ್ರಮಗಳು ನಡೆದಿರುವುದು ನಿಜವೇ; (ವಿವರ ನೀಡುವುದು)

(ಆ) ಸದರಿ ಕಾಮಗಾರಿ ದುರಸ್ತಿಗೆ ಬಿಡುಗಡೆಯಾದ ಅನುದಾನ ಎಷ್ಟು; ಈ ಕಾಮಗಾರಿಗಳಲ್ಲಿ ಅಕ್ರಮಗಳು ನಡೆದಿರುವ ಹಿನ್ನಲೆಯಲ್ಲಿ

ಸರ್ಕಾರಕ್ಕೆ ಆಗಿರುವ ನಷ್ಟ ಎಷ್ಟು; ಅಕ್ರಮಕ್ಕೆ ಹೊಣೆಗಾರರು ಯಾರು; (ವಿವರ ನೀಡುವುದು)

(ಇ) ಕಾಮಗಾರಿಯನ್ನು ಗುತ್ತಿಗೆ ನೀಡುವಾಗ ಟೆಂಡರ್ ಕರೆಯಲಾಗಿತ್ತೆ; ಟೆಂಡರ್‌ನಲ್ಲಿ ಭಾಗವಹಿಸಿದ ಸಂಸ್ಥೆಗಳು ಯಾವುವು ಹಾಗೂ ನಮೂದಿಸಿದ ಟೆಂಡರ್ ಮೊತ್ತ ಎಷ್ಟು ಅಂತಿಮವಾಗಿ ಯಾವ ಸಂಸ್ಥೆಗೆ ಟೆಂಡರ್ ನೀಡಲಾಯಿತು; ಇವರು ನಮೂದಿಸಿದ ಮೊತ್ತ ಎಷ್ಟು? (ಮಾಹಿತಿ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಿ.ಐ.ಡಿ ತನಿಖೆಗೆ ವಹಿಸಿದ ಪ್ರಕರಣಗಳ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೩೨ (೧೨೬೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಇಲ್ಲಿಯವರೆಗೂ ಸಿ.ಐ.ಡಿ ತನಿಖೆಗೆ ವಹಿಸಿದ ಪ್ರಕರಣಗಳು ಎಷ್ಟು; (ಪ್ರತಿ ಪ್ರಕರಣಗಳ ಸಂಪೂರ್ಣ ಮಾಹಿತಿ ನೀಡುವುದು)

(ಆ) ಯಾವ ಯಾವ ಪ್ರಕರಣಗಳಲ್ಲಿ ಚಾರ್ಜ್ ಶೀಟ್ ಸಲ್ಲಿಕೆಯಾಗಿವೆ ಚಾರ್ಜ್ ಶೀಟ್ ಪ್ರತಿ ನೀಡುವುದು; ಯಾವೆಲ್ಲಾ ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ; ಇದಕ್ಕೆ ಕಾರಣವೇನು; ಎಷ್ಟು ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದೆ; (ವಿವರ ನೀಡುವುದು)

(ಇ) ಈ ಮೇಲ್ಕಂಡ ಜಿಲ್ಲೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳು ವ್ಯಾಪಕವಾಗಿ ನಡೆಯುತ್ತಿದ್ದು ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

F-8

(ಈ) ಸೈಬರ್ ಅಪರಾಧಗಳನ್ನು ನಿಯಂತ್ರಿಸಲು ಪ್ರತ್ಯೇಕ ತಾಂತ್ರಿಕ ಸಶಕ್ತಿ ವಿಭಾಗಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ; ಇದ್ದಲ್ಲಿ, ಇದರ ಬಗ್ಗೆ ಕೈಗೊಂಡ ಕ್ರಮಗಳೇನು;

(ಉ) ಜನಸ್ನೇಹಿ ಪೊಲೀಸ್ ಕ್ಯೂ ಆರ್ ಕೋಡ್ ಅಡಿಯಲ್ಲಿ ಬಂದ ದೂರುಗಳು ಎಷ್ಟು; ಎಷ್ಟು ದೂರುಗಳನ್ನು ವಿಲೇವಾರಿ ಮಾಡಲಾಗಿದೆ? (ತಿಂಗಳು ಮತ್ತು ಪೊಲೀಸ್ ಠಾಣೆವಾರು ವಿವರ ನೀಡುವುದು)

## ಕಲಬುರಗಿ ಜಿಲ್ಲೆಯಲ್ಲಿರುವ ನೀರಾವರಿ ಯೋಜನೆಗಳ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೧೩೩ (೧೨೬೩) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲಬುರಗಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ನೀರಾವರಿ ಯೋಜನೆಗಳು ಜಾರಿಯಾಗಿವೆ; ಅವುಗಳಿಗೆ ಮೀಸಲಿಟ್ಟ ಅನುದಾನ ಎಷ್ಟು; ಇವುಗಳಲ್ಲಿ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗಳಿಸಲಾಗಿದೆ;

(ಆ) ಜಿಲ್ಲೆಯಲ್ಲಿ ನೀರಿನ ಲಭ್ಯತೆ ಇದ್ದರು ಅದನ್ನು ಸಮಪರ್ಕವಾಗಿ ರೈತರ ಜಮೀನುಗಳಿಗೆ ತಲುಪಿಸುವ ಒಂದೇ ಒಂದು ಯೋಜನೆಯು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಗೊಳ್ಳದಿರಲು ಕಾರಣವೇನು;

(ಇ) ಸೊನ್ನ ನೀರಾವರಿ ಯೋಜನೆಯನ್ನು ಎಷ್ಟು ಕೋಟಿ ವೆಚ್ಚದಲ್ಲಿ ಅನುಷ್ಠಾನ ಮಾಡಲಾಗಿದೆ; ಹಾಗೂ ಕಾಗಿಣಾ ಏತ ನೀರಾವರಿ ಯೋಜನೆ ಜಾರಿಗಳಿಸುವ ಬಗ್ಗೆ ಸರ್ಕಾರದ ನಿಲುವೇನು; ಮತ್ತು

ಜೇವರ್ಗಿ ಭಾಗದಲ್ಲಿ ಮೂರು ದಶಕಗಳಿಂದ ನಡೆಯುತ್ತಿರುವ ಮಲ್ಲಬಾದ ಏತ ನೀರಾವರಿ ಯೋಜನೆಗೆ ಎಷ್ಟು ಕೋಟಿ ರೂ.ಗಳನ್ನು ವ್ಯಯಿಸಲಾಗಿದೆ; ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣವೇನು ಜಿಲ್ಲೆಯ ಸಮಗ್ರ ನೀರಾವರಿ ಯೋಜನೆಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)

## ಬಿ.ಬಿ.ಎಂ.ಪಿ ಶಾಲಾ ಕಾಲೇಜುಗಳ ಶಿಕ್ಷಕರನ್ನು ಕೋರ್ಟ್ ಆದೇಶದಂತೆ ಖಾಯಂಗೊಳಿಸುವ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) :-**

೧೧೩೪ (೧೧೭೨) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಪ್ರಾಥಮಿಕ, ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜು, ಪದವಿ ಕಾಲೇಜುಗಳೆಷ್ಟು; (ವಿವರ ನೀಡುವುದು)

(ಆ) ಸದರಿ ಶಾಲಾ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಇ) ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಬೋಧಕೇತರ ಸಿಬ್ಬಂದಿ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಈ) ಸದರಿ ಸಿಬ್ಬಂದಿಗೆ ಪ್ರತಿ ತಿಂಗಳು ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಕಾರಣ ಸಹಿತ ವಿವರ ನೀಡುವುದು)

(ಉ) ಈ ಸಿಬ್ಬಂದಿ ವರ್ಗದವರನ್ನು ಕೋರ್ಟ್ ಆದೇಶದಂತೆ ಖಾಯಂ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

## ನಾಗರಭಾವಿಯ ೯ನೇ ಬ್ಲಾಕ್ ೧೧ನೇ ಕ್ರಾಸ್‌ನಲ್ಲಿ ಅಕ್ರಮ ಕಟ್ಟಡವನ್ನು ನಿರ್ಮಿಸಿರುವ ಬಗ್ಗೆ

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ):-**

೧೧೩೫ (೧೨೭೪) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ನಾಗರಭಾವಿ ೯ನೇ ಬ್ಲಾಕ್ ೧೧ನೇ ಮುಖ್ಯರಸ್ತೆಯ ರಾಜ ಕಾಲುವೆ ಮತ್ತು ಬಿ.ಬಿ.ಎಂ.ಪಿ ಪಾರ್ಕಿನ ಜಾಗವನ್ನು ಒತ್ತುವರಿ ಮಾಡಿಕೊಂಡು ಅನಧಿಕೃತವಾಗಿ ಕಟ್ಟಡವನ್ನು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು;

(ಆ) ಈ ಒತ್ತುವರಿ ಮಾಡಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿದೆಯೇ;

(ಇ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ಮಾಹಿತಿ ಒದಗಿಸುವುದು)

## ಕೆ.ಪಿ.ಎಸ್.ಸಿ ಯಲ್ಲಿನ ೨೦೧೫ರ ನೇಮಕಾತಿಗೆ ಸಂಬಂಧಿಸಿದಂತೆ ರಿಟ್ ಪಿಟಿಷನ್ ಸಂಖ್ಯೆ: ೪೪೩೨/೨೦೨೦ ಕುರಿತು

**ಡಾ. ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೩೬ (೧೨೫೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ ೪೪೩೨/೨೦೨೦ ದಿನಾಂಕ:೧೭.೦೬.೨೦೨೦ರ ತೀರ್ಪಿನಲ್ಲಿ ೨೦೧೫ರ ಬ್ಯಾಚ್‌ನ ಗೆಜೆಟೆಡ್ ಪ್ರೊಬೇಷನರ್ಸ್ ಆಯ್ಕೆ ಸಂಬಂಧ ಡಿಜಿಟಲ್ ಮೌಲ್ಯ ಮಾಪನಕ್ಕೆ ಸಂಬಂಧಪಟ್ಟಂತೆ ಟಿ.ಸಿ.ಎಸ್ ಕಂಪನಿಯ ಎಲ್ಲಾ ದತ್ತಾಂಶಗಳ ಸಮೇತ ಸಂರಕ್ಷಣೆ ಮಾಡಿ ಇಡಲು ನ್ಯಾಯಾಲಯವು ತೀರ್ಪು ನೀಡಿರುವುದು ನಿಜವೇ;

(ಆ) ಹಾಗಿದ್ದಲ್ಲಿ, ಕರ್ನಾಟಕ ಲೋಕ ಸೇವಾ ಆಯೋಗವು ಟಿ.ಸಿ.ಎಸ್ ಕಂಪನಿಗೆ ಈ ವಿಷಯವನ್ನು ಯಾವ ದಿನಾಂಕದಂದು ತಿಳಿಸಿರುತ್ತದೆ ಹಾಗೂ ಕರ್ನಾಟಕ ಲೋಕಸೇವಾ ಆಯೋಗ ಮತ್ತು ಟಿ.ಸಿ.ಎಸ್ ಕಂಪನಿಯು ಈ ಎಲ್ಲಾ ದತ್ತಾಂಶಗಳನ್ನು ಸಂರಕ್ಷಣೆ ಮಾಡಲಾಗಿದೆಯೇ;

(ಇ) ಇದರ ಬಗ್ಗೆ ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

## ೨೦೧೫ನೇ ಬ್ಯಾಚ್‌ನ ಗೆಜೆಟೆಡ್ ಪ್ರೊಬೇಷನರ್ಸ್ ೪೨೮ ಹುದ್ದೆಗಳ ನೇಮಕಾತಿ ಕುರಿತು

**ಡಾ. ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೧೧೩೭ (೧೨೫೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೧೫ನೇ ಬ್ಯಾಚ್‌ನ ಗೆಜೆಟೆಡ್ ಪ್ರೊಬೇಷನರ್ಸ್ ೪೨೮ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದು ಇವುಗಳಲ್ಲಿ ವಿವಿಧ ವರ್ಗಗಳಿಗೆ ಮೀಸಲಿಟ್ಟ ಹುದ್ದೆಗಳ ಸಂಖ್ಯೆ ಎಷ್ಟು; ಅದರಲ್ಲಿ ಆಯ್ಕೆ ಮಾಡಲಾದ ವಿವಿಧ ವರ್ಗಗಳ ಸಂಖ್ಯೆ ಎಷ್ಟು;

(ಆ) ಈ ೪೨೮ ಹುದ್ದೆಗಳ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-೧, ಪ್ರವರ್ಗ-೨ಎ ಪ್ರವರ್ಗ-೨ಬಿ, ಪ್ರವರ್ಗ-೩ಎ, ಪ್ರವರ್ಗ-೩ಬಿನ ಮೀಸಲಾತಿ ವರ್ಗದಲ್ಲಿ ಅರ್ಜಿ ಸಲ್ಲಿಸಿ, ಮೆರಿಟ್ ಆಧಾರದ ಮೇಲೆ ಸಾಮಾನ್ಯ ವರ್ಗದಲ್ಲಿ ಬರುವ ಹುದ್ದೆಗಳಿಗೆ ಆಯ್ಕೆಯಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-೧, ಪ್ರವರ್ಗ-೨ಎ ಪ್ರವರ್ಗ-೨ಬಿ, ಪ್ರವರ್ಗ-೩ಎ, ಪ್ರವರ್ಗ-೩ಬಿ ಅಭ್ಯರ್ಥಿಗಳ ಸಂಖ್ಯೆಗಳನ್ನು ಪ್ರವರ್ಗವಾರು ನೀಡುವುದು;

(ಇ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-೧, ಪ್ರವರ್ಗ-೨ಎ ಪ್ರವರ್ಗ-೨ಬಿ, ಪ್ರವರ್ಗ-೩ಎ, ಪ್ರವರ್ಗ-೩ಬಿ ಅಭ್ಯರ್ಥಿಗಳು ಸಾಮಾನ್ಯ ವರ್ಗದಲ್ಲಿ ಆಯ್ಕೆಯಾದ ನಂತರ ಅವರನ್ನು ಹೊರತು ಪಡಿಸಿ, ಸಾಮಾನ್ಯ ವರ್ಗದಲ್ಲಿ ಅರ್ಜಿ ಹಾಕಿ ಸಾಮಾನ್ಯ ವರ್ಗದಲ್ಲಿಯೇ ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ ಎಷ್ಟು?

## ತೆರಿಗೆ ಸೋರಿಕೆ ತಡೆಗಟ್ಟುವ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು):-**

೧೧೩೮ (೧೦೭೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಯಲಹಂಕ ಉಪನಗರದಲ್ಲಿ ಅಕ್ರಮ ಗುಟ್ಕಾ ವ್ಯಾಪಾರ ಮನೆಗಳಲ್ಲಿ ನಡೆಯುತ್ತಿದ್ದು, ತೆರಿಗೆ ವಂಚಿಸಿದ ಕೋಟ್ಯಾಂತರ ಮೌಲ್ಯದ ನೂರಾರು ಅಕ್ರಮ ದಾಸ್ತಾನು ಗೋಡೌನ್ ತಲೆ ಎತ್ತಿದ್ದರ ಪರಿಣಾಮ ಸರ್ಕಾರಕ್ಕೆ ಬರಬೇಕಾದ ಕೋಟ್ಯಾಂತರ ತೆರಿಗೆ ಸೋರಿಕೆಯಾಗುತ್ತಿರುವ ಕಾರಣ ಮೇಲಾಧಿಕಾರಿಗಳ ಆದೇಶದಂತೆ ದಿನಾಂಕ:೦೪.೧೧.೨೦೨೩ರಂದು ಯಲಹಂಕ ಉಪನಗರದ ೨ನೇ ಹಂತದಲ್ಲಿ ಗುಟ್ಕಾ ಅಕ್ರಮ ವ್ಯಾಪಾರ ಮತ್ತು ಕೋಟ್ಯಾಂತರ

ಮೌಲ್ಯದ ಅಕ್ರಮ ದಾಸ್ತಾನಿನ ಎಷ್ಟು ಗೋಡೌನಿನ ಮೇಲೆ ತೆರಿಗೆ ಅಧಿಕಾರಿಗಳು/ಸಂಬಂಧಪಟ್ಟ ಅಧಿಕಾರಿಗಳು ತಪಾಸನೆ ಮಾಡಿರುತ್ತಾರೆ;

(ಆ) ರೇಡ್ ಆಗಿದ್ದರೂ ಅವುಗಳನ್ನು ಜಪ್ತಿ ಮಾಡದೆ ಸೀಲ್ ಮಾಡದೆ ರೇಡ್ ಮಾಡಲು ಹೋದ ಅಧಿಕಾರಿಗಳೇ ಲಂಚ ಪಡೆದಿರುವ ಅಧಿಕಾರಿಗಳನ್ನು ಸರ್ಕಾರ ಪತ್ತೆ ಹಚ್ಚುತ್ತದೆಯೇ; ಇಂತಹ ಭ್ರಷ್ಟ ಅಧಿಕಾರಿಗಳನ್ನು ಕಡ್ಡಾಯ ನಿವೃತ್ತಿಗೊಳಿಸುವ ಬಗ್ಗೆ ಹಾಗೂ ಈ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಬಗ್ಗೆ ಸರ್ಕಾರದ ಕ್ರಮವೇನು;

(ಇ) ಯಲಹಂಕ ಉಪನಗರದಲ್ಲಿ ಗುಟ್ಕಾ ಪಾನ್ ಮಸಾಲ, ತಂಬಾಕು ಉತ್ಪನ್ನದಿಂದ ತಯಾರಿಸುವ ಎಷ್ಟು ಅನಧಿಕೃತ ವ್ಯಾಪಾರಿಗಳಿದ್ದಾರೆ; ಇದುವರೆವಿಗೆ ಎಷ್ಟು ಅಕ್ರಮ ದಾಸ್ತಾನು ವಶಪಡಿಸಿಕೊಂಡು ದಂಡ ವಿಧಿಸಲಾಗಿದೆ? (ಹೆಸರು, ವಿಳಾಸ ಸಮೇತ ವಿವರ ಒದಗಿಸುವುದು)

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಕಾ.ಸೂ–94–ಸ.ವಿ.ಮು.ಧಾರವಾಡ–400–ಪುಸ್ತಕಗಳು–ಡಿಸೆಂಬರ್–2024